ಸುಚಿಕಾ ಭೂಮಿಗೌಡ ಅವರ ಸಾಹಿತ್ಯದ ಅಧ್ಯಯನ

ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯಕ್ಕೆ ಎಂ.ಫಿಲ್. (ಕನ್ನಡ) ಪದವಿಗಾಗಿ
ಅರ್ಪಿಸಲಾಗಿದೆ.

ಸಂಶೋಧಕರು

ಪ್ರಭಾವತಿ ಎಚ್.ಬಿ

ನೋಂದಣಿ ಸಂಖ್ಯೆ: ಕೆ.ಆರ್.ಎಸ್.ಎಮ್.ಕೆ.ಎಸ್-೦೦೬೩೧

ಮಾರ್ಗದರ್ಶಕರು

ಡಾ|| ಬೋರೇಗೌಡ ಚಿಕ್ಕಮರಳಿ

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ

ವಿಜಯ ಪ್ರಥಮ ದರ್ಜೆ ಕಾಲೇಜು, ಪಾಂಡವಪುರ.

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ.ಯಿಂದ ಮಾನ್ಯತೆ ಪಡೆದಿದೆ)

ಮಂಡ್ಯ

೨೦೧೫-೧೬

ಸಬಿಹಾ ಭೂಮಿಗೌಡ ಅವರ ಸಾಹಿತ್ಯದ ಅಧ್ಯಯನ

ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯಕ್ಕೆ ಎಂ.ಫಿಲ್. (ಕನ್ನಡ) ಪದವಿಗಾಗಿ ಅರ್ಪಿಸಲಾಗಿದೆ.

ಸಂಶೋಧಕರು

ಪ್ರಭಾವತಿ ಎಚ್.ಬಿ

ನೋಂದಣಿ ಸಂಖ್ಯೆ: ಕೆ.ಆರ್.ಎಸ್.ಎಮ್.ಕೆ.ಎಸ್-೦೦೬೩೧

ಮಾರ್ಗದರ್ಶಕರು

ಡಾ|| ಬೋರೇಗೌಡ ಚಿಕ್ಕಮರಳಿ

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ

ವಿಜಯ ಪ್ರಥಮ ದರ್ಜೆ ಕಾಲೇಜು, ಪಾಂಡವಪುರ.

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ.ಯಿಂದ ಮಾನ್ಯತೆ ಪಡೆದಿದೆ)

ಮಂಡ್ಯ

೨೦೧೨-೧೩

ದೃಢೀಕರಣ ಪತ್ರ

'ಸಬಿಹಾ ಭೂಮಿಗೌಡ ಅವರ ಸಾಹಿತ್ಯದ ಅಧ್ಯಯನ' ಎಂಬ ವಿಷಯದ ಮೇಲೆ ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯದ **ಎಂ.ಫಿಲ್ (ಕನ್ನಡ) ಪದವಿಗೆ** ವಿದ್ಯಾರ್ಥಿಯಾದ **ಪ್ರಭಾವತಿ ಎಚ್.ಬಿ** ಅವರು ನನ್ನ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಯಲ್ಲಿ ಬರೆದು ಒಪ್ಪಿಸುತ್ತಿದ್ದಾರೆಂದು ಹಾಗೂ ಈ ವಿಷಯದ ಬಗ್ಗೆ ಬೇರೆ ಯಾರಿಗೂ ನಾನು ಮಾರ್ಗದರ್ಶನ ಮಾಡಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರ ಸಹಿ

(ಡಾ॥ ಬೋರೇಗೌಡ ಚಿಕ್ಕಮರಳ)

ಸಹ ಪ್ರಾಧ್ಯಾಪಕರು ಕನ್ನಡ ವಿಭಾಗ,

ವಿಜಯ ಪ್ರಥಮ ದರ್ಜೆ ಕಾಲೇಜು, ಪಾಂಡವಪುರ.

ದಿನಾಂಕ: 25-07-2013

ಸ್ಥಳ : ಮಂಡ್ಯ

ಪ್ರಮಾಣ ಪತ್ರ

'ಸಬಿಹಾ ಭೂಮಿಗೌಡ ಅವರ ಸಾಹಿತ್ಯ ಅಧ್ಯಯನ' ಎಂಬ ವಿಷಯದ ಮೇಲೆ ಈ ನಿಬಂಧವನ್ನು **ಡಾ॥ ಬೋರೇಗೌಡ ಚಿಕ್ಕಮರಳಿ** ಅವರ ಮಾರ್ಗದರ್ಶನದಲ್ಲಿ ನನ್ನ ಸಂಶೋಧನೆಯ ಫಲವಾಗಿ ರಚಿಸಲ್ಪಟ್ಟು ಕನ್ನಡ ವಿಶ್ವವಿದ್ಯಾನಿಲಯದ **ಎಂ.ಫಿಲ್. (ಕನ್ನಡ) ಪದವಿಗೆ** ಅರ್ಪಿಸುತ್ತಿದ್ದೇನೆ.

ಈ ನಿಬಂಧವನ್ನು ಹಿಂದಿನ ವರ್ಷಗಳಲ್ಲಿ ಯಾರೂ ಇಲ್ಲಿಯವರೆಗೆ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿಲ್ಲವೆಂದು ನಾನು ಇಲ್ಲಿ ಪ್ರಮಾಣೀಕರಿಸುತ್ತಿದ್ದೇನೆ.

ಪ್ರಭಾವತಿ. ಎಚ್. ಬಿ.

ಪ್ರಭಾವತಿ ಎಚ್.ಬಿ.

ದಿನಾಂಕ : 24. 07. 2013

ಎಂ.ಫಿಲ್. ವಿದ್ಯಾರ್ಥಿ

ಸ್ಥಳ : ಮಂಡ್ಯ.

ನೋಂದಣಿ ಸಂಖ್ಯೆ: ಕೆ.ಆರ್.ಎಸ್.ಎಮ್.ಕೆ.ಎಸ್–೦೦೬೩೧

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಆಧುನಿಕ ಕನ್ನಡ ಮಹಿಳಾ ಸಾಹಿತ್ಯವು ತನ್ನ ವ್ಯಾಪ್ತಿಯಲ್ಲಿ ಸಾಹಿತ್ಯದ ಎಲ್ಲಾ ಪ್ರಕಾರಗಳನ್ನು ಸೇರಿಸಿಕೊಂಡು ಆಶಾದಾಯಕ ಪ್ರಗತಿ ಹೊಂದುತ್ತಿದೆ. ಕಥಾ ಸಾಹಿತ್ಯಕ್ಕೆ ಮಾತ್ರ ಹೆಚ್ಚು ಒಗ್ಗಿಕೊಂಡಿದ್ದ ಮಹಿಳಾ ಸಾಹಿತಿಗಳು ಇಂದು ಕವನ, ನಾಟಕ, ಪ್ರಬಂಧ, ವಿಮರ್ಶೆ, ಸಂಶೋಧನೆ, ಸಂಪಾದನೆ ಮುಂತಾದ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಧನೆ ಮಾಡುತ್ತಿದ್ದಾರೆ. ಸಾಹಿತ್ಯದ ವಸ್ತು ಮತ್ತು ವಿಷಯದ ಆಯ್ಕೆಯಲ್ಲು ವೈವಿಧ್ಯತೆಯನ್ನು ಕಾಣಬಹುದಾಗಿದ್ದು ಅನೇಕ ಮಹಿಳಾ ಸಾಹಿತಿಗಳು ಮತ್ತು ಸ್ತ್ರೀವಾದಿ ಚಿಂತಕಿಯರು ಮೌಲ್ಯಯುತವಾದ ಸಾಹಿತ್ಯ ಸೃಷ್ಟಿಗೆ ಕಾರಣರಾಗಿದ್ದಾರೆ.

ಸಬಿಹಾ ಭೂಮಿಗೌಡ ಅವರನ್ನು ಸ್ತ್ರೀಸಂವೇದನೆಯನ್ನು ಹೊಂದಿರುವ ಪ್ರಮುಖ ಸಾಹಿತಿಯಾಗಿ ಇಂದು ಗುರುತಿಸಬಹುದು. ವರ್ತಮಾನದ ಬದುಕನ್ನು, ಅದರ ಸೂಕ್ಷ್ಮ ನೋಟಗಳನ್ನು ಬಹಳ ಪರಿಣಾಮಕಾರಿಯಾಗಿ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. 'ಕಡಲ ತಡಿಯ ಮನೆ' ಕಥಾ ಸಂಕಲನದ ಬೆನ್ನುಡಿಯಲ್ಲಿ ಡಾ. ಸತ್ಯನಾರಾಯಣ ಮಲ್ಲಿಪಟ್ಟಣ ಅವರು "ಇಂದಿನ ಸರಕು ಸಂಸ್ಕೃತಿಯ ಬದುಕಿನಲ್ಲಿ ಸಾಹಿತ್ಯ ಸೃಷ್ಟಿಯನ್ನು ಗಂಭೀರವಾಗಿ ಪರಿಗಣಿಸಿ, ತಾನು ಸೃಷ್ಟಿಸುತ್ತಿರುವ ಸಾಹಿತ್ಯದ ಬಗೆಗೆ ಮಮಕಾರವಿಲ್ಲದೆ, ಲಾಭಬಡುಕತನದ ಆಮಿಷಕ್ಕೆ ಒಳಗಾಗದೆ ತಣ್ಣಗೆ ಬರೆಯುತ್ತಾ ಬರುವವರು ವಿರಳವಾಗಿದ್ದಾರೆ. ಅಂಥ ವಿರಳರಲ್ಲಿ ಒಬ್ಬರು ಡಾ.ಸಬಿಹಾ" ಎಂದು ಪ್ರಶಂಸಿದ್ದಾರೆ. ಸಾಹಿತಿಗಳಲ್ಲಿ ಮುಖ್ಯವಾಗಿ ಮಹಿಳಾ ಸಾಹಿತಿಗಳು ಮಹಿಳೆಯರ ಸಮಸ್ಯೆ, ನೋವು, ನಲಿವನ್ನು ಕುರಿತು, ದಲಿತರು ಅವರ ಜೀವನ ಪದ್ಧತಿ, ಶೋಷಣೆಗೆ ಬಲಿಯಾಗುತ್ತಿರುವ ರೀತಿ ಕುರಿತು, ಅಲ್ಪ ಸಂಖ್ಯಾತರು ಅವರ ಬದುಕನ್ನು ಕುರಿತು, ಪುರುಷ ಸಾಹಿತಿಗಳು ಪುರುಷಪ್ರಧಾನ ವ್ಯವಸ್ಥೆಯನ್ನು ಸಮರ್ಥಿಸುತ್ತ ಸಾಹಿತ್ಯ ರಚಿಸುತ್ತಾರೆ. ಆದರೆ ಸಬಿಹಾ ಅವರು ಇವರೆಲ್ಲರಿಗಿಂತ ಭಿನ್ನ ಮತ್ತು ವಿಶಿಷ್ಟವಾಗಿ ಕಾಣುತ್ತಾರೆ. ಏಕೆಂದರೆ ಇಂಥ ಸೀಮಿತ ಪರಿಮಿತಿಯನ್ನು ದಾಟಿ ಸಾಹಿತ್ಯ ರಚಿಸುವ ಕಾರ್ಯದಲ್ಲಿ ಅವರು ತೊಡಗಿರುವುದು ಅವರ ಕೃತಿಗಳ ಮೂಲಕ ತಿಳಿಯುತ್ತದೆ.

ಮಂಗಳೂರಿನ ಮಂಗಳ ಗಂಗೋತ್ರಿಯಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಸಬಿಹಾ ಭೂಮಿಗೌಡ ಅವರು ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಉತ್ತಮ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಇವರು ಸಾಹಿತ್ಯ ಪ್ರಕಾರಗಳಾದ ಕಥೆ, ಕವನ, ವಿಮರ್ಶೆ, ಪ್ರಬಂಧ, ಜೀವನ ಚರಿತ್ರೆ– ಮುಂತಾದವುಗಳನ್ನು ರಚಿಸಿದ್ದಾರೆ. ಅಲ್ಲದೆ ಸಂಪಾದಕರಾಗಿ ಅನೇಕ ಕೃತಿಗಳನ್ನು ಸಂಪಾದಿಸಿದ್ದಾರೆ. ಅನೇಕ ಸಂಶೋಧನಾ ಕೃತಿಗಳನ್ನು ರಚಿಸಿದ್ದಾರೆ. ವಿವಿಧ ಪತ್ರಿಕೆ ಮತ್ತು ನಿಯತಕಾಲಿಕೆಗಳಲ್ಲಿ ಇವರ ಹತ್ತು ಹಲವು ಲೇಖನಗಳು ಪ್ರಕಟಗೊಂಡಿವೆ.

ಮಹಿಳಾಪರ ಚಿಂತಕಿಯಾಗಿರುವ ಸಬಿಹಾ ಅವರ ಆಸಕ್ತಿ ಕೇಂದ್ರ ಮಹಿಳಾ ಪ್ರಪಂಚವೇ ಆಗಿದೆ. ಅವರ ಸಾಹಿತ್ಯವು ಮುಖ್ಯವಾಗಿ ಸ್ತ್ರೀಜೀವನ ವ್ಯವಸ್ಥೆ, ಸಮಾಜ, ಧರ್ಮಗಳ ಅಂಶಗಳನ್ನು ಮುಖ್ಯವಾಗಿ ಚಿತ್ರಿಸಿದ್ದಾರೆ. ಅದರಲ್ಲೂ ಹೆಣ್ಣಿನ ಜೀವನವನ್ನು ಚಿತ್ರಿಸುವ ಸಂದರ್ಭದಲ್ಲಿ ಕುಟುಂಬ ಮತ್ತು ಸಮಾಜದಲ್ಲಿ ಆಕೆಯ ಸ್ಥಾನ, ದಾಂಪತ್ಯ ಜೀವನ, ಮನಸ್ಸು ಮತ್ತು ಭಾವನೆಗಳು ಮುಂತಾದ ಅನೇಕ ಅಂಶಗಳನ್ನು ಗುರುತಿಸಿದ್ದಾರೆ. ಇದುವರೆಗೂ ಚರ್ಚೆಗೆ ಬಾರದಿರುವ ಸಣ್ಣ ಮತ್ತು ಸೂಕ್ಷ್ಮ ವಿಚಾರಗಳನ್ನು ಗಂಭೀರವಾಗಿ

ಪರಿಗಣಿಸಿರುವುದು ಮಹತ್ವದ ಬೆಳವಣಿಗೆಯಾಗಿದೆ. ತಮ್ಮ ಸಾಹಿತ್ಯದಲ್ಲಿ ಸಾಮಾಜಿಕ ಜೀವನವನ್ನು ಚಿತ್ರಿಸುವ ಸಂದರ್ಭದಲ್ಲಿ ಹೊಸ ಸಮಾಜ ಮತ್ತು ಸಂಸ್ಕೃತಿಯ ಉದಯದ ಬಯಕೆ ಹೊಂದಿದ್ದಾರೆ. ಸಾಮಾಜಿಕ ಕಳಕಳಿ ಹೊಂದಿರುವ ಇವರು ಕುಟುಂಬಗಳು ಆರೋಗ್ಯದಾಯಕವಾಗಿರಬೇಕು, ಜನರಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ, ಸಹಕಾರ, ಸೌಹಾರ್ದತೆಗಳು ಇರಬೇಕು, ಜಾತಿ, ಧರ್ಮಗಳ ಭೇದ ಮರೆತು ಐಕ್ಯತೆ ಸಾಧಿಸಬೇಕೆಂದು ಹೇಳುತ್ತಾರೆ. ಹಾಗಾಗಿಯೇ ಅವರ ಹೆಚ್ಚು ಕಥೆಗಳಲ್ಲಿನ ಪಾತ್ರಗಳು ಜಾತಿ, ಧರ್ಮವನ್ನು ಮೀರಿ ನಿಂತು ಜೀವನವನ್ನು ನೋಡುತ್ತವೆ. ಈ ಎಲ್ಲ ಅಂಶಗಳಿಂದ ಪ್ರಸ್ತುತ ಸಂದರ್ಭಕ್ಕೆ ಸಬಿಹಾ ಅವರ ಸಾಹಿತ್ಯ ಬಹಳ ಮುಖ್ಯ ಎನಿಸುತ್ತದೆ. ಇದುವರೆಗೆ ಸಬಿಹಾ ಭೂಮಿಗೌಡ ಅವರ ಸಾಹಿತ್ಯದ ಸಮಗ್ರ ಅಧ್ಯಯನ ನಡೆದಿಲ್ಲ. ಅದನ್ನು ಅಧ್ಯಯನ ಮಾಡುವ ಮೊದಲ ಅವಕಾಶ ನನಗೆ ದೊರೆತಿರುವುದು ಸಂತೋಷವನ್ನು ಉಂಟುಮಾಡಿದೆ.

'ಸಬಿಹಾ ಭೂಮಿಗೌಡ ಅವರ ಸಾಹಿತ್ಯದ ಅಧ್ಯಯನ' ಎಂಬ ನಿಬಂಧದಲ್ಲಿ ಅವರ ಸಾಹಿತ್ಯದಲ್ಲಿರುವ ಮಹಿಳಾ ಪರ ಚಿಂತನೆ ಮತ್ತು ಕಾಳಜಿಗಳು, ಸಾಮಾಜಿಕ ಅಂಶಗಳು, ಧಾರ್ಮಿಕ ಅಂಶಗಳು, ತತ್ವ ನಿಲುವು, ಆಸಕ್ತಿ ಮುಂತಾದ ಅಂಶಗಳನ್ನು ವಿಶ್ಲೇಷಣೆಯ ಮೂಲಕ ಅನಾವರಣಗೊಳಿಸಿ ಪ್ರಸ್ತುತ ಸಂದರ್ಭದಲ್ಲಿ ಅವುಗಳ ಮೌಲ್ಯ ಮತ್ತು ಮಹತ್ವವನ್ನು ತಿಳಿಸುವುದು ಅಧ್ಯಯನದ ಉದ್ದೇಶವಾಗಿದೆ.

'ಸಬಿಹಾ ಭೂಮಿಗೌಡ ಅವರ ಸಾಹಿತ್ಯದ ಅಧ್ಯಯನ' ಎಂಬ ನಿಬಂಧವು ಮುಖ್ಯವಾಗಿ ಆಧುನಿಕ ಕನ್ನಡ ಮಹಿಳಾ ಸಾಹಿತ್ಯದ ಒಟ್ಟು ನೋಟ, ಸಬಿಹಾ ಭೂಮಿಗೌಡ ಅವರ ಬದುಕು ಬರಹ, ಅವರ ಸಾಹಿತ್ಯ ಚಿಂತನೆಗಳನ್ನು ತನ್ನ ವ್ಯಾಪ್ತಿಯಲ್ಲಿ ಸೇರಿಸಿಕೊಂಡಿದೆ.

ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಬೆಳೆದು ಬಂದ ದಾರಿಯನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಪ್ರಾಚೀನ ಸಾಹಿತ್ಯ ಒಳಗೊಂಡಂತೆ ಆಧುನಿಕ ಸಾಹಿತ್ಯದಲ್ಲಿ ತಿರುಮಲಾಂಬ ಅವರಿಂದ ಇಂದಿನವರೆಗಿನ ಮಹಿಳಾ ಸಾಹಿತ್ಯದ ಸಂಕ್ಷಿಪ್ತ ನೋಟವನ್ನು ಇಲ್ಲಿ ಕಾಣಬಹುದು.

ಮಹಿಳಾ ಸಾಹಿತ್ಯದಲ್ಲಿ ಇಂದು ಪ್ರಗತಿಪರ ಸಾಹಿತಿ ಮತ್ತು ಮಹಿಳಾ ಚಿಂತಕಿ ಆಗಿರುವ ಸಬಿಹಾ ಭೂಮಿಗೌಡ ಅವರ ಜೀವನ, ವಿದ್ಯಾಭ್ಯಾಸ, ಬರವಣಿಗೆ ಬಗೆಗಿನ ಸಂಕ್ಷಿಪ್ತ ಅಂಶಗಳನ್ನು ತಿಳಿಯಬಹುದು. ಅಧ್ಯಯನದ ಕೇಂದ್ರ ಭಾಗ 'ಸಬಿಹಾ ಭೂಮಿಗೌಡ ಅವರ ಸಾಹಿತ್ಯ ಚಿಂತನೆ'. ಇಲ್ಲಿ ಅವರ ಸಾಹಿತ್ಯ ಕೃತಿಗಳನ್ನು ಪ್ರಕಾರಕ್ಕನುಗುಣವಾಗಿ ವಿಂಗಡಿಸಿಕೊಂಡು ವಿವಿಧ ಉಪ ಅಧ್ಯಾಯಗಳನ್ನು ಮಾಡಿಕೊಂಡು ವಿಶ್ಲೇಷಣೆ ಮಾಡುವುದರ ಮೂಲಕ ಉತ್ತಮ ಮೌಲ್ಯಗಳನ್ನು ಅನಾವರಣಗೊಳಿಸಲಾಗಿದೆ.

ಕಥಾ ಸಾಹಿತ್ಯದಲ್ಲಿ ಮುಖ್ಯವಾಗಿ ಮಹಿಳಾ ಜೀವನ, ಕುಟುಂಬ, ಸಮಾಜ, ಧರ್ಮಕ್ಕೆ ಸಂಬಂಧಿದ ವಿಚಾರಗಳನ್ನು ಮುಖ್ಯವಾಗಿ ಗಮನಿಸಬಹುದು. ಮಹಿಳಾ ಜೀವನದ ಸೂಕ್ಷ್ಮ ಒಳನೋಟಗಳನ್ನು ಗ್ರಹಿಸಿ ದಾಖಲಿಸಿದ್ದಾರೆ. ಆಕೆಯ ಮಾನಸಿಕ ಹಿಂಸೆಗೆ, ಭಾವನೆಗಳಿಗೆ ಸ್ಪಂಧಿಸುವ ಕೆಲಸ ಮಾಡಿದ್ದಾರೆ. ಕುಟುಂಬ ಮತ್ತು ಸಮಾಜಗಳಲ್ಲಿ ಪ್ರೀತಿ, ಸ್ನೇಹ, ಸಹಬಾಳ್ವೆ, ಅನ್ಯೋನ್ಯತೆ ಇರಬೇಕೆಂದು ಬಯಸಿ ಆದರ್ಶ ಸಮಾಜವನ್ನು ಕಥೆಗಳಲ್ಲಿ ಚಿತ್ರಿಸಿದ್ದಾರೆ. ಕೋಮುದಳ್ಳುರಿ ಹೆಚ್ಚಾಗಿರುವ ಇಂದಿನ ಸಂದರ್ಭದಲ್ಲಿ ಜಾತಿ, ಧರ್ಮ, ಭೇದ ಮರೆತು ಅದರಾಚೆಗಿನ ಸುಂದರ ಮತ್ತು ಅನ್ಯೋನ್ಯತೆಯ ಬದುಕು ಸಾಧ್ಯ ಎಂಬುದನ್ನು ತೋರಿಸಿದ್ದಾರೆ. ಕಥಾ ಸಾಹಿತ್ಯದ ಅಧ್ಯಯನದಲ್ಲಿ ಈ ಎಲ್ಲಾ ಅಂಶಗಳನ್ನು ಅನಾವರಣಗೊಳಿಸಲಾಗಿದೆ.

ಸಬಿಹಾ ಅವರ ಕವನಗಳಲ್ಲಿ ಮುಖ್ಯವಾಗಿ ಹೆಣ್ಣಿನ ಜೀವನ, ಅಡಿಗೆಮನೆ, ಸಮಾಜ, ಸಂಬಂಧಗಳು, ಆನಂದ, ಆತಂಕ, ತಲ್ಲಣಗಳನ್ನು ಕಾಣಬಹುದು. ಎಷ್ಟೋ ಕವನಗಳು ಅವರ ಆತ್ಮ

ಚರಿತ್ರೆಯ ಪುಟಗಳಂತಿವೆ. ಅನೇಕ ಕವನಗಳು ಅಡಿಗೆ ಮನೆಯಲ್ಲೇ ಹುಟ್ಟಿಕೊಂಡಿದ್ದು ಅಲ್ಲಿ ಕೆಲಸ ಮಾಡುವಾಗ ಆಕೆಗಾಗುವ ಖುಷಿ, ಹಿಂಸೆ, ನೋವು, ಬೇಸರ, ಅಲ್ಲಿನ ವಸ್ತುಗಳ ಮೇಲಿನ ಮೋಹ, ಹಳೆಯ ನೆನಪುಗಳು ಎಲ್ಲವು ಕಾಣಸಿಗುತ್ತವೆ. ಸಂಬಂಧಗಳ ಮಹತ್ವ ಸಾಮಾಜಿಕ ಕಳಕಳಿಯನ್ನು ಸಹ ಅವರ ಕವನಗಳಲ್ಲಿ ಗುರುತಿಸಲಾಗಿದೆ.

ಚಿಂತನ ಪ್ರಬಂಧಗಳು ವ್ಯಕ್ತಿಗೆ ಸಂತೋಷ ಮತ್ತು ಮನೋವಿಕಾಸವನ್ನು ಉಂಟುಮಾಡುತ್ತವೆ. ಅಲ್ಲು ಸಹ ಹೆಣ್ಣಿನ ಜೀವನ, ಸಮಾಜ, ವ್ಯಕ್ತಿಗಳು, ಪರಿಸರ ಮುಂತಾದ ಅಂಶಗಳನ್ನು ಕುರಿತು ತಮ್ಮ ಚಿಂತನ ಪ್ರಬಂಧ ದಾಖಲಿಸಿದ್ದಾರೆ. ಅವುಗಳನ್ನು ಇಲ್ಲಿ ಅನಾವರಣಗೊಳಿಸಲಾಗಿದೆ.

'ಲೀಲಾಬಾಯಿ ಕಾಮತ್' ಮತ್ತು 'ಕುಡ್ಪಿ ವಾಸುದೇವ ಶಣೈ' ಅವರ ಜೀವನ ಚರಿತ್ರೆಗಳಲ್ಲಿ ಅವರ ಜೀವನ ಧೋರಣೆ, ಸಾಧನೆ, ತತ್ವ, ಚಿಂತನೆಗಳು, ಆದರ್ಶಗಳನ್ನು ಕಟ್ಟಿಕೊಟ್ಟಿದ್ದು ಅದರಲ್ಲಿ ಮುಖ್ಯ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ. ವಿಮರ್ಶಾ ಕೃತಿಗಳಲ್ಲಿ ಸಾಹಿತ್ಯಕ ಮತ್ತು ಸಾಮಾಜಿಕ ವಿಮರ್ಶೆಗಳು, ಅವರು ವಿಮರ್ಶೆಗೆ ಆಯ್ದುಕೊಂಡಿರುವ ವಸ್ತು, ಅವರ ನಿಲುವು ಮುಂತಾದ ಅನೇಕ ಅಂಶಗಳನ್ನು ತಿಳಿಸಲಾಗಿದೆ.

ಒಟ್ಟಾರೆಯಾಗಿ ಈ ನಿಬಂಧವು ಸಬಿಹಾ ಅವರ ಸಾಹಿತ್ಯವನ್ನು ವಿಶ್ಲೇಷಿಸುವುದರ ಮೂಲಕ ಅವರ ಸಾಹಿತ್ಯದ ಅಧ್ಯಯನ ಪ್ರಸ್ತುತ ಸಂದರ್ಭ ಮತ್ತು ಸಮಾಜಕ್ಕೆ ಎಷ್ಟು ಅವಶ್ಯಕವಿದೆ, ಎಂದು ತಿಳಿಸುವುದರ ಜೊತೆಗೆ ಅವರ ಚಿಂತನೆ, ಧೋರಣೆ, ಧ್ಯೇಯ ಆದರ್ಶಗಳ ಮಹತ್ವವನ್ನು ಅನಾವರಣಗೊಳಿಸುತ್ತದೆ.

ಅಧ್ಯಾಯ- ೨
ಆಧುನಿಕ ಕನ್ನಡ ಮಹಿಳಾ ಸಾಹಿತ್ಯದ ಒಟ್ಟು ನೋಟ

ಸಾಹಿತ್ಯ ಎಂಬುದು ಜೀವನದ ಅನುಭವ ಮತ್ತು ದೃಷ್ಟಿಯನ್ನು ಅಭಿವ್ಯಕ್ತಿಗೊಳಿಸುವ ಪ್ರಮುಖ ಮಾಧ್ಯಮ. ಸಾಹಿತ್ಯ ಮತ್ತು ಜೀವನದ ಸಂಬಂಧ ವ್ಯಾಪಕ ಮತ್ತು ನಿಕಟವಾದುದು. ಅದು ಸಮಾಜ ಮತ್ತು ವ್ಯಕ್ತಿಯ ಜೀವನದ ಎಲ್ಲಾ ಸಂವೇದನೆಗಳಿಗೆ ಸ್ಪಂಧಿಸುತ್ತದೆ. ಹಾಗಾಗಿಯೇ ಇಂದಿಗೂ ಎಂದೆಂದಿಗೂ ಮಹತ್ವ ಎನಿಸುತ್ತದೆ. ಕನ್ನಡದಲ್ಲಿ ಅಂಥ ಮಹತ್ವದ, ವಿಪುಲವಾದ ಸಾಹಿತ್ಯ ರಾಶಿಯಿದ್ದು, ಅದು ಹೊಸ ಬದಲಾವಣೆಗಳೊಂದಿಗೆ ಬೆಳೆಯುತ್ತಿರುವುದು ಹೆಮ್ಮೆಯ ಸಂಗತಿ. ಅದರಲ್ಲಿ ಅಗ್ರ ಸ್ಥಾನವಿರುವುದು ಜನಪದ ಸಾಹಿತ್ಯಕ್ಕೆ. ಆ ಜನಪದ ಸಾಹಿತ್ಯವನ್ನು ಗಮನಿಸಿದಾಗ ಅವುಗಳ ರಚನೆಯಲ್ಲಿ ಮಹಿಳೆಯರ ಪಾತ್ರವೇ ಅಧಿಕ ಎಂಬುದು ಕಂಡುಬರುತ್ತದೆ. ಆದರೆ ಶಿಷ್ಟ ಸಾಹಿತ್ಯದ ರಚನೆಯಲ್ಲಿ ಅವರು ದೂರ ಉಳಿದದ್ದು ಅಸಹಜ ಬೆಳವಣಿಗೆಯಾಗಿ ತೋರುತ್ತದೆ. ನಂತರದಲ್ಲಿ ಮಹಿಳೆ ತನ್ನನ್ನು ಬರಹದಲ್ಲಿ ತೊಡಗಿಸಿಕೊಂಡು ಅದರ ಉಳಿವು ಮತ್ತು ಪ್ರಚಾರಕ್ಕಾಗಿ ಹೋರಾಡಬೇಕಾದ ವಾತಾವರಣ ಸೃಷ್ಟಿಯಾಯಿತು. ಇದರಿಂದಾಗಿ ಸರಿಯಾದ ದಾಖಲೆಗಳಿಲ್ಲದೆ ಮಹಿಳಾ ಸಾಹಿತ್ಯ ಚರಿತ್ರೆಯನ್ನು ಗುರುತಿಸುವುದು ಕಷ್ಟವಾಗಿದೆ. ಮಹಿಳಾ ಸಾಹಿತ್ಯ ಎಂಬುದಕ್ಕೆ ಅಸ್ತಿತ್ವವಾದರೂ ಇದೇಯೇ, ಇದ್ದರೆ ಅದನ್ನು ಖಚಿತಪಡಿಸುವ ದಾಖಲೆಗಳು ಏನಾದವು ಎಂಬ ಪ್ರಶ್ನೆಗಳನ್ನು ಮಹಿಳಾ ಅಧ್ಯಯನಕಾರರು ಎದುರಿಸುವಂತಾಗಿದೆ.

"ಆಧುನಿಕ ಕನ್ನಡ ಸಾಹಿತ್ಯದ ಮೊದಮೊದಲ ಮಹಿಳಾ ಲೇಖಕಿಯರಲ್ಲಿ ಒಬ್ಬರಾದ ಶ್ಯಾಮಲಾದೇವಿಯವರು ಇಂಥದೊಂದು ಪ್ರಶ್ನೆಯನ್ನೆತ್ತಿ ಸೂಕ್ಷ್ಮವಾಗಿ ಪ್ರತಿಕ್ರಿಯಿಸಿದ್ದಾರೆ. ನಮ್ಮ ಕರ್ನಾಟಕ ಕವಿಕುಲದಲ್ಲಿ ನಾರಿಯರ ಹೆಸರೇ ಕೇಳಿಬರುವುದಿಲ್ಲ. ಇದ್ದರೆ ಒಂದೆರಡಿರಬಹುದು. ಈ ಪರಿಸ್ಥಿತಿಗೆ ಆಗಿನ ಸಮಾಜ ಪದ್ಧತಿಯಲ್ಲಿ ಸ್ತ್ರೀಗೆ ಇದ್ದ ನಿಕೃಷ್ಟತೆ, ನಿರಕ್ಷರತೆ, ಪ್ರೋತ್ಸಾಹವಿಹೀನತೆ ಮೊದಲಾದವೇ ಕಾರಣವೆಂಬುದು ನಿಸ್ಸಂದೇಹ. ಇದು ನಮ್ಮ ಸಾಹಿತ್ಯದ ಬೆಳವಣಿಗೆಯನ್ನು ಅರ್ಧಕ್ಕರ್ಧದಷ್ಟು ಕುಗ್ಗಿಸಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ' ಎಂಬ ಅವರ ಮಾತಿನಲ್ಲಿ ಶಿಷ್ಟ ಸಾಹಿತ್ಯದಲ್ಲಿ ಪಾಲುಗೊಳ್ಳುವಲ್ಲಿ ಮಹಿಳೆಯರಿಗಿದ್ದ ಸಮಸ್ಯೆಯ ಪ್ರಸ್ತಾಪವಿದೆ. ಅದರಲ್ಲೂ ಮಹಿಳೆಯ ಸಾಮರ್ಥ್ಯದ ಅಭಿವ್ಯಕ್ತಿಗೂ ಸಾಮಾಜಿಕ ಸಂದರ್ಭಕ್ಕೂ ಸಂಬಂಧವಿರುವುದನ್ನು ಗಮನಿಸಿದ್ದಾರೆಂಬುದು ಅವರ ಸೂಕ್ಷ್ಮತೆಯನ್ನು ಸ್ಪಷ್ಟಪಡಿಸುವಂಥದು."[೧]

ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆಯ ಹೊರಟ ನಮ್ಮ ವಿದ್ವಾಂಸರು ಕಠಿಣ ಪರಿಶ್ರಮದಿಂದ ಅದನ್ನು ಸಾಧಿಸಿದ್ದಾರೆ. ಆದರೆ 'ಮಹಿಳಾ ಸಾಹಿತ್ಯ'ವನ್ನು ಸಂಕಲಿಸುವ ಕೆಲಸದಲ್ಲಿ ಪ್ರಾಥಮಿಕ ಆಸಕ್ತಿಯನ್ನೂ ತೋರದೆ ಸುಮ್ಮನಾದದ್ದು ವಿಷಾದವೆನಿಸುತ್ತದೆ. ಆದರೂ ಮಹಿಳಾ ಅಧ್ಯಯನಕಾರರು ಮಹಿಳಾ ಸಾಹಿತ್ಯವನ್ನು ಸಂಕಲಿಸುವ ಪ್ರಾಥಮಿಕ ಕೆಲಸಗಳಲ್ಲಿ ತೊಡಗಿ ಯಶಸ್ಸನ್ನು ಸಾಧಿಸಿದ್ದಾರೆ. ವಿಜಯಾದಬ್ಬೆ, ಬಿ.ಎನ್.ಸುಮಿತ್ರಾಬಾಯಿ, ಎನ್.ಗಾಯತ್ರಿ, ನೇಮಿಚಂದ್ರ, ಶ್ರೀವಳ್ಳಿ ಮೊದಲಾದವರು ಕನ್ನಡ ಆಧುನಿಕ ಸಾಹಿತ್ಯದ ಆದಿ ಲೇಖಕಿಯರಾದ ತಿರುಮಲಾಂಬ, ಕಲ್ಯಾಣಮ್ಮ, ಶ್ಯಾಮಲಾದೇವಿ, ಬೆಳಗೆರೆ ಜಾನಕಮ್ಮ, ಕಾತ್ಯಾಯಿನಿ, ಸರಸ್ವತಿಬಾಯಿ ರಾಜವಾಡೆ, ಎಚ್.ವಿ.ಸಾವಿತ್ರಮ್ಮ ಮೊದಲಾದವರನ್ನು ಕುರಿತ

ಮಾಹಿತಿಗಳನ್ನು ಅವರ ಬರಹಗಳನ್ನು ಕ್ರಮವಾಗಿ ಶೋಧಿಸಿ 'ವಾಚಿಕೆ'ಗಳನ್ನು ಸಿದ್ಧಪಡಿಸಿಸುವ ಕೆಲಸದಲ್ಲಿ ಶ್ರಮಿಸಿದರು.

ವಚನಕಾರ್ತಿಯರನ್ನು ಸಾಹಿತ್ಯ ರಚನೆ ಮಾಡಿದ ಮೊದಲ ಮಹಿಳಾ ಸಾಹಿತಿಗಳಾಗಿ ಗುರುತಿಸಬಹುದು. ಇವರು ತಮ್ಮ ಸಾಮಾಜಿಕ ಸಾಂಸ್ಕೃತಿಕ ಅನುಭವ ವೈವಿಧ್ಯವನ್ನು ವಚನರೂಪಗಳಲ್ಲಿ ಅಭಿವ್ಯಕ್ತಿಸಿದರು. ಅನುಭವ ಮಂಟಪದಲ್ಲಿ ಸ್ತ್ರೀ ಪುರುಷರು ಸರಿಸಮಾನವಾಗಿ ಒಂದೆಡೆ ಕಲೆತು ಚರ್ಚಿಸುವ ಅವಕಾಶ ಒದಗಿ ಪುರುಷನಿಗೆ ಸರಿಸಮಾನವಾದ ಚಿಂತನೆ ನಡೆಸಲು ಸಾಧ್ಯವಾಯಿತು. ವಚನ ಸಾಹಿತ್ಯದ ನಂತರ ಚಿಕ್ಕದೇವರಾಜನ ಆಶ್ರಯದಲ್ಲಿ ಸಂಚಿಹೊನ್ನಮ್ಮ ಹಾಗೂ ಶೃಂಗಾರಮ್ಮ ಕಾಣಿಸಿಕೊಂಡರು. ಹೊನ್ನಮ್ಮ ತನ್ನ ಪರಂಪರೆಯಿಂದ ಬಂದ ಸಾಂಪ್ರದಾಯಿಕ ಮೌಲ್ಯಗಳನ್ನು ಪುರಸ್ಕರಿಸುತ್ತಾ ಪುರುಷಪ್ರಧಾನ ಚಿಂತನೆಗಳಿಂದ ಹೊರಬರಲೇ ಇಲ್ಲ. ತನ್ನ 'ಹದಿಬದೆಯ ಧರ್ಮ'ದಲ್ಲಿ ಪುರುಷಪ್ರಧಾನ ಚಿಂತನೆಗಳಿಂದ ಗಮನ ಸೆಳೆಯುತ್ತಾಳೆ. ದಾಂಪತ್ಯ ಜೀವನದ ಸೌಹಾರ್ದತೆಗೆ ಗಂಡಿನ ಜವಾಬ್ದಾರಿ ಇದೆ ಎಂದು ಚಿಂತಿಸಿದ ಹೊನ್ನಮ್ಮ ಅದನ್ನು ಘೋಷವಾಗಿ ಹೇಳದಿದ್ದರೂ ಪಿಸುಮಾತಿನ ಎಚ್ಚರಿಕೆ ನೀಡಿದ್ದಾಳೆ. ಅದನ್ನು ಗಮನಿಸಿದ ಕೆಲವು ಮಹಿಷಿಯರು ಈಕೆಯ ಬಗ್ಗೆ "ಸಮಾಜದಲ್ಲಿ ಸಾಮಾನ್ಯ ಸ್ತ್ರೀಗಾಗುವ ಅನ್ಯಾಯವನ್ನು ಕಂಡು ನೊಂದವಳು. ಆದರೂ ಅದನ್ನು ಧೈರ್ಯವಾಗಿ ಹೇಳುವ ಸಾಹಸ ಅವಳಲ್ಲಿರಲಿಲ್ಲ"[೨] ಎಂದಿದ್ದಾರೆ.

'ಪದ್ಮಿನೀ ಕಲ್ಯಾಣ' ಬರೆದ ಶೃಂಗಾರಮ್ಮ ಚಿಕ್ಕದೇವರಾಜನ ಆಸ್ಥಾನದಲ್ಲಿದ್ದವಳು. ದೊಡ್ಡ ಕೃಷ್ಣರಾಜ ಒಡೆಯರ ಪತ್ನಿ ಚೆಲುವಾಂಬೆ ಸಹ ಕವಯಿತ್ರಿಯಾಗಿ ಅರಮನೆಯಲ್ಲಿ ಮಿನುಗಿದ ಪ್ರತಿಭೆ. ಈಕೆ 'ವರನಂದೀ ಕಲ್ಯಾಣ' 'ವೆಂಕಟಾಚಲ ಮಹಾತ್ಮೆ' 'ಮಂಗಳಾರತಿ ಪದ' ಕೃತಿಗಳನ್ನು ರಚಿಸಿದ್ದಾಳೆ. ನಂತರದಲ್ಲಿ ಇನ್ನು ಅನೇಕ ಮಹಿಳೆಯರು ಬರವಣಿಗೆಯಲ್ಲಿ ತೊಡಗಿ ಸಾಹಿತ್ಯ ರಚಿಸಿದ್ದಾರೆ. ಅನಕ್ಷರಸ್ಥರೂ ಸಹ ಕಾವ್ಯ ರಚಿಸಿದ್ದರಿಂದ ಮೌಖಿಕ ರೂಪದಲ್ಲೇ ಸಾಹಿತ್ಯ ಉಳಿಯಿತು. ಮಾಹಿತಿಯ ಕೊರತೆ ಎದ್ದು ಕಂಡರೂ ಲಭ್ಯ ಮಾಹಿತಿಯಿಂದ ಅವರ ಸಾಂಸ್ಕೃತಿಕ ಕೊಡುಗೆ ಮಹತ್ವವಾದುದು ಎಂದು ತಿಳಿಯುತ್ತದೆ.

೨೦ನೇ ಶತಕದ ಮೊದಲ ಅರ್ಧವನ್ನು ಆಧುನಿಕ ಮಹಿಳಾ ಸಾಹಿತ್ಯದ ಮೊದಲ ಪೀಳಿಗೆಯ ಕಾಲ ಎಂದು ಗುರುತಿಸಿದರೆ, ಈ ಪೀಳಿಗೆಯಲ್ಲಿ ನಂಜನಗೂಡು ತಿರುಮಲಾಂಬ ಅವರು ಆದ್ಯರಾಗಿ ಕಂಡುಬರುತ್ತಾರೆ. ೧೮೮೭ ರಲ್ಲಿ ಜನಿಸಿದ ಇವರು ಐದನೇ ವಯಸ್ಸಿಗೆ ತಾಯಿಯನ್ನು ಕಳೆದುಕೊಂಡರು. ೧೧ನೇ ವಯಸ್ಸಿಗೆ ವಿವಾಹ ನಡೆಯಿತು. ನಾಲ್ಕೇ ವರ್ಷದಲ್ಲಿ ವಿಧವೆಯೂ ಆದರು. ತಂದೆಯ ಪ್ರೋತ್ಸಾಹದಿಂದ ಶಿಕ್ಷಣ ಮುಂದುವರಿಸಿ ಸಾಹಿತ್ಯ ರಚನೆಯಲ್ಲಿ ತೊಡಗಿದರು. ಕಾವ್ಯ, ನಾಟಕ, ಯಕ್ಷಗಾನ, ಪ್ರಬಂಧ, ಜೀವನಚರಿತ್ರೆ, ಸಣ್ಣಕಥೆ ಹೀಗೆ ಹಲವು ಪ್ರಕಾರಗಳಲ್ಲಿ ರಚಿಸಿದರೂ ಕಾದಂಬರಿಯ ಕಡೆಗೇ ಹೆಚ್ಚು ಒಲವು. ಇವರ ಸಾಹಿತ್ಯವು ಮುಖ್ಯವಾಗಿ ನೀತಿಪ್ರಧಾನವಾಗಿದ್ದು, ಆದರ್ಶ ಮಹಿಳೆಯರನ್ನು ಚಿತ್ರಿಸುವ ಆಶಯ ಹೊಂದಿದೆ. ಅವರ ಸಾಹಿತ್ಯದಿಂದ ತಿಳಿಯುವ ಮತ್ತೊಂದು ಪ್ರಮುಖ ಅಂಶವೆಂದರೆ ಸ್ತ್ರೀಯ ಶಿಕ್ಷಣದಿಂದ ಮಾತ್ರ ಅವಳ ಉದ್ಧಾರ ಸಾಧ್ಯ ಎಂಬುದು. ನಂತರದ ಕಾಲದಲ್ಲಿ ಮುಳಿಯ ಮೂಕಾಂಬಿಕ ಅಮ್ಮ, ಸೀತಾದೇವಿ ಪಡುಕೋಣೆ, ಲಲಿತಾ ರೈ, ಲೀಲಾಬಾಯಿ ಕಾಮತ್, ಲೀಲಾಕಾರಂತ, ಸರಸ್ವತಿಬಾಯಿ ರಾಜವಾಡೆ, ಬೆಳಗೆರೆ ಜಾನಕಮ್ಮ, ಆರ್.ಕಲ್ಯಾಣಮ್ಮ, ಜಯದೇವಿ ತಾಯಿ ಲಿಗಾಡೆ, ತಿರುಮಲೆ ರಾಜಮ್ಮ, ಜಯಲಕ್ಷ್ಮೀ ಶ್ರೀನಿವಾಸನ್, ಕೊಡಗಿನ ಗೌರಮ್ಮ, ಗೌರಮ್ಮ ಭುಜಂಗರಾಧ್ಯ, ಸರಸ್ವತಿದೇವಿ ಗೌಡರ, ಎಚ್.ವಿ.ಸಾವಿತ್ರಮ್ಮ, ಶಾಂತಾದೇವಿ ಮಾಳವಾಡ, ಬೆಳಗಾವಿ ಶ್ಯಾಮಲದೇವಿ, ಸಂಗಮ್ಮ.ವಿ, ಕರವೀರ ಶೆಟ್ಟರ ಮುಂತಾದ ಅನೇಕ ಪ್ರಮುಖರನ್ನು ಗುರುತಿಸಬಹುದು. ಇವರೆಲ್ಲರನ್ನೂ ಗಮನಿಸುವಾಗ ಅನೇಕ ಸಮಾನ ಅಂಶಗಳು ಎದ್ದು ಕಾಣುತ್ತವೆ. ಹಿರಿಯರು ಹಾಕಿದ ದಾರಿಯಲ್ಲಿ ನಡೆಯಬೇಕಾದ ಅನಿವಾರ್ಯ

ಪರಿಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದ ಇವರು ತಮಗೆ ಸಿಕ್ಕಿದ ಸೀಮಿತ ಅವಕಾಶದಲ್ಲೇ ಬರೆದರೆನ್ನುವುದು ಗಮನಿಸಬೇಕಾದ ಅಂಶ. ಅವರ ಬರಹದ ಶಕ್ತಿ ಮಿತಿಗಳೆರಡೂ ಭಾಗಶಃ ನಮ್ಮ ಸಂಸ್ಕೃತಿಯ ಶಕ್ತಿಮಿತಿಗಳನ್ನು ತೋರಿಸುತ್ತವೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹೊಸಗನ್ನಡ ಸಾಹಿತ್ಯ ಒಂದು ಪ್ರಮುಖ ಘಟ್ಟ. ಸಾಮಾಜಿಕ ಜೀವನದಲ್ಲಾದ ಬದಲಾವಣೆ ಸಾಹಿತ್ಯದ ಮೇಲೆ ಪ್ರಭಾವ ಉಂಟು ಮಾಡಿದವು. ಜೊತೆಗೆ ರಾಷ್ಟ್ರೀಯ ಚಳವಳಿ ತೀವ್ರವಾದ ಪ್ರಭಾವವನ್ನುಂಟು ಮಾಡಿತು. "ಪಾಶ್ಚಾತ್ಯ ಸಂಪರ್ಕ, ಸಾಮಾಜಿಕ ಚಿಂತನೆಗಳ ಪರಿಣಾಮದಿಂದ ಸಮಾಜದಲ್ಲಿ 'ಮಧ್ಯಮವರ್ಗ'ದ ಉದಯವಾಯಿತು. ಈ ವರ್ಗ ಹೊಸ ಶಿಕ್ಷಣದ ಕಾರಣದಿಂದ ನಮ್ಮ ಅರ್ಥಪೂರ್ಣ ಹಳೆಯ ವಿಚಾರಗಳನ್ನು ಉಳಿಸಿಕೊಳ್ಳುವುದರ ಜೊತೆ ಜೊತೆಗೆ ಚಿಕಿತ್ಸಕ ಮನೋಭಾವವನ್ನು ರೂಢಿಸಿಕೊಂಡಿತು. ಇದರೊಂದಿಗೆ ಸುಧಾರಣಾ ಮನೋಭಾವ, ಮಾನವತಾ ಮನೋಭಾವವನ್ನು ಬೆಳೆಸಿಕೊಂಡಿತು"[೩]

ಕನ್ನಡ ಸಾಹಿತ್ಯದ ಬೆಳವಣಿಗೆಯ ಸಂದರ್ಭದಲ್ಲಿ ನವೋದಯದ ಸಂದರ್ಭ ಮಹಿಳಾ ಬರವಣಿಗೆಗೆ ಒಂದು ವಿಶಿಷ್ಟವಾದ ಸಂದರ್ಭವಾಗಿದೆ. ಮನೆಯ ವಾತಾವರಣಕ್ಕೇ ಅಂಟಿಕೊಂಡಿದ್ದ ಮಹಿಳೆಗೆ ನವೋದಯದ ತಾತ್ವಿಕ ನಂಬಿಕೆ, ಮನೋಭಾವ, ಆಲೋಚನೆಗಳು ಅವಳಿಗೆ ಸ್ವಲ್ಪ ಮಟ್ಟಿಗಾದರೂ ಮನೆಯಿಂದ ಹೊರಬರುವ ಅವಕಾಶ ಕಲ್ಪಿಸಿಕೊಟ್ಟಿತು. ಆಕೆ ಮನೆಯಿಂದ ಹೊರಬಂದರೂ ಮನಸ್ಸು ಮಾತ್ರ ಅಲ್ಲೇ ಉಳಿಯಿತು. ಇದರಿಂದಾಗಿಯೇ ನವೋದಯ ಕಾಲದಲ್ಲಿ ಬರವಣಿಗೆಗೆ ತೊಡಗಿದ ಮಹಿಳೆಯರು ತಮ್ಮ ಬರವಣಿಗೆಯ ಕ್ಷೇತ್ರ, ವಸ್ತುವನ್ನು ಕೌಟುಂಬಿಕ ಪರಿವಲಯದಿಂದ ಆಚೆ ಸ್ಥಿತ್ಯಂತರಗೊಳಿಸಲಿಲ್ಲ.

ಸ್ವಾತಂತ್ರ್ಯಾನಂತರ ನವೋದಯ ಸಾಹಿತ್ಯಕ್ಕೆ ಪ್ರತಿಯಾಗಿ ಎದ್ದ ಪ್ರಗತಿಶೀಲ ಅಲೆ ಕನ್ನಡ ಸಾಹಿತ್ಯದ ಚಿಂತನ ಕ್ರಮದಲ್ಲಿ ಸಾಕಷ್ಟು ಬದಲಾವಣೆಯನ್ನು ತಂದಿತು. ಸ್ವಾತಂತ್ರ್ಯ ಪೂರ್ವದ ಕನಸುಗಳು, ಭಗ್ನಗೊಂಡ ನಿರಾಸೆ ಈ ಸಾಹಿತ್ಯ ಸೃಷ್ಟಿಗೆ ಹಿನ್ನಲೆಯಾಯಿತು. ಮುಖ್ಯವಾಗಿ ಕಾರ್ಮಿಕ, ದುಡಿಯುವ ವರ್ಗ, ಶ್ರಮಿಕರ ಸಮಸ್ಯೆಗಳು, ಬಡತನದ ಫಲವಾಗಿ ತಪ್ಪು ಹಾದಿ ಹಿಡಿದು ವೇಶ್ಯಾವೃತ್ತಿಗಿಳಿದ ವೇಶ್ಯೆಯರ ಸಮಸ್ಯೆಗಳನ್ನು ಈ ಕಾಲದ ಸಾಹಿತ್ಯ ಕೃತಿಗಳಲ್ಲಿ ಕಾಣಬಹುದು.

ಪ್ರಗತಿಶೀಲ ಸಾಹಿತ್ಯದ ಕಾಲಾವಧಿ ಕಡಿಮೆಯಾಗಿದ್ದು, ತನ್ನೊಳಗಿನ ಒತ್ತಡಗಳು. ಅದನ್ನು ಹೊರಹಾಕುವ ಆವೇಶ, ಅತಿಯಾದ ಅಬ್ಬರ, ಘೋಷಣೆ ಇವುಗಳನ್ನು ಅಲ್ಲಿ ಗುರುತಿಸಬಹುದು. "ಎಚ್.ವಿ.ಸಾವಿತ್ರಮ್ಮ, ಎಂ.ಕೆ.ಇಂದಿರಾ, ತ್ರಿವೇಣಿ, ಡಾ॥ಅನುಪಮಾ ನಿರಂಜನ, ಸರಸ್ವತಿ ಬಾಯಿ, ರಾಜವಾಡೆ, ಸುಶೀಲ ಕೊಪ್ಪರ ಮುಂತಾದ ಲೇಖಕಿಯರು ಮೌಲ್ಯಾಧಾರಿತ ಕುಟುಂಬ ವ್ಯವಸ್ಥೆಯ ಅಸಮತೋಲನಗಳನ್ನು, ಅಸಮಾನತೆಗಳನ್ನು ಪರಿಶೀಲಿಸುವ ಕೆಲಸ ಮಾಡುತ್ತಾರೆ. ಇವರ ಕಥಾ ಜಗತ್ತಿನೊಳಗೆ ಕುಟುಂಬವೇ ಪ್ರಧಾನ ಕ್ಷೇತ್ರ. ಇಲ್ಲಿ ಹೆಣ್ಣು ಎದುರಿಸುವ ವರದಕ್ಷಿಣೆಯ ಸಮಸ್ಯೆ, ಗಂಡಿನ ದಬ್ಬಾಳಿಕೆ, ಶೋಷಣೆಗೆ ಈಡಾದ ಅವಳ ಸಂಕಟ, ಅಸಹಾಯಕತೆಗಳು, ಇದಕ್ಕೆಲ್ಲ ಪೂರಕತೆಯನ್ನು ಒದಗಿಸುವ ವಾತಾವರಣವನ್ನು ಚಿತ್ರಿಸುತ್ತಾರೆ."[೪]

ನವೋದಯ, ನವೋದಯ ಪೂರ್ವ ಲೇಖಕಿಯರಿಗಿಂತ ೧೯೫೦ ರಿಂದ ೧೯೭೫ ರ ಕಾಲಾವಧಿಯಲ್ಲಿ ಬರವಣಿಗೆಗೆ ತೊಡಗಿದ ಲೇಖಕಿಯರ ವಾತಾವರಣ ಸಾಕಷ್ಟು ಸುಧಾರಿಸಿದಂತೆ ಕಂಡರೂ

ಸಹ ತಳಮಟ್ಟದ ಬದಲಾವಣೆಗಳಾಗಲಿಲ್ಲ. ಹೆಣ್ಣನ್ನು ಕುರಿತಂತೆ ಇವರ ಚಿಂತನೆಗಳು ಗಂಡಿನ ಚಿಂತನೆಗಿಂತ, ಧರ್ಮಶಾಸ್ತ್ರದ ಮನುವಿಗಿಂತ ಬೇರೆಯಾಗಲಿಲ್ಲ ಎಂದೇ ಹೇಳಬಹುದು.

೨೦ನೇ ಶತಮಾನದ ಬಹು ಮಹತ್ವದ ಬೆಳವಣಿಗೆ ಎನಿಸಿಕೊಂಡ ಸ್ತ್ರೀವಾದ ಸುಮಾರು ೧೯೭೦ರಲ್ಲಿ ಭಾರತಕ್ಕೆ ಕಾಲಿಟ್ಟಿತು. ಸ್ತ್ರೀವಾದಿ ಚಿಂತನೆಗಳ ಫಲವಾಗಿ ಮಹಿಳಾ ಸಾಹಿತ್ಯದ ಸ್ವರೂಪ, ಗೊತ್ತುಗುರಿಗಳನ್ನು ಕುರಿತಂತೆ ಖಚಿತವಾದ ಅಭಿಪ್ರಾಯಗಳು ರೂಪಗೊಳ್ಳತೊಡಗಿತ್ತು. "ಮಹಿಳೆಯರು ಬರೆದದ್ದು ಮಹಿಳಾ ಸಾಹಿತ್ಯ ಎಂಬುದು ಇದುವರೆಗೆ ಇದ್ದ ಸ್ಥೂಲ ವಿವರಣೆ. ಆದರೆ ಇದಿಷ್ಟರಿಂದ ಮಹಿಳಾ ಸಾಹಿತ್ಯದ ಸ್ವರೂಪವನ್ನು ಸ್ಪಷ್ಟವಾಗಿ ತಿಳಿಸಿದಂತಾಗುವುದಿಲ್ಲ. ಮಹಿಳೆಯರಿಂದ ರಚಿತವಾದ ಸಾಹಿತ್ಯ, ಮಹಿಳೆಯರನ್ನು ಕೇಂದ್ರವಾಗುಳ್ಳ ಸಾಹಿತ್ಯ, ಮಹಿಳಾವಾದಿಯಾದ ಸಾಹಿತ್ಯ ಹೀಗೆ ಇದರಲ್ಲಿ ಮೂರು ನೆಲೆಗಳಿವೆ. ಈ ಮೂರು ನೆಲೆಗಳನ್ನೊಳಗೊಂಡ ಸಾಹಿತ್ಯ ಮಾತ್ರವೇ ಮಹಿಳಾ ಸಾಹಿತ್ಯ ಎಂಬ ಶೀರ್ಷಿಕೆಗೆ ಅರ್ಹ."[೨]

ಒಟ್ಟಿನಲ್ಲಿ ಸಮಕಾಲೀನ ಸಾಹಿತ್ಯವು ಈ ಹಿಂದಿನದಕ್ಕಿಂತ ಭಿನ್ನವಾಗಿದ್ದು ಗಮನಾರ್ಹವಾಗಿದೆ. ಮಹಿಳೆಯರಿಗೆ ಸಾಮಾಜಿಕವಾಗಿ ಅನೇಕ ಮಿತಿಗಳಿವೆ. ಈ ಹಿನ್ನಲೆಯಲ್ಲಿ ಹಿಂದಿನ ಲೇಖಕಿಯರು ಮಹಿಳಾ ಸಾಹಿತ್ಯಕ್ಕೆ ವಿಮರ್ಶಕರು ರಿಯಾಯಿತಿ ಕೊಡಬೇಕು ಎಂಬ ಧ್ವನಿಯನ್ನು ಎತ್ತಿದ್ದರು. ಆದರೆ ಇಂದು ಅದರ ಪ್ರತಿಪಾದನೆ ಬೇರೆಯಾಗಿದೆ.

ಮಹಿಳಾ ಸಾಹಿತ್ಯ ಕುರಿತಂತೆ ವಿಮರ್ಶಕರ ಧೋರಣೆ ಬದಲಾಗಬೇಕಿದೆ. 'ಜೊಳ್ಳು ಸಾಹಿತ್ಯ' 'ಅಡಿಗೆಮನೆ ಸಾಹಿತ್ಯ' ಎಂಬ ಹಣೆಪಟ್ಟಿಯನ್ನು ತೆಗೆದುಹಾಕಬೇಕೆಂಬ ಒತ್ತಾಯ ಇದೆ. ಮಹಿಳಾ ಸಾಹಿತ್ಯವನ್ನು ಯಾಕೆ ಭಿನ್ನವಾಗಿ ಪರಿಗಣಿಸಬೇಕು? ಎಂಬ ಪ್ರಶ್ನೆ ಎತ್ತುವುದರ ಜೊತೆಗೆ ಇದನ್ನು ಗುರುತಿಸುವ ಬಗೆ ಯಾವುದು, ಇದಕ್ಕೆ ಅನ್ವಯಿಸಬೇಕಾದ ಮಾನದಂಡಗಳು ಯಾವುವು, ಈ ಸಾಹಿತ್ಯದ ವಿಶಿಷ್ಟತೆ ಏನು ಎಂಬುದನ್ನು ಸ್ತ್ರೀವಾದಿ ಲೇಖಕಿಯರು ತಮ್ಮ ವಿಮರ್ಶಾ ಬರಹಗಳು, ಸಾಹಿತ್ಯ ಕೃತಿಗಳ ಮೂಲಕ ಸ್ಪಷ್ಟಪಡಿಸುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಕೆಲವು ಲೇಖಕಿಯರು ಮಹಿಳಾ ಸಾಹಿತ್ಯವನ್ನು ಒಂದು ಪ್ರಮುಖ ಪರಂಪರೆಯನ್ನಾಗಿ ಗುರುತಿಸಬೇಕು ಎಂದು ಪ್ರತಿಪಾದಿಸುತ್ತಾರೆ.

ಇಂದು ಮಹಿಳಾ ಸಾಹಿತ್ಯ ಚರಿತ್ರೆ ಒಂದು ಪ್ರಮುಖ ಘಟ್ಟವಾಗಿದೆ. ಗಾತ್ರ ಮತ್ತು ಗುಣ ಈ ಎರಡೂ ದೃಷ್ಟಿಗಳಿಂದ ಕನ್ನಡ ಸಾಹಿತ್ಯದ ವಿಸ್ತರಣೆ, ವೈವಿಧ್ಯಕ್ಕೆ ಲೇಖಕಿಯರು ತಮ್ಮದೇ ಆದ ಕೊಡುಗೆ ನೀಡುತ್ತಲೇ ಇದ್ದಾರೆ. ಕಥೆ, ಕವನ, ಕಾದಂಬರಿಗಳ ಜೊತೆಗೆ ನಾಟಕ, ಹಾಸ್ಯ ಸಾಹಿತ್ಯ, ಪ್ರಬಂಧ ಸಾಹಿತ್ಯ, ಪ್ರವಾಸ ಸಾಹಿತ್ಯ ಮೊದಲಾದ ಇನ್ನಿತರ ಕ್ಷೇತ್ರಗಳಲ್ಲಿಯೂ ಲೇಖಕಿಯರು ಸಾಹಿತ್ಯ ರಚಿಸುತ್ತಿದ್ದು ಗಮನಾರ್ಹ ಕೃತಿಗಳು ಹೊರಬರುತ್ತಿವೆ. ಅನುಪಮ ನಿರಂಜನ, ಆರ್ಯಾಂಬ ಪಟ್ಟಾಬಿ, ಎಂ.ಕೆ.ಇಂದಿರ, ಉಷಾ ನವರತ್ನರಾಮ್, ಕಮಲಾಹಂಪನ, ಗಿರಿಬಾಲೆ, ನಳಿನಿಮೂರ್ತಿ, ಎಚ್.ಎಸ್.ಪಾರ್ವತಿ, ಪ್ರೇಮಾಭಟ್, ವೀಣಾ ಶಾಂತೇಶ್ವರ, ಸರೋಜಿನಿ ಮಹಿಷಿ, ವೈದೇಹಿ, ಸ.ಉಷಾ, ನೇಮಿಚಂದ್ರ, ಎಚ್.ಎಲ್.ಪುಷ್ಪ, ಸುಕನ್ಯಾ ಮಾರುತಿ, ಎಂ.ಆರ್.ಕಮಲ, ಭಾಗ್ಯ ಸುದರ್ಶನ, ಸಬಿಹಾ ಭೂಮಿಗೌಡ, ಪ್ರತಿಭಾ ನಂದಕುಮಾರ್, ಶಶಿಕಲಾ ವೀರಯ್ಯ ಸ್ವಾಮಿ ಮುಂತಾದ ಅನೇಕ ಮಹಿಳಾ ಸಾಹಿತಿಗಳನ್ನು ಪ್ರಮುಖವಾಗಿ ಹೆಸರಿಸಬಹುದಾಗಿದೆ.

ಅಡಿಟಿಪ್ಪಣಿಗಳು

೧. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ- ಸಂ. ಎಚ್.ಎಸ್.ಶ್ರೀಮತಿ; ಲೇಖನ- ಕನ್ನಡ ಸಾಹಿತ್ಯ ಚರಿತ್ರೆಗಳಲ್ಲಿ ಮಹಿಳಾ ಸಾಹಿತ್ಯದ ಪರಿಗಣನೆ, ಲೇಖಕರು- ಎಚ್.ಎಸ್.ಶ್ರೀಮತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ- ೨೦೦೬ ಪು. ೧೦

೨. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ- ಸಂ. ಎಚ್.ಎಸ್.ಶ್ರೀಮತಿ, ಲೇಖನ- ಹದಿನೇಳನೆಯ ಶತಮಾನದ ಮಹಿಳಾ ಸಾಹಿತ್ಯ, ಲೇಖಕರು- ಡಾ.ವೈ.ಸಿ.ಭಾನುಮತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ- ೨೦೦೬, ಪು. ೧೭೭

೩. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ- ಸಂ. ಎಚ್.ಎಸ್.ಶ್ರೀಮತಿ; ಲೇಖನ- ೧೯೫೦-೧೯೭೫ರ ವರೆಗಿನ ಕನ್ನಡ ಮಹಿಳಾ ಸಾಹಿತ್ಯ', ಲೇಖಕರು- ಡಾ.ಡಿ.ಮಂಗಳಾ ಪ್ರಿಯದರ್ಶಿನಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ- ೨೦೦೬, ಪು. ೨೯೩

೪. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ- ಸಂ. ಎಚ್.ಎಸ್.ಶ್ರೀಮತಿ; ಲೇಖನ-೧೯೫೦-೧೯೭೫ರ ವರೆಗಿನ ಕನ್ನಡ ಮಹಿಳಾ ಸಾಹಿತ್ಯ, ಲೇಖಕರು- ಡಾ.ಡಿ.ಮಂಗಳಾ ಪ್ರಿಯದರ್ಶಿನಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ- ೨೦೦೬, ಪು. ೩೦೦

೫. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ- ಸಂ. ಎಚ್.ಎಸ್.ಶ್ರೀಮತಿ; ಲೇಖನ-ಸಮಕಾಲೀನ ಮಹಿಳಾ ಸಾಹಿತ್ಯ, ಲೇಖಕರು-ಡಾ.ಕೆ.ಆರ್.ಸಂಧ್ಯಾರೆಡ್ಡಿ, - ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ- ೨೦೦೬, ಪು. ೩೭೮

ಅಧ್ಯಾಯ–೩

ಸಬಿಹಾ ಭೂಮಿಗೌಡ: ವ್ಯಕ್ತಿ ಮತ್ತು ಬರಹ

ಕನ್ನಡ ಮಹಿಳಾ ಸಾಹಿತ್ಯವು ಪ್ರಗತಿ ಮತ್ತು ಆಶಾದಾಯಕ ಬೆಳವಣಿಗೆಯನ್ನು ಹೊಂದುತ್ತಿರುವ ಇಂದಿನ ಸಂದರ್ಭದಲ್ಲಿ ಅನೇಕ ಮಹಿಳಾ ಸಾಹಿತಿಗಳು ಅದಕ್ಕೆ ಪೂರಕವಾಗಿ ತಮ್ಮದೇ ಆದ ವಿಶಿಷ್ಟ ರೀತಿಯ ಕೊಡುಗೆ ನೀಡುತ್ತಿದ್ದಾರೆ. ಅಂಥವರಲ್ಲಿ ಸಬಿಹಾ ಭೂಮಿಗೌಡ ಅವರು ಪ್ರಮುಖರಾಗಿದ್ದಾರೆ. ಯಾವುದೇ ಕಟ್ಟು ಪಾಡುಗಳಿಗೆ ಅಂಟಿಕೊಳ್ಳದೆ, ವೈಚಾರಿಕ ನಿಲುವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಜಾತಿ ಧರ್ಮದ ಸಂಕೋಲೆಯನ್ನು ಕಿತ್ತೆಸೆದು ಅದರಾಚೆಗಿರುವ ಸುಂದರ ಬದುಕನ್ನು ತಮ್ಮದಾಗಿಸಿಕೊಂಡಿರುವ ಸಬಿಹಾ ಭೂಮಿಗೌಡ ಅವರು ಪ್ರಮುಖ ವ್ಯಕ್ತಿಯಾಗಿ ವಿಶಿಷ್ಟ ಬರಹಗಾರರಾಗಿ ಕಾಣಿಸಿಕೊಂಡಿದ್ದಾರೆ.

ಸಬಿಹಾ ಅವರು ಈಗಿನ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಗಜೇಂದ್ರಗಡದಲ್ಲಿ ೪ನೇ ಏಪ್ರಿಲ್ ೧೯೫೯ರಂದು ಎಂ.ಆರ್ ಗಜೇಂದ್ರಗಡ ಮತ್ತು ತಾಹಿರಾಗಜೇಂದ್ರಗಡ ದಂಪತಿಗಳ ಮಗಳಾಗಿ ಜನಿಸಿದರು. ಕೆಆರ್ಇಸಿ (ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜು) ಕ್ಯಾಂಪಸ್ಸಿನಲ್ಲಿ ಬೆಳೆದ ಅವರಿಗೆ ಆ ವಾತಾವರಣ ಬದುಕು ಮತ್ತು ಉಸಿರಾಗಿತ್ತು. ಅದೊಂದು ಪುಟ್ಟ ವಿಶ್ವ ಅಥವಾ ಮಿನಿ ಭಾರತದಂತಿತ್ತು. ಅಲ್ಲಿ ಬಹುಭಾಷಿಕರು, ಬಹುಜಾತಿ, ಧರ್ಮೀಯರು, ವಿವಿಧ ಊರುಗಳಿಂದ, ರಾಜ್ಯಗಳಿಂದ, ದೇಶಗಳಿಂದ ಬಂದ ಜನರು, ಇವರೆಲ್ಲರ ಬಹುಸಂಸ್ಕೃತಿಗೆ ಕೆಆರ್ಇಸಿ ಆಶ್ರಯ ನೀಡಿತ್ತು. ಅಷ್ಟಲ್ಲದೆ ಅವೆಲ್ಲವನ್ನು ಮೀರಿದ 'ಕೆಆರ್ಇಸಿಯನ್' ಸಂಸ್ಕೃತಿಯೊಂದು ಅಲ್ಲಿ ರೂಪುಗೊಂಡಿತ್ತು. ಅಂಥ ಹೊಸ ಸಂಸ್ಕೃತಿಯ ಪರಿಸರದಲ್ಲಿ ಬೆಳೆದ ಸಬಿಹಾ ಅವರು ಅದರಿಂದ ಪ್ರಭಾವಿತಗೊಂಡರು. ಅಲ್ಲದೆ ಮನೆಯಲ್ಲಿ ಅವರ ತಂದೆ ರಾಮಾಯಣ, ಮಹಾಭಾರತಗಳ ಕಥೆ ಹೇಳುತ್ತಿದ್ದರು. ಇದರಿಂದಾಗಿ ಅವರಿಗೆ ಬಾಲ್ಯದಲ್ಲಿಯೇ ಒಳ್ಳೆಯ ಸಾಂಸ್ಕೃತಿಕ ಪರಿಸರ ಲಭಿಸಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಪಡೆದರು. ಸುರತ್ಕಲ್‌ನ ಗೋವಿಂದದಾಸ ಕಾಲೇಜಿನಲ್ಲಿ ಬಿ.ಎ ಪದವಿ ಪಡೆದರು. ಮಂಗಳ ಗಂಗೋತ್ರಿಯಲ್ಲಿ ೧೯೮೦ರಿಂದ ೮೨ರಲ್ಲಿ ಎಂ.ಎ ಪದವಿಯಲ್ಲಿ ಹೆಚ್ಚು ಅಂಕ ಗಳಿಸಿ ಚಿನ್ನದ ಪದಕದೊಂದಿಗೆ ಹೊರಬಂದರು. ೧೯೯೧ರಲ್ಲಿ 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣಕತೆಯ ಹುಟ್ಟು ಮತ್ತು ಬೆಳವಣಿಗೆ' (೧೮೪೩–೧೯೪೨) ಎಂಬ ವಿಷಯದ ಅಧ್ಯಯನಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದಿಂದ ಪಿ.ಎಚ್.ಡಿ ಪದವಿ ಪಡೆದರು. ಆರಂಭದಲ್ಲಿ ಮಂಗಳೂರಿನ ಸರ್ಕಾರಿ ಕಾಲೇಜು ಮತ್ತು ಗೋಕರ್ಣನಾಥೇಶ್ವರ ಕಾಲೇಜಿನಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ನಂತರ ೧೯೮೨, ಅಕ್ಟೋಬರ್‌ನಿಂದ ಮಂಗಳ ಗಂಗೋತ್ರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

೧೯೮೦ರಲ್ಲಿ ಎಂ.ಎ ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂಧರ್ಭದಲ್ಲಿ ಸಹಪಾಠಿಯಾಗಿದ್ದ ಭೂಮಿಗೌಡ ಅವರು ಪರಿಚಿತರಾಗಿ ಸ್ನೇಹಿತರಾದರು. ನಂತರ ಅವರ ನಡುವೆ ಪ್ರೀತಿ ಮೂಡಿತು. ೧೯೮೨ರಲ್ಲಿ ಮದುವೆಯ ಕುರಿತು ಪ್ರಸ್ತಾಪ ಮಾಡಿ ೧೯೮೮ ಮೇ ೦೩ರಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಇವರ ಪ್ರೀತಿಯ ಏಕೈಕ ಪುತ್ರಿ 'ಅರಿಲ್'. ಪರಸ್ಪರ ಪ್ರೀತಿ, ವಿಶ್ವಾಸ, ನಂಬಿಕೆಗಳೊಂದಿಗೆ ತುಂಬು ಜೀವನ ನಡೆಸುತ್ತಿದ್ದಾರೆ. ಅವರು ಬಯಸಿದ ಪ್ರೀತಿ ಸಹಕಾರ ಅವರಿಗೆ ದೊರೆತಿದೆ. ಅವರೇ ಅದಕ್ಕೆ ಸಂಬಂಧಿಸಿದಂತೆ "ಬದುಕು ಎಷ್ಟು ಅನಿರೀಕ್ಷಿತಗಳ ಆಗರ ಎಂಬುದು ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಹಂತದಲ್ಲಿ ಅರಿವಿಗೆ ಬರುವ ವಿಚಾರವಾಗಿದೆ. ಒಂದು ಹೊಸ ಹೆಜ್ಜೆ ಇಡಲು ಬಯಸುವವರಿಗೆ

ಕಾಣದ ಯಾವುದೋ ಕೈಗಳು ಊರುಗೋಲುಗಳಾಗಿ ಬರುತ್ತವೆ. ಎಲ್ಲರ ಸಂಧರ್ಭಗಳಲ್ಲೂ ಇದು ನಿಜವಾಗದಿದ್ದರೂ ನನ್ನ ಪಾಲಿಗಂತೂ ಇದು ಹಾದಿಯುದ್ದಕ್ಕೂ ಕಂಡ ಸತ್ಯವಾಗಿದೆ. ಸಂಗಾತಿಯಾಗಿ ಭೂಮಿಯನ್ನು ಒಪ್ಪಿಕೊಂಡಾಗ, ಅವನೊಂದಿಗೆ ಪ್ರೀತಿಯ ಸಾಗರವೆ ನನಗೆ ದೊರೆಯಿತು" ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

ಸಬಿಹಾ ಭೂಮಿಗೌಡ ಅವರು ತಮ್ಮ ವೃತ್ತಿ ಬದುಕಿನ ಜೊತೆಗೆ ಬರವಣಿಗೆಯನ್ನು ಆರಂಭಿಸಿದರು. ಅವರು ಸಾಹಿತ್ಯದಲ್ಲಿ ಹೆಚ್ಚು ಆಸಕ್ತಿಯನ್ನು ಬೆಳೆಸಿಕೊಳ್ಳಲು ಕಾರಣ ಮನೆಯಲ್ಲಿ ತಂದೆಯವರು ಹೇಳುತ್ತಿದ್ದ ಪುರಾಣಕಥೆಗಳು, ಮನೆಯಲ್ಲಿ ಇದ್ದ ಪುಸ್ತಕಗಳು, ತಮಗೆ ಲಭಿಸಿದ ಸಾಂಸ್ಕೃತಿಕ ವಾತಾವರಣ.ಇದರ ಜೊತೆಗೆ ಅವರು ಪ್ರೌಢಶಾಲೆಯ ಕನ್ನಡ ಮೇಷ್ಟ್ರು ಸೋಮಯಾಜಿ ಅವರು. ಸಬಿಹಾ ಅವರು ಮೇಷ್ಟರ ಪಾಠ ಕೇಳಿ ಸ್ಫೂರ್ತಿಗೊಂಡು ತಾನೂ ಅವರಂತೆ ಆಗಬೇಕೆಂದುಕೊಂಡಿದ್ದರು. ಹಾಗೆಯೇ ಕಾಲೇಜಿನಲ್ಲಿ ಸೀತಾರಾಮಾಚಾರ್ಯರು ಇವರ ಮೇಲೆ ಪ್ರಭಾವ ಬೀರಿದ್ದಾರೆ ಎಂದು ಹೇಳಿದ್ದಾರೆ. ಎಂ.ಎ ಪದವಿಯಲ್ಲಿ ಗುರುಗಳಾಗಿದ್ದ ಡಾ.ಪಂಡಿತಾರಾಧ್ಯ ಅವರನ್ನು 'ನನ್ನ ವೈಚಾರಿಕ ನಿಲುವುಗಳನ್ನು ಸ್ಪಷ್ಟಪಡಿಸಿದವರು ಪಂಡಿತಾರಾಧ್ಯರು' ಎಂದು ಪ್ರೀತಿ ಮತ್ತು ಗೌರವದಿಂದ ಸ್ಮರಿಸುತ್ತಾರೆ.

ಸಬಿಹಾ ಅವರು ನಿಯತಕಾಲಿಕೆಯೊಂದರಲ್ಲಿ ಪ್ರಕಟವಾಗಿದ್ದ ಫಕೀರ್ ಮಹಮ್ಮದ್ ಕಟ್ಪಾಡಿ ಅವರ ಅಪೂರ್ಣ ಕಥೆಯೊಂದನ್ನು ಪೂರ್ಣಗೊಳಿಸಿ ಕಳುಹಿಸಿದ್ದರು. ಅದು ಆಯ್ಕೆಯಾಗಿ ಖುಷಿ ನೀಡಿತು. ಇದು ತಮ್ಮ ಬರವಣಿಗೆಯ ಪ್ರಾರಂಭದ ಮೈಲಿಗಲ್ಲು ಎಂದು ಅವರು ಹೇಳಿದ್ದಾರೆ. ನಂತರದಲ್ಲಿ ವಿಮರ್ಶಾ ಕ್ಷೇತ್ರದಲ್ಲಿ ಬರವಣಿಗೆಗೆ ತೊಡಗಿದರು. ಅವರ ಎರಡನೇ ವಿಮರ್ಶಾ ಸಂಕಲನ 'ನಿಲುಮೆ'ಯ ಮೊದಲ ಮಾತಿನಲ್ಲಿ "ಮನದ ಒಳಗಿನ ಒತ್ತಡಗಳು ನನ್ನ ಕವನಗಳ ನಿರ್ಮಿತಿಗೆ ಕಾರಣವಾಗಿದ್ದರೆ ವಿವಿಧ ಸಂಘಸಂಸ್ಥೆಗಳ ಆಹ್ವಾನದ ನೆಲೆಯಿಂದ ಬಂದ ಬಾಹ್ಯ ಒತ್ತಡಗಳು ವಿಮರ್ಶಾ ಲೇಖನಗಳ ನಿರ್ಮಿತಿಗೆ ಕಾರಣವಾಗಿವೆ" ಎಂದಿದ್ದಾರೆ.

ಸುಮಾರು ವರ್ಷಗಳ ಕಾಲ ವಿಮರ್ಶೆ ಮತ್ತು ಸಂಶೋಧನೆಯಲ್ಲೇ ತೊಡಗಿದ ಅವರು "ಸೃಜನಶೀಲ ಬರವಣಿಗೆಯನ್ನು ಬರೆಯುತ್ತೇನೆ ಎಂದು ಅಂದುಕೊಂಡಿರಲಿಲ್ಲ" ಎಂದು ಹೇಳುತ್ತಾ ಜೊತೆಗೆ ಸಾಹಿತ್ಯ ಬರೆಯುವಾಗ ತಮ್ಮದೇ ಆದ ಸ್ಟ್ಯಾಂಡರ್ಡ್ ಮೇಂಯ್ಟನ್ ಮಾಡಬೇಕೆಂಬುದು ಇರುತ್ತದೆ. ಅದು ತನ್ನಿಂದ ಸಾಧ್ಯವೇ ಎಂಬ ಅಳುಕು ಬರವಣಿಗೆಯಲ್ಲಿ ತೊಡಗದಂತೆ ತಡೆದಿತ್ತು. ವಿಶಿಷ್ಟ ಸಂಧರ್ಭವೊಂದು ಅದರ ಸೃಷ್ಟಿಗೆ ಕಾರಣವಾಯಿತು ಎಂದು ಹೇಳುತ್ತಾರೆ. ಅದೆಂದರೆ ಭೂಮಿಗೌಡ ಅವರು ಮನೆ ಕಟ್ಟಿಸುವ ಸಂದರ್ಭದಲ್ಲಿ ಅದಕ್ಕೆ ಹೆಚ್ಚು ಒತ್ತು ನೀಡುತ್ತಿದ್ದರು. ಇದರಿಂದ ಏಕಾಂತ ಮತ್ತು ಬಿಡುವು ಸಿಕ್ಕಿತು. ಆಗ ಭಾವನೆಗಳನ್ನು ಯಾಕೆ ಬರೆದಿಡಬಾರದು ಎಂದುಕೊಂಡೆ. ಜೊತೆಗೆ ಗೆಳತಿಯರ ಬರವಣಿಗೆಯನ್ನು ಓದಿ ಮುನ್ನುಡಿ, ಬೆನ್ನುಡಿ ಬರೆಯುವ ಸಂದರ್ಭದಲ್ಲಿ ನಾನೂ ಏಕೆ ಅವರಂತೆ ಬರೆಯಬಾರದು ಎಂಬ ಪ್ರಶ್ನೆ ಎದುರಾಯಿತು ಇದು ಅವರ ಸೃಜನಶೀಲ ಸಾಹಿತ್ಯ ಹೊರಬರಲು ಕಾರಣವಾಯಿತು. ಈ ಸಂದರ್ಭದಲ್ಲಿ ಮೊದಲಿಗೆ ಕವನಗಳನ್ನು ಬರೆದೆ ಎನ್ನುತ್ತಾರೆ. ನಂತರ ಮತ್ತೊಮ್ಮೆ ಬಿಡುವು ಮತ್ತು ಏಕಾಂತ ದೊರೆಯಿತು. ಆಗ ಒಂದು ಕಥೆ ಬರೆದೆ ಅದರಿಂದ ನನಗೆ ನಿರಾಳವೆನಿಸಿತು. ಓದುಗರಿಂದ ಉತ್ತಮ ಪ್ರತಿಕ್ರಿಯೆ ದೊರೆಯಿತು ಎಂದು ಹೇಳಿದ್ದಾರೆ. ಅವರು ತಾವು ಏನನ್ನಾದರು ಬರೆದ ನಂತರ ಅದನ್ನು ಸ್ನೇಹಿತರಿಗೆ ನೀಡಿ ಅವರ ಅಭಿಪ್ರಾಯ ತಿಳಿದು ಮಾರ್ಪಾಡುಗಳಿದ್ದರೆ ಮಾಡಿ ನಂತರ ಪ್ರಕಟಣೆಗೆ ಕಳಿಸುತ್ತೇನೆ ಎನ್ನುತ್ತಾರೆ. ಇದು ಅವರ ವ್ಯಕ್ತಿತ್ವವನ್ನು ಬಿಂಬಿಸುತ್ತದೆ.

ಸಬಿಹಾ ಭೂಮಿಗೌಡ ಅವರ ಕೃತಿಗಳು:

ಸಬಿಹಾ ಅವರು ವಿಮರ್ಶೆಯ ಜೊತೆಗೆ ಸೃಜನಶೀಲ ಸಾಹಿತ್ಯದಲ್ಲಿ ತೊಡಗಿದ್ದು ಕಥೆ, ಕವನ, ಪ್ರಬಂಧ, ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. ಜೊತೆಗೆ ಸಂಶೋಧನೆ ಮತ್ತು ಸಂಪಾದನೆಯಲ್ಲೂ ಸಹ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರ ಕೃತಿಗಳೆಂದರೆ 'ಕಡಲ ತಡಿಯ ಮನೆ', ಮತ್ತು 'ಗೆರೆಗಳು' ಇವುಗಳು ಅವರ ಕಥಾ ಸಂಕಲನಗಳು. 'ಚಿತ್ತಾರ', ಅವರ ಕವನ ಸಂಕಲನ. 'ನುಡಿಹೊನಲು'(ಚಿಂತನ ಬರಹ), 'ಲೀಲಾಬಾಯಿಕಾಮತ್', 'ಕುಡ್ಪಿ ವಾಸುದೇವ ಶೆಣೈ', ಇವು ಜೀವನ ಚರಿತ್ರೆಗಳು. 'ಬಗೆ', 'ನಿಲುಮೆ', 'ಅನುಸಂಧಾನ', ಇವು ವಿಮರ್ಶಾ ಕೃತಿಗಳು. 'ನುಡಿಗವಳ', 'ಅವಿವಾಹಿತ ಮಹಿಳೆಯರ ಸಮಾಜೋ ಸಾಂಸ್ಕೃತಿಕ ಅಧ್ಯಯನ', 'ಲಿಂಗತ್ವ ಸಮನ್ವಾಯದೆಡೆಗೆ', 'ಸಾಹಿತ್ಯದ ಸಂಘರ್ಷದ ನೆಲೆಗಳು' ಇವು ಅವರ ಇತರ ಕೃತಿಗಳು ಇವಲ್ಲದೇ 'ಸರಸ್ವತಿ ರಾಜವಾಡೆಯವರ ಆಯ್ದ ಕತೆಗಳು', 'ನಾವು ಮತ್ತು ನಮ್ಮ ನಮ್ಮ ಪರಿಸರ', 'ಪ್ರಂಬಂಧ ೧೯೯೯', 'ಕರಾವಳಿಯ ಕಥೆಗಳು', 'ಕನ್ನಡ ಸಾಹಿತ್ಯ ಮತ್ತು ಮಹಿಳೆ', 'ಮಹಿಳಾ ಸಾಹಿತ್ಯ ಚರಿತ್ರೆ', 'ಕನ್ನಡ ಭಾಷಾ ಪ್ರವೇಶ' ಇವು ಅವರ ಇತರ ಕೃತಿಗಳು. ಇವಲ್ಲದೆ ಪ್ರತಿಕೆ ಮತ್ತು ನಿಯಕಾಲಿಕೆಗಳಲ್ಲಿ ಅನೇಕ ಲೇಖನ ಮತ್ತು ವಿಮರ್ಶೆಗಳನ್ನು ನಿರಂತರವಾಗಿ ಪ್ರಕಟಿಸುತ್ತಿದ್ದಾರೆ. ಜೊತೆಗೆ ವಿವಿಧ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡು ಪ್ರಗತಿಪರ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಅಲ್ಲದೆ ಇವರು ಕರಾವಳಿ ಲೇಖಕಿಯರು ಮತ್ತು ವಾಚಕಿಯರ ಸಂಘ, ಮಂಗಳೂರು ಇದರ ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿದ್ದಾರೆ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ ಇದರ ಸೆನೆಟ್ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ, ಮಂಗಳೂರು ವಿಶ್ವ ವಿದ್ಯಾಲಯದ ಡಾ. ಕೆ. ಶಿವರಾಮ ಕಾರಂತ ಪೀಠದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಪ್ರಶಸ್ತಿಯ ಬಗೆ ಯಾವುದೇ ಆಸೆ ಇಟ್ಟುಕೊಳ್ಳದ ಅವರು ಓದುಗ ವಲಯ ನೀಡುವ ಮೆಚ್ಚುಗೆ ಪ್ರಶಂಸೆಗಳೆ ದೊಡ್ಡ ಪ್ರಶಸ್ತಿ ಎನ್ನುತ್ತಾರೆ. ಜೊತೆಗೆ ಅವರ ಅನೇಕ ಕಥೆ ಮತ್ತು ಲೇಖನಗಳನ್ನು ಪಠ್ಯಗಳಾಗಿ ಆಯ್ಕೆ ಮಾಡಿರುವುದು ಅವರ ಸಾಹಿತ್ಯಕ್ಕೆ ಸಿಕ್ಕ ಮನ್ನಣೆಯಾಗಿದೆ. 'ಕನ್ನಡ ಜಾಣ'ಕ್ಕೆ ಬಣ್ಣಗಳು ಪ್ರಬಂಧ ಆಯ್ಕೆಯಾಗಿದೆ. ಮಹಾರಾಷ್ಟ್ರದ ಪಿ.ಯು ಬೋರ್ಡ್ ಗಂಗವ್ವ ಗಂಗಾಮಾಯಿ ಕಥೆಯನ್ನು ಆಯ್ಕೆ ಮಾಡಿಕೊಂಡಿದೆ. ಧಾರವಾಡ ವಿಶ್ವವಿದ್ಯಾಲಯದಲ್ಲಿ ಸಾರಾ ಅಬೂಬಕ್ಕರ್ ಬಗ್ಗೆ ಬರೆದಿರುವ ಲೇಖನ ಆಯ್ಕೆಯಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಪದವಿ ತರಗತಿಗಳಿಗೆ ಅವರ ಕಥೆ ಮತ್ತು ಲೇಖನಗಳು ಪಠ್ಯವಾಗಿವೆ. ಇವು ಅವರಿಗೆ ಸಂದ ಗೌರವ ಎಂದೇ ಹೇಳಬಹುದು.

ಒಟ್ಟಾರೆಯಾಗಿ ಸಬಿಹಾ ಭೂಮಿಗೌಡರವರ ಸಾಹಿತ್ಯ ಮಹತ್ವಪೂರ್ಣವಾಗಿದ್ದು ವಿಶಿಷ್ಟ ಮೌಲ್ಯಗಳನ್ನು ತಿಳಿಸುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಅವುಗಳ ಅವಶ್ಯಕತೆ ಇದ್ದು ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿರುವ ಸಬಿಹಾ ಅವರಿಂದ ಇನ್ನಷ್ಟು ಉತ್ತಮ ಕೃತಿಗಳು ಹೊರಬರುತ್ತವೆ ಎಂಬ ನಿರೀಕ್ಷೆ ಇದೆ.

ಅಧ್ಯಾಯ ೪

ಸಬಿಹಾ ಭೂಮಿಗೌಡ ಅವರ ಸಾಹಿತ್ಯ ಚಿಂತನೆ.

ಸಬಿಹಾ ಭೂಮಿಗೌಡ ಅವರು ಇಂದಿನ ಮಹಿಳಾ ಸಾಹಿತಿಗಳ ಸಾಲಿನಲ್ಲಿ ಪ್ರಮುಖರಾಗಿ ಕಾಣಿಸಿಕೊಳ್ಳುತ್ತಾರೆ. 'ಕಥೆ', 'ಕವನ', 'ಪ್ರಬಂಧ', 'ಜೀವನಚರಿತ್ರೆ', 'ವಿಮರ್ಶೆ', 'ಸಂಶೋಧನೆ', 'ಸಂಪಾದನೆ' ಮುಂತಾದ ಪ್ರಕಾರಗಳಲ್ಲಿ ತಮ್ಮ ಚಿಂತನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಜೀವನ, ಸಮಾಜ, ಧರ್ಮ ಇನ್ನೂ ಮುಂತಾದ ಅನೇಕ ಅಂಶಗಳನ್ನು ತಮ್ಮ ಸಾಹಿತ್ಯದಲ್ಲಿ ಚಿತ್ರಿಸಿದ್ದಾರೆ. ಸಾಮಾಜಿಕ ಸಂದರ್ಭದಲ್ಲಿ ಬದುಕು ಸಾಗಿಸುತ್ತಿರುವ ಮನುಷ್ಯ ಅನೇಕ ಕಷ್ಟ, ನಷ್ಟ, ನೋವು ನಲಿವುಗಳ ಅನುಭವ ಪಡೆಯುತ್ತಾನೆ. ಜೀವನದಲ್ಲಿ ಅನೇಕ ವೈರುಧ್ಯಗಳು ಎದುರಾಗುತ್ತವೆ. ಅವುಗಳ ನಡುವೆಯೂ ಪ್ರೀತಿಯನ್ನು ಅರಸುತ್ತಾ ಮಾನವೀಯ ಸಂಬಂಧಗಳನ್ನು ಉಳಿಸಿಕೊಂಡು ಹೊಸ ಸಂಸ್ಕೃತಿಯ ಸಾಧ್ಯತೆಯೆಡೆಗೆ ಹೋಗುವ ಪ್ರಯತ್ನ ಮಾಡಿದ್ದಾರೆ. ಸಮಾಜ ಜೀವನದಲ್ಲಿ ಸಹಕಾರ ಮತ್ತು ಸಾಮರಸ್ಯ ಮುಖ್ಯ ಎಂಬುದನ್ನು ಬಲವಾಗಿ ನಂಬಿ ಬದುಕಿನಲ್ಲಿ ಅವುಗಳ ಸಾಧ್ಯತೆಯ ಬಗ್ಗೆ ತಿಳಿಸಿದ್ದಾರೆ. ಇಂದು ವಿವಿಧ ಜಾತಿ ಮತ್ತು ವಿವಿಧ ಕೋಮುಗಳ ನಡುವೆ ನಡೆಯುತ್ತಿರುವ ಅತಿಯಾದ ವೈಷಮ್ಯವನ್ನು ಕಾಣುತ್ತಿದ್ದೇವೆ. ಆದರೆ ಸಬಿಹಾ ಅವರು ಇದರಿಂದ ದೂರವಾಗಿ ಬದುಕಲು ಸಾಧ್ಯ ಎಂಬುದನ್ನು ಬದುಕಿ ತೋರುತ್ತಿದ್ದಾರೆ. ಅಲ್ಲದೆ ಮನುಷ್ಯ ತನ್ನ ನಡುವಿನ ಜಾತಿ, ಧರ್ಮವನ್ನು ಮರೆತು ಅದರಾಚೆ ನಿಂತು ಮನುಷ್ಯನನ್ನು ಮನುಷ್ಯನನ್ನಾಗಿ ಮಾತ್ರ ನೋಡುವ ಪ್ರೀತಿ ವಿಶ್ವಾಸದಿಂದ ಬದುಕುವ ಆಸೆಯನ್ನು ವ್ಯಕ್ತಪಡಿಸಿದ್ದಾರೆ. ಅದರ ಸಾಧ್ಯತೆಗಳ ದಾರಿಯನ್ನು ತಮ್ಮ ಸಾಹಿತ್ಯದಲ್ಲಿ ತೋರಿಸಿಕೊಟ್ಟಿದ್ದಾರೆ.

ಮೌಲ್ಯಯುತ ಚಿಂತನೆಗಳನ್ನು ಹೊಂದಿರುವ ಸಬಿಹಾ ಅವರ ಸಾಹಿತ್ಯವನ್ನು ಪ್ರಕಾರಗಳಿಗನುಗುಣವಾಗಿ ವರ್ಗೀಕರಿಸಿಕೊಂಡು ವಿವಿಧ ಉಪ ಅಧ್ಯಾಯಗಳನ್ನಾಗಿ ಮಾಡಿಕೊಳ್ಳಲಾಗಿದೆ. ಮತ್ತೆ ಆ ಉಪ ಅಧ್ಯಾಯಗಳಲ್ಲಿ ವಿವಿಧ ಅಂಶಗಳನ್ನು ಗುರುತಿಸಿ ಅವರ ಸಾಹಿತ್ಯವನ್ನು ಈಕೆಳಗೆ ವಿಶ್ಲೇಷಣೆ ಮಾಡಲಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಅವುಗಳ ಓದು, ಅಧ್ಯಯನ, ಅಳವಡಿಕೆಯ ಅವಶ್ಯಕತೆಯನ್ನು ಕುರಿತು ಚರ್ಚಿಸಲಾಗಿದೆ.

೪.೧ ಕಥಾ ಸಾಹಿತ್ಯ

ಮಹಿಳೆ ಮತ್ತು ಕಥೆ ಇವುಗಳ ಸಂಬಂಧ ಪ್ರಾಚೀನವಾದುದು. ಕಥೆ ಹೇಳುವುದರಲ್ಲಿ ಮಹಿಳೆಯರದೇ ಮುಖ್ಯ ಸ್ಥಾನ. ಇದಕ್ಕೆ ಪ್ರಾಚೀನ ಕಾಲದಿಂದಲೂ ಉಳಿದುಕೊಂಡಿರುವ ಜನಪದ ಕಥಾಸಾಹಿತ್ಯ ನಿದರ್ಶನವಾಗಿದ್ದು, ಕಥನಕಲೆ ಹೆಣ್ಣಿನ ಜನ್ಮಜಾತ ಗುಣವೆಂದೇ ಹೇಳಬಹುದು. ಆರಂಭದಿಂದ ಈವರೆಗೂ ಕಥೆ ಲೇಖಕಿಯರ ಪ್ರಿಯವಾದ ಅಭಿವ್ಯಕ್ತಿ ಪ್ರಕಾರವಾಗಿ ಬೆಳೆದುಬಂದಿದೆ. ಹೆಣ್ಣು ಹೊರಹಾಕದೇ ನುಂಗಿಕೊಂಡ ಅನುಭವಗಳು ಆಕೆಯ ಮನಸ್ಸಿನಲ್ಲಿ ಕಥೆಗಳಾಗಿ ಹರಳುಗಟ್ಟಿರುತ್ತವೆ. ಹೆಣ್ಣುಮಕ್ಕಳ ಮಾತುಕಥೆಗಳೆಲ್ಲ ಅಡುಗೆ ಮನೆಯಲ್ಲೇ ನಡೆಯುವುದರಿಂದ ಅದು ಕಥೆಯ ಕಣಜದಂತಿದೆ. ಪ್ರತಿಯೊಂದು ಹೆಣ್ಣು ಹೃದಯವೂ ಕಥೆಯ ಆಗರವೇ ಆಗಿದೆ. "....ನಮ್ಮ ಮನೆಯ ಒಳ ಅಂಗಳ ಎಂದರೆ ಅಮ್ಮನ ಸಾಮ್ರಾಜ್ಯ. ಕಥಾನಕಗಳ ಆಗರವದು. ಎಷ್ಟು ಜನ ಬರುತ್ತಿದ್ದರು, ಸುಃಖ–ದುಃಖ, ಕಥನ, ಹಾಡು, ಹಸೆ ಅದೊಂದು ಮನುಷ್ಯ ಲೋಕದ ದೊಡ್ಡ ದರ್ಶನ ಎಂತಲೇ ಬರೆಯಲು ಹೊರಟ ನನಗೆ ಸಣ್ಣ ಕಥೆಯೇ ಒಂದು ಸಾಧನವಾಗಿ ಸಿಕ್ಕಿತೇನೋ ಎಂದು ವೈದೇಹಿಯವರು ಹೇಳುವ ಮಾತುಗಳಲ್ಲಿ ಇದೇ ಅರ್ಥ ಧ್ವನಿಸಿದೆ"[೧]

ಜೀವನ ನಾಟಕದಲ್ಲಿ ಗಂಡಿನ ಪಾತ್ರಗಳು ಹೆಚ್ಚು ಬದಲಾಗುವುದಿಲ್ಲ. ಆದರೆ ಹೆಣ್ಣು ಮಾತ್ರ ತನಗೆ ಬೇಕಿರಲಿ, ಬೇಡದಿರಲಿ ವಿವಿಧ ಪಾತ್ರಗಳನ್ನು ಒಪ್ಪಿಕೊಂಡು ನಿರ್ವಹಿಸಲೇ ಬೇಕಾಗುತ್ತದೆ. ಇದರಿಂದ ಪ್ರತಿಯೊಂದು ಹೆಣ್ಣಿಗೂ ತನ್ನದೇ ಆದ ಕಥೆ ರೂಪುಗೊಂಡು ಅವಳ ಕಥೆಯೇ ಕಥೆಗೆ ವಸ್ತುವೂ ಆಗಿಬಿಡುತ್ತದೆ. ಈ ರೀತಿ ಅನೇಕ ಲೇಖಕಿಯರು ಕಥೆಗಳನ್ನು ಬರೆದಿರುವುದನ್ನು ಕಾಣಬಹುದು.

ಅಂತೆಯೇ ಸಬಿಹಾ ಭೂಮಿಗೌಡ ಅವರು ಸಹ ಎರಡು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. **೨೦೦೯**ರಲ್ಲಿ ಪ್ರಕಟವಾದ **'ಕಡಲ ತಡಿಯ ಮನೆ'** ಹನ್ನೊಂದು ಕಥೆಗಳನ್ನು ಒಳಗೊಂಡಿದೆ. ಇದು ಅವರ ಮೊದಲ ಕಥಾಸಂಕಲನ. **೨೦೧೨**ರಲ್ಲಿ ಪ್ರಕಟವಾದ **'ಗೆರೆಗಳು'** ಅವರ ಮತ್ತೊಂದು ಕಥಾಸಂಕಲನ. ಇದರಲ್ಲಿ ಮೊದಲ ಕಥಾಸಂಕಲನದ ಒಂದು ಕಥೆ ಸೇರಿ ಒಂಬತ್ತು ಕಥೆಗಳಿವೆ. ಇತರ ಕಥೆಗಾರ್ತಿಯರ ಎದುರು ಸಬಿಹಾ ಭೂಮಿಗೌಡ ಅವರು ವಿಶಿಷ್ಟವಾಗಿ ಕಾಣುತ್ತಾರೆ. ಅದಕ್ಕೆ ಕಾರಣ ಅವರು ಕಥೆಗೆ ಆರಿಸಿಕೊಂಡಿರುವ ವಸ್ತು ವಿಷಯ ಮತ್ತು ಕಥೆ ಕಟ್ಟಿರುವ ರೀತಿ. ಸೂಕ್ಷ್ಮ ಸಂವೇದನೆಗಳು ಕಥೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಅವರ ಕಥೆಗಳಲ್ಲಿ ಮುಖ್ಯವಾಗಿ ಸ್ತ್ರೀ ಜೀವನ, ಕುಟುಂಬ ಮತ್ತು ಸಮಾಜ, ಧಾರ್ಮಿಕ ಅಂಶಗಳು ಪ್ರಧಾನವಾಗಿದ್ದು, ಅವುಗಳ ಆಧಾರದ ಮೇಲೆ ಕಥೆಗಳನ್ನು ವರ್ಗೀಕರಿಸಿಕೊಂಡು ವಿಶ್ಲೇಷಣೆಯನ್ನು ಮಾಡಲಾಗಿದೆ.

೪.೧.೧ ಜೀವನ

ಮಹಿಳಾ ಪರ ಚಿಂತಕಿಯಾಗಿರುವ ಸಬಿಹಾ ಭೂಮಿಗೌಡ ಅವರು ಮಹಿಳಾ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದ್ದು, ಆಕೆಯ ಜೀವನದ ನೆಲೆಯನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಕುಟುಂಬದಲ್ಲಿ ಹೆಣ್ಣಿನ ಸ್ಥಾನ, ದಾಂಪತ್ಯ ಜೀವನದಲ್ಲಿ ಅವಳು ಅನುಭವಿಸುತ್ತಿರುವ ಸುಖ-ದುಃಖ, ಮಾನಸಿಕ ತಳಮಳ, ಪುರುಷನಿಂದ ಆಕೆಯ ಮೇಲಾಗುತ್ತಿರುವ ದಬ್ಬಾಳಿಕೆ, ದೌರ್ಜನ್ಯ, ಅದನ್ನೆಲ್ಲ ಕಂಡೂ ಕಾಣದಂತೆ ಸಹಿಸುತ್ತಾ ರಾಜಿ ಮಾಡಿಕೊಳ್ಳುವ ರೀತಿ-ಇವೆಲ್ಲವನ್ನು ತಮ್ಮಕಥೆಗಳಲ್ಲಿ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ 'ಇಡಿಗಾಳು', 'ಬಿಟ್ಟೆನೆಂದರೆ ಬಿಡದೀ.......', 'ಸೆರಗಿನ ಕೆಂಡ', 'ಅಪೂರ್ಣರು', 'ಗೆರೆಗಳು', 'ಕಲ್ಲಾದವರು' ಕಥೆಗಳನ್ನು ಗಮನಿಸಬಹುದಾಗಿದೆ.

ಸಬಿಹಾ ಭೂಮಿಗೌಡ ಅವರ ಎರಡೂ ಸಂಕಲನದಲ್ಲಿ ಸೇರಿರುವ ಪ್ರಮುಖ ಕಥೆ **'ಇಡಿಗಾಳು'**. ದಾಂಪತ್ಯದಲ್ಲಿ ಗಂಡು-ಹೆಣ್ಣು ಇಬ್ಬರೂ ಇಡಿಗಾಳಿನಂತೆ ಇರಬೇಕು. ಬೇಂದ್ರೆಯವರು ತಮ್ಮ 'ಮನದನ್ನೆ' ಕವನದಲ್ಲಿ

"ಇದಿರಾಡದಿರು ಮತ್ತೆ
ಎದಿರಾಡದಿರು ಇತ್ತ
ಮಾಡದಿರು ಬಾಳನ್ನು ಬೇಳೆಯಂತೆ
ಕೂಡಿರಲಿ ಬಾಳು ಇಡಿಗಾಳಿನಂತೆ"

ಎಂದು ತಮ್ಮ ಮನದನ್ನೆಗೆ ಹೇಳಿದ್ದಾರೆ. ದಾಂಪತ್ಯ ಜೀವನದ ಯಶಸ್ಸಿಗೆ ಗಂಡು-ಹೆಣ್ಣಿನ ಪಾತ್ರ ಇಡಿಗಾಳಿನಂತೆ ಇರಬೇಕು ಎಂಬುದು ಮುಖ್ಯ. ಹಾಗೆಂದುಕೊಂಡರೂ ಸಹ ವಾಸ್ತವವಾಗಿ ಅದು ಬಿಡಿಬೇಳೆ ಆಗಿಯೇ ಉಳಿಯುತ್ತದೆ ಎಂಬುದನ್ನು ಬಿಚ್ಚಿ ತೋರುವ ರೀತಿಯನ್ನು ಸಬಿಹಾ ಅವರ ಕಥೆಯಲ್ಲಿ ಕಾಣಬಹುದು.

ದಾಂಪತ್ಯದಲ್ಲಿ ಹೆಣ್ಣು-ಗಂಡು ಇಬ್ಬರೂ ಪ್ರೀತಿ, ಸಹಕಾರ, ಸಮಾನತೆಯಿಂದ ಇರಬೇಕು. ಅಂಥ ಜೀವನ ಸಿಕ್ಕಾಗ ಇಬ್ಬರಿಗೂ ಹೆಮ್ಮೆ ಅಂತೆಯೇ ಕಥಾನಾಯಕಿ ನಫೀಸಾ ತನ್ನ ಬಾಳಸಂಗಾತಿ ಸದಾಶಿವನಲ್ಲಿ ಆ ಗುಣಗಳಿರುವುದನ್ನು ಕಂಡು ಹೆಮ್ಮೆ ಪಡುತ್ತಾಳೆ. ಇತರರ ಜೀವನಕ್ಕಿಂತ ತನ್ನದು ಉತ್ತಮ ಜೀವನ ಎಂದು ಸಮರ್ಥಿಸುತ್ತಲೇ ಬಂದ ನಫೀಸಳಿಗೆ ಪ್ರವಾಸದ ಸಂದರ್ಭದಲ್ಲಿ ಎದುರಾದ ಸದಾಶಿವನ ವರ್ತನೆ ನೀಡುವ ಆಘಾತ ಎಂಥದ್ದು ಮತ್ತು ಪುರುಷನಲ್ಲಿ ಅಹಂ ಎನ್ನುವುದು ಮನೆಮಾಡಿದ್ದು, ಅದು ಹೆಣ್ಣಿನಿಂದ ತನ್ನನ್ನು ಪ್ರತ್ಯೇಕಿಸಿಕೊಳ್ಳುತ್ತದೆ ಎಂಬುದನ್ನು ಕಥೆ ತಿಳಿಸುತ್ತದೆ.

ಪ್ರವಾಸಕ್ಕೆ ಬಂದಿದ್ದ ಸಂದರ್ಭದಲ್ಲಿ ನಫೀಸಾ, ರವಿ ಮತ್ತು ಕಮಲರನ್ನು ಹೋಟೆಲಿನ ಹೊರಗೆ ಕೂರಿಸಿ ಸದಾಶಿವ "ನಾನು ಸ್ವಲ್ಪ ಹೊತ್ತಲ್ಲಿ ಬರ್ತೀನಿ" ಎಂದು ರಮೇಶನೊಂದಿಗೆ ಹೋಟೆಲಿನೊಳಗೆ ಹೋಗುತ್ತಾನೆ. ಆ ಸಂದರ್ಭದಲ್ಲಿ ನಫೀಸಾ ಪ್ರವಾಸದ ಅನುಭವದ ಸವಿಯನ್ನು ಸವಿಯುತ್ತಾ ತನ್ನ ತಾಯಿಯ ಜೀವನದಲ್ಲಿ ಅಪರೂಪಕ್ಕೆ ಘಟಿಸಿದ ಮಹತ್ವದ ಘಟನೆಗಳನ್ನು ನೆನಪಿಸಿಕೊಳ್ಳುತ್ತಾಳೆ. ಸಮಾಜದ ಕಟ್ಟುಪಾಡುಗಳನ್ನು ತಿರಸ್ಕರಿಸಿ, ತಂದೆತಾಯಿಯರನ್ನು ಎದುರು ಹಾಕಿಕೊಂಡು ಪರಸ್ಪರ ಇಷ್ಟಪಟ್ಟು ವಿವಾಹವಾದರೂ ಸಹ ತಮ್ಮ ಜೀವನದ ಬಗ್ಗೆ ಹೆಮ್ಮೆ ಇದೆ. ಅಂಥ ಹೆಮ್ಮೆಯ ಕ್ಷಣಗಳಲ್ಲೆಲ್ಲ ಅಮ್ಮನನ್ನು ನಫೀಸಾ ಎದುರುಗೊಳ್ಳುತ್ತಾಳೆ. "ನೋಡಿದ್ಯಾ ಅಮ್ಮ, ನೀನು ಬೇಡ ಬೇಡ ಅಂತ ಹೆದರಿಸಿದ್ದೆಯಲ್ಲಾ; ನಾಳೆ ನಿನ್ನ ಕೈಬಿಟ್ಟಾನು ಎಂದು ಬೆಚ್ಚಿ ಬೀಳಿಸಿದ್ದೆಯಲ್ಲ......... ನೀನು ದಶಕಗಳ ಕಾಲ ತಪಸ್ಸು ಮಾಡಿ, ಕ್ಷಣ ಕಾಲ ದಕ್ಕಿಸಿಕೊಂಡ ಸುಖ ನಮ್ಮ ಬದುಕಿನ ಉಸಿರಾಗಿದೆ" ಎಂದು ಸಮರ್ಥಿಸಿಕೊಂಡಿದ್ದಳು. ಈ ನೆನಪಿನಿಂದ ಹೊರಬಂದ ನಫೀಸಾಳಿಗೆ ತನ್ನ ಗಂಡ ಇನ್ನೂ ಬಾರದಿರುವುದು ಒಗಟಾಗಿ ಕಂಡಿತು. ಆದರೆ ಕಮಲಾ "ನಿಮ್ಗಿನ್ನೂ ಗೊತ್ತಿಲ್ವಾ? ಅವರು 'ತೀರ್ಥ' ತಗೊಳ್ಳಲು ಹೋಗಿದ್ದಾರೆ ಎಂದು ಹೇಳಿದಾಗ ಮಾತ್ರ ಅದನ್ನು ಅರಗಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅದುವರೆಗೂ ತಾನು ಇಟ್ಟಿದ್ದ ನಂಬಿಕೆ ವಿಶ್ವಾಸಗಳು ಒಮ್ಮೆಲೇ ಕಳಚಿ ಬಿದ್ದಂತಾಯಿತು. ಎಷ್ಟೇ ವಾದ-ವಿವಾದ ನಡೆದರೂ ಒಮ್ಮತಕ್ಕೆ ಬರಲು ಸಾಧ್ಯವಾಗಲಿಲ್ಲ. ಆಗ ಕೋಪಗೊಂಡ ಸದಾಶಿವ "ಯಾಕೊ ನಿಂದು ಅತಿಯಾಯ್ತು, ಅಷ್ಟಕ್ಕೂ ನಿಮಗೆ ಏನು ಕೊರತೆ ಮಾಡಿದ್ದೇವೆ? ಬೆಳಗಿನಿಂದ ನಿಮ್ಮ ಜೊತೆ ಹಾಯಾಗಿ ಕಳೆದಿಲ್ವಾ? ನಿಮಗೆ ಎಲ್ಲಾ ಸಂತೋಷ ಕೊಟ್ಟು ಸಂಜೆ ಒಂದುಗಂಟೆ ನಾವು ಬಾರಿ ಗೆ ಹೋಗಿ ಬಂದರೆ ಇಷ್ಟು ರಂಪ ಮಾಡ್ತಾರ? ಎಂದು ಸಿಡುಕಿದ. ಅವನ ಮಾತುಗಳನ್ನು ಕೇಳಿದ ನಫೀಸಾಳಿಗೆ ಇನ್ನಷ್ಟು ಆಘಾತವಾಯಿತು. ಆ ಮಾತುಗಳಲ್ಲಿ ತನ್ನ ಮತ್ತು ಆತನ ನಡುವೆ ಪ್ರತ್ಯೇಕತೆ ಇರುವುದು ಕಂಡಿತು. ಆಗ ವ್ಯಾವಹಾರಿಕ ಜಗತ್ತಿನಿಂದ ಅಮ್ಮನನ್ನು ಸಂಪೂರ್ಣವಾಗಿ ಅನ್ಯವಾಗಿಸಿದ್ದ ಅಪ್ಪನ ನಡಾವಳಿಗೂ ಸದಾಶಿವನ ನಡಾವಳಿಗೂ ಏನು ವ್ಯತ್ಯಾಸ? ಎಂಬ ಪ್ರಶ್ನೆ ಮೂಡತೊಡಗಿತು. ಇದುವರೆಗೂ ಇದ್ದ ನಂಬಿಕೆಯ ಕೊಂಡಿ ಒಮ್ಮೆಲೇ ಕಳಚಿಬಿದ್ದಾಗ ಆತನ ಬಗ್ಗೆ ಅನುಮಾನ ಮೂಡಿತು. "ನಮ್ಮಲ್ಲಿ ಎಲ್ಲವೂ ಖುಲ್ಲಂ ಖುಲ್ಲಾ, ನಿನ್ನ ಬಿಟ್ಟು ನಿನಗೆ ತಿಳಿಯದಂತೆ ನನ್ನ ಜಗತ್ತಿಲ್ಲ" ಎಂದು ಹೇಳುತ್ತಾ ಜೀವನದ ಹೊಸ ಲೋಕವನ್ನು ತೋರಿದ ಸಂಗಾತಿ ಇವನೆಯೇ? ಎಂಬ ಅನುಮಾನ ಮೂಡಿತು. ಅಷ್ಟೇ ಅಲ್ಲ "ಇವನ ಒಳಗೂ ಎಲ್ಲೋ ಮೂಲೆಯಲ್ಲಿ ಪುರುಷಾಹಂಕಾರ ಹೆಡೆಯೆತ್ತಿ ಹೇಗೆ ಭುಸುಗುಡುತ್ತಿದೆ!" ಎಂಬ ಆಶ್ಚರ್ಯ. ಆತನ ಹಿಂದಿನ ಮತ್ತು ಇಂದಿನ ನಡವಳಿಕೆಗಳ ಬಗ್ಗೆ ಗೊಂದಲಗೊಂಡ ನಫೀಸಾಳಿಗೆ "ಹಾಗಾದರೆ...... ಸಂಗಾತಿತನದ ಅರ್ಥವಾದರೂ ಏನು..? ಬೇಳೆಯಾಗದೆ ಕಾಳಾಗಿ ಬದುಕುವುದು ಹೇಗೆ?" ಎಂಬ ಪ್ರಶ್ನೆಗಳು ಎದುರಾದವು.

ದಾಂಪತ್ಯದಲ್ಲಿ ಗಂಡ-ಹೆಂಡತಿ ಇಬ್ಬರು ಎಷ್ಟೇ ಪ್ರೀತಿ, ವಿಶ್ವಾಸದಿಂದ ಸಮಾನತೆಯಿಂದ ಜೀವನ ನಡೆಸಿದರೂ ಸಹ ಪುರುಷ ತಾನು ಮೇಲು ಎಂದು ಭಾವಿಸಿ ಹೆಣ್ಣಿನ ಮೇಲೆ ತನ್ನ ದರ್ಪ ತೋರುತ್ತಾ ಆಕೆಯನ್ನು ಪ್ರತ್ಯೇಕಗೊಳಿಸಿ ಬಾಳು ಇಡಿಗಾಳಿನಂತೆ ಇರಲು ಬಿಡದೆ ಬೇಳೆ ಮಾಡಲು ಹೊರಡುವ ಆತನ

ಹುಚ್ಚುಗಾರಿಕೆ, ಇದರಿಂದಾಗಿ ಹೆಣ್ಣು ಮಾನಸಿಕ ತೊಳಲಾಟಕ್ಕೆ ಸಿಲುಕುವ ಬಗೆ ಈ ಕಥೆಯಲ್ಲಿ ಚಿತ್ರಿತವಾಗಿದ್ದು ಇಂದಿಗೂ ಅದನ್ನು ಕಾಣಬಹುದಾಗಿದೆ.

'ಬಿಟ್ಟೆನೆಂದರೆ ಬಿಡದೀ....' ಎಂಬ ಕಥೆಯಲ್ಲಿ ಹೆಣ್ಣು ಸಂಸಾರದಲ್ಲಿ ತನ್ನನ್ನು ತೊಡಗಿಸಿಕೊಂಡ ಬಗೆ ಮತ್ತು ಅದರಿಂದ ಹೊರಬರಲಾರದ ಸ್ಥಿತಿಯನ್ನು ತಿಳಿಸುತ್ತದೆ.

ಹೆಂಡತಿಯ ಮೇಲೆ ಪ್ರೀತಿ, ಕಾಳಜಿ ಇರುವ ಗಂಡ; ಗಂಡ ಮಕ್ಕಳ ಜವಾಬ್ದಾರಿ ಇರುವ ದುಡಿಯುವ ಹೆಂಡತಿ. ಬೆಳಗ್ಗೆ ೬ ಗಂಟೆಗೆ ಎದ್ದು ಮನೆ ಕೆಲಸ ಮುಗಿಸುವ ಜವಾಬ್ದಾರಿ ಆಕೆಗಿದ್ದರೆ, ಬೆಳಗಿನ ಸಕ್ಕರೆ ನಿದ್ದೆಯ ಸವಿಯನ್ನು ಹೆಂಡತಿಯ ಜೊತೆ ಮಾಡಬೇಕೆಂಬ ಆಸೆ ಆತನದು. ಆಕೆಗೂ ಅಂಥ ನಿದ್ದೆ ಹಿತ. ಆದರೆ ಹಾಗೆ ಮಾಡಲಾಗದ ಸ್ಥಿತಿ ಆಕೆಯದು.

"ನಾನು ಬೆಳಗಿನ ಜಾವ ಕಣ್ತುಂಬ ನಿದ್ದೆ ಮಾಡಿ ಎಷ್ಟು ದಿನ ಆಯ್ತು. ಮುಂಚಿನ ದಿನಗಳೇ ಚನ್ನಾಗಿದ್ವು. ಮೈ ಮರೆತು ಬೆಳಗಿನ ಎಂಟರವರೆಗೆ ಮಲ್ಕೋತಾ ಇದ್ದ ದಿನಗಳು ಕಳೆದೇ ಹೋದವು" ಎಂದು ಗೊಣಗುವ ಆಕೆಗೆ ಗಂಡ ಮಗಳಿಬ್ಬರು 'ಈಗಲೂ ಮಲಗು ಯಾರು ಬೇಡ ಎಂದವರು' ಎಂಬ ಉತ್ತರ ನೀಡುತ್ತಾರೆ. ಅದು ಆಕೆಗೆ ಸಾಧ್ಯವಿಲ್ಲ. ನಿದ್ದೆಯನ್ನು ಕಳೆದುಕೊಳ್ಳುವುದರ ಜೊತೆಗೆ ಕೆಲಸದ ಒತ್ತಡ. ಅದನ್ನು ಗಮನಿಸಿಯೂ ಆತ ಎಂದೂ ಸಹಾಯಕ್ಕೆ ಬರಲಿಲ್ಲ. ಈಕೆಯೂ ಕೂಡ ಆತನನ್ನು ಎಂದೂ ಕರೆಯಲಿಲ್ಲ. ನಾನ್ ಏಳ್ಬೇಕಾ? ಎಂದು ಕೇಳಿದಾಗಲೂ ಆಕೆಗೆ ಹೌದು ನಿನ್ನ ಸಹಾಯದ ಅವಶ್ಯಕತೆ ನನಗಿದೆ ಎಂದು ಹೇಳಲು ಸಾಧ್ಯವಾಗುತ್ತಿಲ್ಲ.

ಎಲ್ಲಾ ಮನೆಯ ಹೆಂಗಸರೂ ಬೆಳಿಗ್ಗೆ ಬೇಗ ಏಳುವುದು ರೂಢಿ. ಹಾಗೆ ತಾನು ಸಹ. ಹೀಗೆ ಏಳಹೊರಟಾಗ " 'ನಾನೂ ಏಳಲೇ' ಎಂದು ಕೇಳುವ ಸೌಜನ್ಯ, ಏಳುವ ವೇಳೆಯಲ್ಲಿ ತೋಳುನೀಡಿ ಐದು ನಿಮಿಷ ಸಂತೈಸಿ ಕಳುಹಿಸುವ ಆತನ ಕಕ್ಕುಲತೆ ಅವಳಿಗೆ ಅದ್ಭುತ ಬದಲಾವಣೆ ಎನ್ನಿಸಿತು". ಎಂಬ ಸಾಲುಗಳು ಹೆಣ್ಣು ಹೇಗೆ ಸುಲಭವಾಗಿ ಕರಗಿ ಬಲಿಯಾಗುತ್ತಾಳೆ ಎಂಬುದಕ್ಕೆ ನಿದರ್ಶನವಾಗಿವೆ ಮತ್ತು ಅಂಥ ಮನಸ್ಥಿತಿಯೇ ಆಕೆಯ ಇಂದಿನ ಪರಿಸ್ಥಿತಿಗೆ ಕಾರಣವೂ ಆಗಿದೆ ಎಂಬುದು ಗಮನಿಸಬೇಕಾದ ಅಂಶ.

ರಜಾದಿನಗಳಲ್ಲಿ ಆಕೆ ಮೈಮರೆತು ಮಲಗಿದರೆ ಅದಕ್ಕೆ ಗಂಡ ಎಂದೂ ಗೊಣಗಿಲ್ಲ. ಗಂಡ ಮಕ್ಕಳ ಸಮ್ಮತಿ ಇದ್ದರೂ ಆಕೆಗೆ ಮಲಗಲು ಸಾಧ್ಯವಾಗುತ್ತಿಲ್ಲದಿರುವುದು ಹೆಣ್ತನದ ಜವಾಬ್ದಾರಿಯಿಂದಲೇ ಎಂಬುದು ತಿಳಿಯುತ್ತದೆ.

ಬದುಕು ಆಕೆಗೆ ಯಾಂತ್ರಿಕ ಎನಿಸುತ್ತದೆ. ಆತ ಮಲಗಿರುವಾಗ, ತನಗೆ ರಜೆಯಿದ್ದು, ತಾನೇಕೆ ಏಳಬೇಕೆಂದು ಒತ್ತಾಯದಿಂದ ಮಲಗುವ ಆಕೆಗೆ ಹಾಸಿಗೆ ಮುಳ್ಳಿನ ಗಾದಿಯೆನಿಸುತ್ತದೆ. ಮತ್ತು ಗಂಡ ಆಡಿದ ಪ್ರೀತಿಯ ಮಾತುಗಳು ಆಕೆಯನ್ನು ಮಲಗಲು ಬಿಡಲಿಲ್ಲ. ಕರ್ತವ್ಯ ಪ್ರಜ್ಞೆಯಿಂದ ಎದ್ದು ಬಂದ ಆಕೆಗೆ ಹೋಟೆಲಿನಿಂದ ತಿಂಡಿ ಪ್ಯಾಕೆಟ್ ಹಿಡಿದು ಬಂದ ಗಂಡ ಎದುರಾದ. ಅವನ ಮುಖವನ್ನೇ ನೋಡುತ್ತಿದ್ದ ಆಕೆಯನ್ನು ಅಂತಃಕರಣದಿಂದ ಏನ್ ಹಾಗೆ ನೋಡ್ತಾ ಇದ್ದೀಯಾ? ನಿದ್ದೆ ಆಯ್ತಾ? ನಿನಗೆ ರಜೆ ಇತ್ತಲ್ಲ, ಇನ್ನು ಸ್ವಲ್ಪ ಹೊತ್ತು ಮಲ್ಕೋಬಾರ್ದಿತ್ತಾ?" ಎಂದು ಕೇಳಿದಾಗ ಆಕೆಯಲ್ಲಿ ಧನ್ಯ ಭಾವ ಮೂಡಿತು. ಅದನ್ನು ಅನುಭವಿಸುವ ಮನಃಸ್ಥಿತಿ ಆಕೆಗಿಲ್ಲದ್ದು ಮತ್ತಷ್ಟು ಚಡಪಡಿಕೆಯನ್ನುಂಟುಮಾಡಿತು.

ಇಲ್ಲಿ ಹೆಣ್ಣಿಗೆ ತಾನು ಗಂಡಿನಂತೆ ನಿರಾತಂಕವಾಗಿ ಇರಲೂ ಆಗದೆ, ತಾನು ಅಂಟಿಸಿಕೊಂಡಿರುವ ಜವಾಬ್ದಾರಿಯಿಂದ ಹೊರಬರಲೂ ಆಗದೆ ಗೊಂದಲದಲ್ಲಿ ಸಿಲುಕಿ ಅಸ್ವಸ್ಥತೆ ಅನುಭವಿಸುವುದನ್ನು ಕಾಣಬಹುದು.

ಸಬಿಹಾ ಭೂಮಿಗೌಡ ಅವರು ತಮ್ಮ ಕಥೆಗಳಲ್ಲಿ ಮುಖ್ಯವಾಗಿ ಹೆಣ್ಣು ಯಾರೊಡನೆಯೂ ಹೇಳಿಕೊಳ್ಳಲಾಗದೇ ಅನುಭವಿಸುವ ಮಾನಸಿಕ ಯಾತನೆಗಳನ್ನು, ಭಾವನೆಗಳ ಎಳೆ ಎಳೆಯನ್ನು ಬಿಚ್ಚಿಡುವ ಕೆಲಸ ಮಾಡಿದ್ದು, ಅದು ಪ್ರಸ್ತುತದ ಅವಶ್ಯಕತೆಯೂ ಆಗಿದೆ. ಆ ಮೂಲಕವಾದರೂ ಆಕೆಯ ಭಾವನೆಗಳಿಗೆ ಬೆಲೆ ಸಿಗುವಂತಾಗಬೇಕು, ಪ್ರತೀ ಹೆಣ್ಣು ಸಂಸಾರದಲ್ಲಿ ಒಂದಲ್ಲ ಒಂದು ರೀತಿಯ ನೋವನ್ನು ಅನುಭವಿಸುತ್ತಿರುತ್ತಾಳೆ. ಹೇಳಲೂ ಆಗದ, ಸಹಿಸಲೂ ಆಗದ ವಾತಾವರಣದಲ್ಲಿ ಆಕೆ ಜೀವನ ನಡೆಸುತ್ತಿದ್ದಾಳೆ. ಸಂಸಾರ ಎಂಬುದು ಹೆಣ್ಣಿನ ಪಾಲಿಗೆ ಕೆಂಡದಂತೆ, ಸೆರಗಿಗೆ ಕಟ್ಟಿಕೊಂಡರೆ ಸುಡದೆ ಬಿಡದು ಎಂಬುದನ್ನು **'ಸೆರಗಿನ ಕೆಂಡ'** ಕಥೆಯಲ್ಲಿ ಕಾಣಬಹುದು. ಜೊತೆಗೆ ತನ್ನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮಹಿಳಾ ನ್ಯಾಯಾಲಯದ ಸೃಷ್ಟಿ ಮಾಡಿರುವುದು ನಿಜವಾಗಿಯೂ ಮಹಿಳಾ ಹೋರಾಟದ ಬೆಳವಣಿಗೆಯ ಹೆಜ್ಜೆಯಾಗಿದೆ.

ಪರಸ್ಪರ ಪ್ರೀತಿ, ಕಾಳಜಿ ಇರುವ ರಮೇಶ ಮತ್ತು ವಿಜಯಾ ಕೆಲವು ವಿಚಾರಗಳಲ್ಲಿ ಮಾತ್ರ ಮುಖಾಮುಖಿಯಾಗುತ್ತಾರೆ. ಮಕ್ಕಳನ್ನು ಪ್ರತ್ಯೇಕ ಕೋಣೆಯಲ್ಲಿ ಮಲಗಿಸಬೇಕೆಂಬ ವಿಚಾರದಲ್ಲೂ ಸಹ ಇದೇ ನಿಲುವು. ಅವರು ರಾತ್ರಿಯ ತಮ್ಮ ಚುಟುವಟಿಕೆಗಳನ್ನು ಅರಿತರೆ ಎಂಬ ಭಯ ಆಕೆಗೆ. ಜೊತೆಗೆ ಅವರು ಸ್ವಾವಲಂಬಿಗಳಾಗಬೇಕೆಂದು ಅವರನ್ನು ಪ್ರತ್ಯೇಕ ಕೋಣೆಯಲ್ಲಿ ಮಲಗಿಸೋಣವೆಂದು ಹೇಳಿದರೆ ರಮೇಶ ಅದಕ್ಕೆ ಒಪ್ಪುತ್ತಿಲ್ಲ. ಆದರೆ ಆಕೆಗೆ ರಾತ್ರಿ ಆತ ತನ್ನ ಆಸಕ್ತಿಯನ್ನು ತೋರಿದಾಗ ಅದಕ್ಕೆ ಸ್ಪಂದಿಸಲು ಆಗುತ್ತಿಲ್ಲ, ನಿರಾಕರಿಸಲು ಆಗುತ್ತಿಲ್ಲ. ಆಗ ಆಕೆ ಸ್ವಮರುಕದಲ್ಲಿ ಸಿಲುಕುತ್ತಾಳೆ. ಎಷ್ಟೋ ಹೆಣ್ಣು ಮಕ್ಕಳ ಜೀವನ ಹೀಗೆ ನಡೆಯುತ್ತಿದೆ.

ವಿಜಯಾಳ ಗೆಳತಿ ಮಂಜುಳಾಳಿಗೆ ಆಗಾಗ ಹಲವು ಬೇಡಿಕೆಗಳನ್ನು ಹೊತ್ತು ತವರಿಗೆ ಬರುತ್ತಿದ್ದ ನಾದಿನಿಯದೇ ದೊಡ್ಡ ತಲೆನೋವು. ನಾದಿನಿಯ ಮೇಲೆ ಸಿಟ್ಟು ಜೊತೆಗೆ ಆಕೆಯ ಸ್ಥಿತಿ ಕಂಡು ಮರುಕವೂ ಇದೆ. ವಿಜಯಾ ಮಂಜುಳಾಳನ್ನು ಮಹಿಳಾ ನ್ಯಾಯಾಲಯಕ್ಕೆ ಕರೆದೊಯ್ಯುತ್ತಿದ್ದಳು. ಅದು ನೊಂದ ಮಹಿಳೆಯರಿಗೆ ತಮ್ಮ ನೋವನ್ನು ತೋಡಿಕೊಳ್ಳಲು ರೂಪಿಸಿಕೊಂಡ ಒಂದು ವೇದಿಕೆ. ಜನರಲ್ಲಿ ಜಾಗೃತಿ ಮೂಡಿಸುವ, ಅವರ ಸಾಮಾಜಿಕ ಜವಾಬ್ದಾರಿ ಅರ್ಥ ಮೂಡಿಸುವ ವೇದಿಕೆ.

ನೊಂದ ಮಹಿಳೆಯರೆಲ್ಲಾ ಒಂದೆಡೆ ಸೇರಿದ್ದರು. ಒಬ್ಬೊಬ್ಬರಾಗಿ ತಮ್ಮ ಅಹವಾಲನ್ನು ಹೇಳತೊಡಗಿದರು. ವರದಕ್ಷಿಣೆ ಕಿರುಕುಳಕ್ಕೆ ಒಳಗಾದ ವಿನುತಾಳ ಜೀವನ, ಅವಿವಾಹಿತ ತಾಯಿಯೊಬ್ಬಳು ಅಕ್ಕನ ಗಂಡನಿಂದಲೇ ಮೋಸ ಹೋಗಿ ತನ್ನ ಮನೆಯವರಿಂದಲೂ ತಿರಸ್ಕೃತಗೊಂಡು ಅನುಭವಿಸಿದ ಮಾನಸಿಕ ಯಾತನೆ, ಅಸಹಾಯಕತೆ ಎಲ್ಲವನ್ನು ಒಬ್ಬೊರಾಗಿ ಬಿಚ್ಚಿಡತೊಡಗಿದರು. ಇದೆಲ್ಲವನ್ನು ಕೇಳಿದ ಮಹಿಳೆಯರು ಬದುಕಿನ ಕರಾಳತೆಯ ಬಗ್ಗೆ ಚಿಂತಿಸಿದರು.

ಮಹಿಳೆಯರು ಇಂದಿಗೂ ತಮ್ಮ ಮೇಲಾಗುವ ಅನ್ಯಾಯ, ಶೋಷಣೆ, ಹಿಂಸೆಗಳನ್ನು ಹೇಳಿಕೊಳ್ಳಲು ಹಿಂದೆ ಮುಂದೆ ನೋಡುತ್ತಾರೆ. ಆದರೆ ಮಹಿಳಾ ನ್ಯಾಯಾಲಯದಲ್ಲಿ ತಮ್ಮ ನೋವನ್ನು ಬಿಚ್ಚಿಟ್ಟದ್ದನ್ನು ಕಂಡು ಎಲ್ಲರಿಗೂ ಆಶ್ಚರ್ಯ. "ನಾವೆಲ್ಲ ಶೋಷಿತರು, ಅಸಹಾಯಕರು ಎಂದುಕೊಂಡ ಈ ಮಹಿಳೆಯರ ದೃಢತೆ, ಸ್ಪಷ್ಟತೆ, ಸಭಾಕಂಪನವಿಲ್ಲದೆ ಮಾತಾಡಿದ ರೀತಿ, ತಾವು ಎಲ್ಲವನ್ನೂ ಹೀಗೆ ಸಾರ್ವಜನಿಕವಾಗಿ ಹೇಳಿಕೊಂಡರೆ ಸಾಮಾಜಿಕವಾಗಿ ತಮ್ಮ ಘನತೆಗಾಗುವ ಅಪಾಯದ ಗೊಡವೆಯೇ

ಇಲ್ಲದಿರುವಿಕೆ ಮುಂತಾದುವು ಪದೇ ಪದೇ ವಿಜಯಾಳಿಗೆ ಮುಖ್ಯವಾಗತೊಡಗಿದವು." ಎಂಬ ಸಾಲುಗಳು ಮಹಿಳೆಯರು ನಿಜವಾಗಿಯೂ ಮಾಡಬೇಕಾಗಿರುವ ಕಾರ್ಯದ ಬಗ್ಗೆ ತಿಳಿಸುತ್ತವೆ.

ಜೀವನ ಕುರಿತು ನಾವು ಯೋಚಿಸುವ ಬಗೆಯೇ ಬೇರೆ. ವಾಸ್ತವ ಚಿತ್ರಣವೇ ಬೇರೆ. ಸಮಸ್ಯೆಗಳನ್ನು ಕುರಿತು ಯೋಚಿಸುವ ಸಂದರ್ಭದಲ್ಲಿ ಮೇಲ್‌ಸ್ತರದಲ್ಲೇ ಯೋಚನೇ ಮಾಡತ್ತೇವೆ. ಆದರೆ ನಿಜವಾದ ಜೀವನ ದರ್ಶನವೇ ಬೇರೆ ಎಂಬುದು ಅಂತರಂಗ ಹೊರಬಿದ್ದಾಗ ಮಾತ್ರ ತಿಳಿಯುತ್ತದೆ. ಆದರೆ ಅದನ್ನು ಹೊರಹಾಕುವುದು ಸುಲಭವಲ್ಲ. "ಮರ್ಯಾದೆ ಪ್ರಶ್ನೆ ಅಂತ ಬಾಯಿ ಮುಚ್ಚಿ ಸಹಿಸ್ತೀವಿ..." ಎಂಬ ಮಾತಂತು ವಾಸ್ತವ ವಿಷಯವಾಗಿದೆ.

ಮಹಿಳೆಯರು ಪರಸ್ಪರ ನೋವು, ದುಃಖ, ಮಾನಸಿಕ ಹಿಂಸೆ, ತೋಳಲಾಟಗಳನ್ನು ಹಂಚಿಕೊಂಡಾಗ ಮಾತ್ರ ಸಮಸ್ಯೆ ಅರಿಯಲು ಸಾಧ್ಯ. ಇಡೀ ಜೀವನವನ್ನು ಗಂಡ ಮತ್ತು ಮನೆಗಾಗಿ ಅರ್ಪಿಸಿದ ಆಕೆಯನ್ನು ಜಗಳ ಬಂದಾಗ ಅಪರಾತ್ರಿಲಿ ಮನೆಬಿಟ್ಟು ಓಡಿಸುವುದು ಗಂಡಿನ ದೌರ್ಜನ್ಯ. ಇದು ಬದಲಾಗಬೇಕು. ಗಂಡನ ಮನೇಲಿ ಹೆಂಡ್ತಿಗೆ ಹಕ್ಕು ಇದೆ ಅನ್ನೋದು ಒಂದು ಅರಿವಾಗಿ ಜನರಲ್ಲಿ ಮೂಡಬೇಕು. ಸಂವಿಧಾನದಲ್ಲೂ ತಿದ್ದುಪಡಿ ಆಗಬೇಕು" ಎಂಬ ನಿಲುವು ಹೆಣ್ಣಿಗೆ ಸಮಾಜದಲ್ಲಿ ಭದ್ರತೆ ಒದಗಿಸಲು ನಡೆದ ಪ್ರಯತ್ನವಾಗಿದೆ.

ಒಟ್ಟಾರೆ ಹೆಣ್ಣು ತನ್ನ ಸಮಸ್ಯೆ ಸಂಕಟವನ್ನು ಹೊರಹಾಕಿ ಅದರ ವಿರುದ್ಧ ಹೋರಾಡುವ ಧೈರ್ಯ ಬೆಳೆಸಿಕೊಳ್ಳಬೇಕು. ಆಗ ಮಾತ್ರ ಆಕೆಯ ಜೀವನ ಸುಧಾರಣೆ ಸಾಧ್ಯ ಎಂಬುದು ಕಥೆಯಲ್ಲಿ ವ್ಯಕ್ತವಾಗಿದೆ.

ದಾಂಪತ್ಯ ಜೀವನಕ್ಕೆ ಕಾಲಿಟ್ಟ ನಂತರ ಹೆಣ್ಣು ತನ್ನದೇ ಆಸೆ, ಆಕಾಂಕ್ಷೆ, ಕನಸು ಕಲ್ಪನೆಗಳನ್ನು ಇಟ್ಟುಕೊಂಡಿರುತ್ತಾಳೆ. ಅವುಗಳು ಈಡೇರುವ ಸಮಯಕ್ಕಾಗಿ ಕಾಯುತ್ತಿರುತ್ತಾಳೆ. ಭಾವನಾಜೀವಿಯಾದ ಆಕೆ ಪ್ರತಿಯೊಂದು ಅನುಭವನ್ನು ಎಳೆಎಳೆಯಾಗಿ ಬಿಚ್ಚಿ ಹಂಚಿಕೊಳ್ಳಲು ಕಾತರಳಾಗಿರುತ್ತಾಳೆ. ಆದರೆ ಗಂಡು ಹೆಚ್ಚಿನ ಸಂದರ್ಭಲ್ಲಿ ಅದನ್ನು ಅರ್ಥಮಾಡಿಕೊಳ್ಳದೆ ತಡೆಯುತ್ತಲೇ ಇರುತ್ತಾನೆ. ನೋವು, ರಾಜಿ ಮತ್ತು ಸಮಾಧಾನಗಳು ಜೀವನದ ಗೆರೆಗಳಾಗಿದ್ದುಕೊಂಡು ಜೀವನವನ್ನು ಮುಂದುವರೆಸುತ್ತವೆ ಎಂಬುದನ್ನು **'ಗೆರೆಗಳು'** ಕಥೆಯಲ್ಲಿ ಕಾಣಬಹುದು.

ವಿಮಲಾಳಿಗೆ ಬದುಕಿನ ಮುಖ್ಯ ಕನಸು ತನ್ನ ಗಂಡನೊಡನೆ 'ಮಹಾಬಲೇಶ್ವರ'ಕ್ಕೆ ಹೋಗಬೇಕು ಎಂಬುದು. ಅನೇಕ ವರ್ಷಗಳಾದರೂ ಅದು ಸಾಧ್ಯವಾಗಿರಲಿಲ್ಲ. ಇದ್ದಕ್ಕಿಂದ್ದಂತೆ ಗಂಡನಾದ ರವಿ ಬಂದು ನಾಳೆಯೇ ಮಹಾಬಲೇಶ್ವರಕ್ಕೆ ಹೊರಡೋಣ ಎಂದು ಹೇಳಿದಾಗ ಆಕೆಗೆ ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಏನೇನೋ ಕನಸು ಕಲ್ಪನೆ ಇಟ್ಟುಕೊಂಡಿದ್ದ ಆಕೆ ಅದನ್ನು ನೆನೆದು ರೋಮಾಂಚನಗೊಂಡಳು. ತನ್ನ ಮನಸ್ಸನ್ನು ಕೇಳಿದಾಗಲೂ ಹೇಳಲು ಹಿಂಜರಿಕೆ ಉಂಟಾಯಿತು. ಕಾರಣ "ತಾನು ಮನದ ಎಳೆ ಎಳೆಗಳನ್ನು ಬಿಚ್ಚಿಡಲು ಒಮ್ಮೊಮ್ಮೆ ಹೊರಟಾಗಲೂ ಅದ್ಯಾಕೆ ಹಾಗೆ ಹಿಂಜಿ ಹಿಂಜಿ ಮಾತಾಡ್ತೀ? ಏನ್ ಬೇಕು ಅದನ್ನು ನೇರವಾಗಿ ಹೇಳಿದ್ರೆ ಆಗಲ್ವಾ ನಿಂಗೆ' ಎನ್ನುತ್ತಿದ್ದ. ಈಗಲೂ ಹಾಗೆಯೇ ಆಗಬಹುದೆಂದು ಹಿಂಜರಿದಳು. ಹೆಣ್ಣಿನ ಮಾನಸಿಕ ಶೋಷಣೆ ಹೇಗೆ ನಡೆಯುತ್ತದೆ ಎಂಬುದಕ್ಕೆ ಇದು ಸಾಕ್ಷಿ.

ಯಾವುದೇ ಪೂರ್ವ ತಯಾರಿಯಿಲ್ಲದೇ ಹೊರಡುವುದು ಹೇಗೆ ಎಂದು ಯೋಚಿಸಿದಾಗ ಆಕೆ ಕೊನೆಗೆ ಒಪ್ಪಿಕೊಂಡಳು. ಆದರೆ ತಮ್ಮ ಜೊತೆ ಇನ್ನೊಂದು ಕುಟುಂಬವೂ ಬರುತ್ತದೆ ಎಂದಾಗ ಗಲಿಬಿಲಿಗೊಂಡಳು. ತನ್ನ ಆಸೆಯನ್ನು ತಿಳಿಸದ ಅಸಹಾಯಕ ಪರಿಸ್ಥಿತಿಗೆ ಸಿಲುಕಿದಳು.

ಮಹಾಬಲೇಶ್ವರಕ್ಕೆ ಹೊರಟಿದ್ದಾಯಿತು. ಆದರೆ ಅಲ್ಲಿ ನಡೆಯುತ್ತಿರುವ ಘಟನೆಗಳೂ, ತನ್ನ ಕಲ್ಪನೆಗಳೂ ಪರಸ್ಪರ ವಿರುದ್ಧವಾಗಿದ್ದವು. ಪ್ರತಿ ಹಂತದಲ್ಲೂ ಈಕೆ ರಾಜಿ ಮಾಡಿಕೊಳ್ಳುತ್ತಲೇ ನಡೆಯಬೇಕಾಯಿತು. 'ತನಗೆ ಘನವೆನಿಸುವ ಸಂಗತಿಗಳು ಅವರ ದೃಷ್ಟಿಯಲ್ಲಿ ಕೇವಲ ಕ್ಷುಲ್ಲಕ!. (ಕೇಳಿದರೆ ನಕ್ಕುಬಿಟ್ಟಾರು)' ಎನಿಸಿತು. ಬದುಕಿನ ಯಾಂತ್ರಿಕತೆಯನ್ನು ನೆನೆದು ಇದು ಒಂದು ಬದುಕೇ ಎಂದುಕೊಂಡಳು. ಭಾವನೆಗಳಿಗೆ ಮಾತುಕೊಡಲು ಪ್ರಯತ್ನಿಸಿದಾಗ ಅವುಗಳನ್ನು ಹತ್ತಿಕ್ಕುವ ಆತನ ಬಳಿ ಅವನ್ನು ಕಣ್ಣೀರಾಗಿ ಹರಿಸಲು ಸಹ ಭಯ. ಇಂಥ ಅಸಹಾಯಕ ಬದುಕು ಹೆಣ್ಣಿನದು.

ಒಟ್ಟಿನಲ್ಲಿ ಹೆಣ್ಣು ತಾನು ಎಷ್ಟೇ ನೋವು ಅನುಭವಿಸಿದರೂ ನಂತರದಲ್ಲಿ ಪರಿಸ್ಥಿತಿ ಅರಿತು ರಾಜಿ ಮಾಡಿಕೊಂಡು ತನಗೆ ತಾನೆ ಸಮಾಧಾನ ತಂದುಕೊಂಡು ಜೀವಿಸಿತ್ತಿರುವುದಂತೂ ಸತ್ಯ.

'ಕಲ್ಲಾದವರು' ಕಥೆಯೂ ಸಹ ಗೆರೆಗಳು ಕಥೆಯಂತೆ ಹೆಣ್ಣಿನ ಮನಸ್ಸಿಗೆ ಸಂಬಂಧಿಸಿದ್ದು. ತನ್ನ ವೈಯಕ್ತಿಕ ಬದುಕು, ಲೈಂಗಿಕತೆ, ಆಸೆ ಆಕಾಂಕ್ಷೆಗಳನ್ನು ಬದಿಗಿಟ್ಟು, ಅದರಿಂದಾಗುವ ಮಾನಸಿಕ ಹಿಂಸೆ, ನೋವನ್ನು ಹೆಣ್ಣು ಸದ್ದಿಲ್ಲದೆ ಸಹಿಸಬೇಕಾದ ಸ್ಥಿತಿಯನ್ನು ಈ ಕಥೆಯಲ್ಲಿ ಕಾಣಬಹುದು.

ದಾಂಪತ್ಯದಲ್ಲಿ ಗಂಡು-ಹೆಣ್ಣಿನ ಸಾಮಿಪ್ಯ ಮತ್ತು ಅನ್ಯೋನ್ಯತೆ ಬಹಳ ಮುಖ್ಯ. ಆದರೆ ನಮ್ಮ ಕುಟುಂಬ ವ್ಯವಸ್ಥೆಯಲ್ಲಿ ಮಕ್ಕಳು ಮರಿ ಆದೊಡನೆ, ಅವರು ಬೆಳೆದು ದೊಡ್ಡವರಾಗಿ ಮದುವೆ ಮುಂಜಿ ಆದೊಡನೆ ಹಿರಿಯ ದಂಪತಿಗಳು ಒಟ್ಟಾಗಿರುವುದು ತಪ್ಪು ಎಂಬ ಕಲ್ಪನೆಯಿದೆ. ಹೊರ ಜಗತ್ತಿಗೆ ಹೊಂದಿಕೊಂಡ ಗಂಡು ಅದನ್ನು ಒಪ್ಪಿಯೂ ಬಿಡುತ್ತಾನೆ.

ಆದರೆ ಹೆಣ್ಣು ಮಾತ್ರ ಸದಾ ಆತನ ಸನಿಹಕ್ಕೆ, ಸ್ಪರ್ಶಕ್ಕೆ ಕಾತರಳಾಗಿರುತ್ತಾಳೆ. ಅದು ದೊರೆಯದಾಗ ಖಿನ್ನತೆಯನ್ನು ಅನುಭವಿಸುತ್ತಾಳೆ ಎಂಬ ವಾಸ್ತವ ಸತ್ಯವನ್ನು ಕಥೆಯಲ್ಲಿ ಎತ್ತಿಹಿಡಿದಿರುವುದು ಮುಖ್ಯ ಎನಿಸುತ್ತದೆ.

ಮನೆಗೆ ಅತ್ತೆ-ಮಾವ ಬಂದಾಗ ಸೊಸೆ ಅತ್ತೆಯೊಡನೆ ನಡೆಸುವ ಮಾತುಕತೆಯಿಂದ ಆಕೆ ಕೇಳುವ ಪ್ರಶ್ನೆಗಳಿಂದ ಹೇಳಿಕೊಳ್ಳಲಾಗದಿದ್ದ ಸತ್ಯ ಹೊರಬಿದ್ದು, ಅಂತರಂಗ ತೆರೆಯುತ್ತದೆ. 'ಅತ್ತೆ, ನೀವೂ ಮಾವ ಒಟ್ಗೇ ಮಲಗೋದು ಯಾವಾಗ ಬಿಟ್ರೀ?" ಎಂದು ಕೇಳಿದಾಗ ಸಹಜವಾಗಿಯೇ ಉತ್ತರಿಸುತ್ತಾ ಕುಟುಂಬದ ಪರಿಸ್ಥಿತಿ, ನಿಯಮಗಳನ್ನು ವಿವರಿಸಿದರೂ ಆ ಮಾತುಗಳು ಮುಂದುವರಿದಂತೆ ವಿಷಾದ ಮತ್ತು ನೋವಿನ ಎಳೆಗಳು ಕಾಣಸಿಗುತ್ತವೆ.

ಶಾಂತತ್ತೆ "ತನ್ನದೇ ಮನೆಯಲ್ಲಿ ತನ್ನದೇ ಜಾಗದಲ್ಲಿ ತಾನು ಆಕ್ರಮಣಕ್ಕೆ ಒಳಗಾದ ಭಾವವನ್ನು ಅನುಭವಿಸಿದ್ದನ್ನು ಮರೆಯಲು ಸಾಧ್ಯವಾಗಿರಲಿಲ್ಲ." ತನ್ನ ಸೊಸೆ ಕೆದಕಿಕೆದಕಿ ಕೇಳಿದ್ದರಿಂದ ಈಗ ಅವು ನೆನಪಿಗೆ ಬಂದವು. "ದಾಂಪತ್ಯದೊಳಗೆ ಹೆಣ್ಣಿಗೆ ಲೈಂಗಿಕತೆಯ ಬಳಕೆಯು ಎಷ್ಟು ಜಡ್ಡುಗಟ್ಟಿರುತ್ತದೆ ಎಂದರೆ ಅವಳ ಭಾಷೆ, ಅವಳ ಭಾವ, ಅದು ಹಿಗ್ಗೋ ಮುಜುಗರವೋ ಬೇಸರವೋ ಹೇಸಿಗೆಯೋ ಯಾವುದನ್ನೂ ಲೆಕ್ಕಿಸದೆ ಗಂಡಸು ತನ್ನ ಯಜಮಾನಿಕೆ, ಅಹಮಿಕೆಯ ಮೂಲಕ ಅವಳಿಂದ ಬೇಕಾದ್ದನ್ನು ಪಡೆದುಕೊಂಡೇ ತೀರುತ್ತಾನೆ. ಅವಳು ಭಾವನೆಯ ಸಂವಹನದ ಕೊರತೆಯಿಂದ ಕೇವಲ ಮನದಲ್ಲಿ ಸಂಕಟಪಟ್ಟುಕೊಳ್ಳುತ್ತಲೇ ಉಳಿದುಬಿಡುತ್ತಾಳೆ" ಎಂದು ಬಿ.ಎನ್.ಸುಮಿತ್ರಾಬಾಯಿ ಅವರು ಮುನ್ನುಡಿಯಲ್ಲಿ ಹೇಳಿರುವುದು ಸಮಂಜಸವಾಗಿದೆ.

ಸೊಸೆಗೆ ತಾನಂದುಕೊಂಡ ಕ್ಷಣ ಬಂದಾಗಲೂ ಸಂಭ್ರಮಿಸಲಾಗದ ಸ್ಥಿತಿ. ಎಷ್ಟೋ ದಿನಗಳಿಂದ ಕಾದರೂ ಸಿಗದೆ, ಕಲ್ಪನೆಯಲ್ಲೇ ಸಂಭ್ರಮಿಸಿದ್ದ ಕ್ಷಣಗಳಿದ್ದವು. ಆದರೆ ಅದು ವಾಸ್ತವವಾಗಿ ನನಸಾದಾಗ..?

ಯಾಕೆ ಹೀಗೆ ಜಡ್ಡುಗಟ್ಟಿದ್ದೀನಿ.......? ನಾನು ನಿಜವಾಗಿಯೂ ಬದುಕಿದ್ದೀನಾ ಅಥವಾ...... ಬದುಕಿಯೂ ಸಾಯುವುದೆಂದರೆ ಇದೇ ಇರಬಹುದೇ? ಎಂದು ಅನಿಸುತ್ತಿದ್ದಂತೆ ಎದೆ ಭಾರವಾಗತೊಡಗಿತು." ಎಂಬ ಮಾತುಗಳು ಹೆಣ್ಣಿನ ಮನಸ್ಸಿನ ಸೂಕ್ಷ್ಮತೆಯನ್ನು ವ್ಯಕ್ತಪಡಿಸುತ್ತದೆ. ಇದನ್ನು ಅರ್ಥಮಾಡಿಕೊಳ್ಳಲಾಗದ ಗಂಡನಿಗೆ ನಿರಾಸೆಯಾಗುತ್ತದೆ. ಮತ್ತದೇ ನೋವು ಮುಂದುವರಿಯುತ್ತದೆ.

ಒಟ್ಟಾರೆಯಾಗಿ ಸಬಿಹಾ ಭೂಮಿಗೌಡ ಅವರು ತಮ್ಮ ಕಥೆಗಳಲ್ಲಿ ಹೆಣ್ಣಿನ ಬದುಕು ಮತ್ತು ದಾಂಪತ್ಯವನ್ನು ಚಿತ್ರಿಸುವ ಸಂದರ್ಭದಲ್ಲಿ ಹೊರವ್ಯವಸ್ಥೆಯನ್ನು ಚಿತ್ರಿಸುವುದಕ್ಕಿಂತ ಅಂತರಂಗದ ನೋಟವನ್ನು ಒದಗಿಸುವುದರ ಮೂಲಕ ಇದುವರೆಗೂ ಚರ್ಚೆಯಿಂದ ದೂರ ಉಳಿದಿದ್ದ ಹೆಣ್ಣಿನ ಮಾನಸಿಕ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದರ ಮೂಲಕ ಹೊಸ ಹೆಜ್ಜೆ ಇಟ್ಟಿದ್ದಾರೆ.

೪.೧.೨ ಸಮಾಜ ಮತ್ತು ಕುಟುಂಬ

ಸಬಿಹಾ ಭೂಮಿಗೌಡ ಅವರು ತಮ್ಮ ಅನೇಕ ಕಥೆಗಳಲ್ಲಿ ಕುಟುಂಬ ಮತ್ತು ಸಾಮಾಜಿಕ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಅಲ್ಲಿ ಮುಖ್ಯವಾಗಿ ಹೆಣ್ಣಿನ ಶೋಷಣೆ, ಆಕೆಯಸ್ಥಾನ, ಜಾತಿವ್ಯವಸ್ಥೆ, ಸಾಮಾಜಿಕ ರೀತಿನೀತಿಗಳು, ಮೌಲ್ಯ ಮುಂತಾದ ಅಂಶಗಳು ತಿಳಿಯುತ್ತವೆ. ಈ ನಿಟ್ಟಿನಲ್ಲಿ ಸಬಿಹಾ ಭೂಮಿಗೌಡ ಅವರ 'ಒಂದು ಸಾವಿನ ಸುತ್ತ', 'ಬಳೆ', 'ಬೇವು-ಬೆಲ್ಲ', 'ಅಸ್ಮಿತೆ', 'ಗಂಗವ್ವ ಗಂಗಾಮಾಯಿ, 'ಹಿಂಸಾಪುರಾಣ', 'ಕಲ್ಪನಾಲೋಕ' 'ತುಪ್ಪ ಮೆತ್ತಿದ ಕನ್ನಡಿ', ಮುಂತಾದವು ಮುಖ್ಯವಾಗುತ್ತವೆ.

'ಒಂದು ಸಾವಿನ ಸುತ್ತ' ಕಥೆಯಲ್ಲಿ ಪುರುಷಪ್ರಧಾನ ಸಮಾಜವ್ಯವಸ್ಥೆ ತನ್ನ ದರ್ಪ ಮತ್ತು ಸ್ವಾರ್ಥದಿಂದ ಹೆಣ್ಣು ಜೀವವೊಂದರ ಸುಂದರ ಬದುಕನ್ನು ಹೇಗೆ ಬಲಿತೆಗೆದುಕೊಳ್ಳತ್ತದೆ ಎಂಬುದನ್ನು ತಿಳಿಸುತ್ತದೆ. ಜೊತೆಗೆ ಹಿಂಸೆ ನೋವನ್ನು ಅನುಭವಿಸಿದ ಹೆಣ್ಣು ಕೊನೆಗೆ ತನಗಾದ ಶೋಷಣೆ ಅನ್ಯಾಯದ ವಿರುದ್ಧ ಬಂಡಾಯ ಏಳುವುದನ್ನು ಸಹ ಕಾಣಬಹುದು.

'ಒಂದು ಸಾವಿನ ಸುತ್ತ' ಕಥೆಯಲ್ಲಿ ಬರುವ ಶಮೀಮ ಎಂಬುವವಳು ತನ್ನ ಗಂಡನ ನಪುಂಸಕತ್ವದಿಂದ ವಂಚನೆಗೆ ಒಳಗಾಗುತ್ತಾಳೆ. ಸಾವಿರಾರು ಕನಸು ಕಟ್ಟಿಕೊಂಡು ದಾಂಪತ್ಯ ಜೀವನಕ್ಕೆ ಕಾಲಿರಿಸಿದ ಆಕೆಗೆ ಮೊದಲ ಅನುಭವವೇ ಆಘಾತ ನೀಡಿತ್ತು. ಒಂದು ವಾರದಲ್ಲಿ ಗಂಡನ ನಪುಂಸಕತ್ವದ ವಿಚಾರ ತಿಳಿದು ಆಕಾಶವೇ ಕಳಚಿ ಮೈಮೇಲೆ ಬಿದ್ದಂತಾಯಿತು. ಹೊಸ ಬದುಕೆಂಬ ಬಣ್ಣದ ಚಿತ್ತಾರ ಮಸಿಯಲ್ಲಿ ಅದ್ದಿದಂತಾಯಿತು.

ಶಮೀಮ ತನ್ನ ದುಃಖವನ್ನು ಯಾರೊಡನೆಯೂ ಹೇಳಿಕೊಳ್ಳಲಾಗದೇ ಒಳಗೊಳಗೆ ಬೇಯುತ್ತಿದ್ದರು. ಇಸ್ಮಾಯಿಲ್ ಸಾಬ ಮಾತ್ರ ನಿರಾತಂಕವಾಗಿದ್ದ. ಅಷ್ಟು ಮಾತ್ರವಲ್ಲ ಎಲ್ಲರ ಮುಂದೆ ಸಂತೃಪ್ತ ವಿವಾಹಿತನ ಸೋಗು ಹಾಕುತ್ತಿದ್ದ. ಪುರುಷ ತನ್ನ ತಪ್ಪಿದ್ದರೂ ಅದು ತನ್ನದಲ್ಲವೇನೋ ಎಂಬಂತೆ ನಟಿಸುತ್ತಾನೆ. ತನ್ನ ತಪ್ಪನ್ನು ಒಪ್ಪಿಕೊಳ್ಳದ, ಅದರಿಂದ ಹೆಣ್ಣಿನ ಬದುಕು ಹಾಳಾಗುತ್ತಿದ್ದರೂ ಅದನ್ನೂ ನೋಡಿಯೂ ನೋಡದಂತಿರುವುದು ಆತನ ಕ್ರೌರ್ಯಮುಖವನ್ನು ತೋರುತ್ತದೆ.

ರಾತ್ರಿವೇಳೆ ದೈನ್ಯತೆಯಿಂದ ತನ್ನ ಮರ್ಯಾದೆ ಉಳಿಸೆಂದು ಕೇಳುವ, ಹಗಲಿನ ವೇಳೆ ತನ್ನದೇನು ತಪ್ಪಿಲ್ಲವೆಂದು ಸೋಗು ಹಾಕುವ ಗಂಡನನ್ನು ಕಂಡು ಶಮೀಮ ತಲ್ಲಣಗೊಂಡಿದ್ದಳು. ತನ್ನ ಎಲ್ಲಾ ಮಿತಿಗಳು ಗೊತ್ತಿದ್ದೂ, ತನ್ನನ್ನು ಬಲಿಪಶು ಮಾಡಿದ ವ್ಯಕ್ತಿಯನ್ನು ಸಹಿಸಲು ಆಕೆಯಿಂದ ಸಾಧ್ಯವಾಗಲಿಲ್ಲ. ಗಂಡನಿಂದ ದೂರಾಗಿ ಹೊಸ ಬದುಕಿನ ಕನಸನ್ನು, ತನ್ನ ಬದುಕಿನಲ್ಲಿ ಮತ್ತೊಬ್ಬ ವ್ಯಕ್ತಿಯ ಆಗಮನವನ್ನು

ನಿರೀಕ್ಷಿಸಿದಳು. ಅದು ಸಾಧ್ಯವಾಗದೇ 'ಒಂಟಿತನ'ವನ್ನು ಆಯ್ದುಕೊಂಡು ಕಸೂತಿ ಕಲೆಯನ್ನು ಜೀವನದ ದಾರಿ ಮಾಡಿಕೊಂಡಳು.

ಇಪ್ಪತ್ತು ವರ್ಷಗಳ ನಂತರ ಗಂಡನ ಸಾವಿನ ಸುದ್ದಿ. ಅದನ್ನು ಕೇಳಿ ಶಮೀಮಳಿಗೆ ಒಂದು ತೊಟ್ಟು ಕಣ್ಣೀರೂ ಬರಲಿಲ್ಲ. ಯಾರದೋ ಸಾವಿನ ಸುದ್ದಿಯನ್ನು ಕೇಳಿದಂತಿತ್ತು.

ಇಸ್ಮಾಯಿಲ್ ಸಾಬ ಸರ್ಕಾರಿ ನೌಕರಿಯಲ್ಲಿದ್ದನು. ಈಗ ಅವನ ಕುಟುಂಬದವರಿಗ ಆಸ್ತಿಯ ಮೇಲೆ ಕಣ್ಣು. ಸಮೀಮಳಿಗಾದ ಅನ್ಯಾಯದ ಚಿಂತೆ ಯಾರಿಗೂ ಇಲ್ಲ. ಈ ಸಂದರ್ಭದಲ್ಲಿ ಶಮೀಮ ಇಟ್ಟ ಹೆಜ್ಜೆ ಮಹತ್ವದ್ದು. ತನ್ನ ಜೀವನದ ಕನಸುಗಳೇ ಆತನಿಂದ ಭಗ್ನಗೊಂಡವು. ಆದರೆ ಆತನ ಆಸ್ತಿಯಾದರೂ ಅನ್ಯರ ಪಾಲಾಗದೆ ತನಗೆ ಸೇರಲಿ. ತನ್ನ ಬದುಕಿನ ದಾರಿಗಾಗಿ ಎಂದು ಯೋಚಿಸಿ ಆತನ ಹಣ ತನಗೆ ಬರಬೇಕೆಂದು ಕೇಳಿ ಪಡೆದುಕೊಂಡಳು. ಈ ವಿಷಯ ಇಸ್ಮಾಯಿಲ್ ಸಾಬನ ಮನೆಯವರಿಗೆ ಪೆಟ್ಟು ನೀಡಿತು. ಒಂದು ಹೆಣ್ಣು ಈ ರೀತಿ ಮಾಡಲಾರಳು ಎಂದು ಬಗೆದಿದ್ದ ಅವರಿಗೆ ಶಮೀಮ ಸರಿಯಾದ ಪಾಠ ಕಲಿಸಿದಳು.

ಈ ಕಥೆಯಲ್ಲಿ ಗಮನಿಸಬೇಕಾದ ಪ್ರಧಾನ ಅಂಶವೆಂದರೆ ಶಮೀಮಾಳ ನಿಲುವು. ತನ್ನ ಗಂಡ ನಪುಂಸಕ, ಆತನಿಂದ ತನಗೆ ಯಾವುದೇ ಸುಖವು ದೊರೆಯಲಾರದು ಎಂದು ತಿಳಿದಾಗ ಎಲ್ಲಾ ಹೆಣ್ಣು ಮಕ್ಕಳಂತೆ ಅದನ್ನು ಮೌನವಾಗಿ ಸಹಿಸದೆ ತಾನೇ 'ವಿವಾಹ ವಿಚ್ಛೇದನವನ್ನು ಕೇಳಿದ್ದು'. ಇದು ಆಕೆಯ ಧೈರ್ಯವನ್ನು ತೋರುತ್ತದೆ. ಮತ್ತು ಅದು ತನಗಾದ ಅನ್ಯಾಯದ ವಿರುದ್ಧ ಎದ್ದ ಬಂಡಾಯದಂತಿದೆ.

ಇಸ್ಮಾಯಿಲ್ ಸಾಬನ ಕುಟುಂಬದವರಿಗೆ ಆತನ ಕೊರತೆ ಗೊತ್ತಿದ್ದೂ ಸಹ ಶಮೀಮಳಿಗಾದ ಅನ್ಯಾಯವನ್ನು ಯಾರು ಅನ್ಯಾಯವೆಂದು ಭಾವಿಸಲಿಲ್ಲ. ಇದನ್ನು ಗಮನಿಸಿದಾಗ ವಿಷ್ಣುನಾಯ್ಕ ಅವರು ಮುನ್ನುಡಿಯಲ್ಲಿ ಹೇಳಿರುವಂತೆ "ಈ ಕತೆ ಇಸ್ಮಾಯಿಲ್ ಸಾಬನ ನಪುಂಸಕತೆಯ ಬಗ್ಗೆ ಮಾತ್ರ ಮಾತನಾಡದೆ, ಪುರುಷರಿಂದ ಇಂಥ ಒಂದಲ್ಲ ಒಂದು ರೀತಿಯ ವಂಚನೆಗೆ ಒಳಗಾಗುತ್ತಿರುವ ಹೆಣ್ಣುಮಕ್ಕಳ ವಿಷಯದಲ್ಲಿ ದನಿಯೆತ್ತಿ ಹೋರಾಡಲಾಗದ ನಪುಂಸಕ ಸಮಾಜದ ಕುರಿತು ಪರೋಕ್ಷವಾಗಿ ಮಾತನಾಡುತ್ತದೆ" ಎಂಬುದು ಅರಿಯಬೇಕಾದ ಸತ್ಯವಾಗಿದೆ.

ಸಮಾಜದಲ್ಲಿ ಮನುಷ್ಯ ಅನೇಕ ರೂಢಿ, ಸಂಪ್ರದಾಯ, ರೀತಿ-ರಿವಾಜುಗಳನ್ನು ಮಾಡಿಕೊಂಡು ಪಾಲಿಸುತ್ತಾ ಬಂದಿದ್ದಾನೆ. ಆದರೆ ಅವುಗಳಲ್ಲಿ ಕೆಲವು ವ್ಯಕ್ತಿ ಮತ್ತು ಸಮಾಜಕ್ಕೆ ಪೂರಕವಾಗಿದ್ದರೆ ಇನ್ನು ಕೆಲವು ಮಾರಕವಾಗಿವೆ. ಅಂತೆಯೇ ಹೆಣ್ಣಿನ ಬದುಕಿನಲ್ಲಿ ಗಂಡ ಸತ್ತಾಗ ನಡೆಸುವ ಕಾರ್ಯಗಳು ಆಕೆಯನ್ನು ಇಂಚಿಂಚಾಗಿ ಕೊಲ್ಲುವ ಕೆಲಸ ಮಾಡುತ್ತವೆ. ಅದನ್ನು ಸಬಿಹಾ ಭೂಮಿಗೌಡ ಅವರು ತಮ್ಮ ಬಳೆ ಕಥೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಗಂಡನನ್ನು ಕಳೆದುಕೊಂಡಿದ್ದ ಚೌಡಮ್ಮನಿಗೆ ಅಲ್ಲಿನ ಜನರು ಹೂವು, ಸೀರೆ, ಅರಿಶಿನ-ಕುಂಕುಮ, ಬಳೆ ತಂದು ತೊಡಿಸುತ್ತಿರುವುದನ್ನು ಕಂಡ ನಗರ ಹಿನ್ನಲೆಯ ವಿಮಲೆಗೆ ದಿಗ್ಭ್ರಾಂತಿಯಾಯಿತು. ಸಂಗಾತಿಯನ್ನು ಕಳೆದುಕೊಂಡ ಹೆಣ್ಣಿಗೆ ಅವಳ ಮನಸ್ಸಿನ ಸಂಕಟ ಅರಿಯದೆ, ಆಲಿಸುವುವವರಿಲ್ಲದೆ ಈ ರೀತಿ ಮಾಡುತ್ತಿದ್ದುದು ವಿಚಿತ್ರ ಎನಿಸುತ್ತದೆ. ಅದರಲ್ಲಿ ವ್ಯಂಗ್ಯ ಎದ್ದು ಕಾಣುತ್ತಿತ್ತು. ಆದರೆ ಸ್ವತಃ ಚೌಡಮ್ಮನೇ ಈ ಪದ್ಧತಿಯನ್ನು ಒಪ್ಪಿಕೊಂಡು ಮಾತಾಡಿದ್ದನ್ನು ಕಂಡು ವಿಮಲಾ ದಂಗಾದಳು. ವ್ಯವಸ್ಥೆಯನ್ನು ಹೆಣ್ಣು ಸುಲಭವಾಗಿ ಒಪ್ಪಿಕೊಳ್ಳುವ ವಾತಾವರಣವನ್ನು ಸಮಾಜ ಹೇಗೆ ನಿರ್ಮಿಸುತ್ತದೆ ಎಂಬುದಕ್ಕೆ ಇದು ನಿದರ್ಶನ.

'ಹಾಲುತುಪ್ಪದ' ದಿವ್ಸ ಚೌಡಮ್ಮನ ಕೈಯನ್ನು ಅಲಂಕರಿಸಿರುವ ಗಾಜಿನ ಬಳೆಗಳನ್ನು ಒಡೆಯುವ ಕೆಲಸ ಮಾಡುತ್ತಾರೆ. ನಂತರ ಹಾಕಿಕೊಳ್ಳಲು ಒಂದು ಜೊತೆ ಬಂಗಾರದ ಬಳೆ ಮಾಡಿಸಬೇಕೆಂಬ ವಿಚಾರ ಬಂತು. ಈ ನಿಟ್ಟಿನಲ್ಲಿ ನಡೆದ ಚರ್ಚೆಗಳು ಅನೇಕ ಹೆಣ್ಣು ಮಕ್ಕಳ ಜೀವನದ ರೀತಿಯನ್ನು ತಿಳಿಸುವ ಪ್ರಯತ್ನ ಮಾಡುತ್ತವೆ.

ತಂದೆ 'ಹಾಲುತುಪ್ಪ' ದಿವಸಕ್ಕೆ ಆಗುವ ಖರ್ಚನ್ನು ಕುರಿತು ಮಾತಾಡುವ ಸಂದರ್ಭವಂತು ಹೆತ್ತವರಿಗೆ ಮಕ್ಕಳ ಬಗ್ಗೆ ತಿರಸ್ಕಾರ ಹುಟ್ಟುವಂತಿದೆ. ಇನ್ನು ಹೆಣ್ಣು ಜೀವನಪೂರ್ತಿ ತನ್ನ ಆಸೆ ಆಕಾಂಕ್ಷೆಗಳನ್ನು ಗಂಡ, ಮನೆ ಮಕ್ಕಳಿಗಾಗಿ ತ್ಯಾಗ ಮಾಡುವ ಚಿತ್ರಣವು ಪ್ರತಿ ಮನೆಯ ಕಥೆಯೇನೋ ಎನಿಸುತ್ತದೆ. ಬಂಗಾರಕ್ಕಾಗಿ ಆಸೆ ಪಟ್ಟರೂ ಅದು ಕೈಗೂಡಲು ಸಾಧ್ಯವಾಗದ ಪರಿಸ್ಥಿತಿಗಳು ಚಿತ್ರಿತಗೊಂಡಿವೆ.

ಕೊನೆಗೂ ಅಣ್ಣ-ತಮ್ಮಂದಿರ ಹೋರಾಟದ ನಡುವೆ ಚೌಡಮ್ಮನ ಹಿರಿಯ ಮಗನೊಬ್ಬನೆ ಬಂಗಾರದ ಬಳೆ ಮಾಡಿಸಿ ತಂದುದು ಸ್ವಲ್ಪ ಸಮಾಧಾನ ನೀಡಿತು. ಆದರೆ ಇನ್ನು ಮುಂದೆ ಗಾಜಿನ ಬಳೆಗಳ ಆಯ್ಕೆಗೆ ಅವಕಾಶ ಇಲ್ಲ ಎಂಬುದನ್ನು ಯೋಚಿಸಿದ ಚೌಡಮ್ಮ "ಇಷ್ಟಕ್ಕೂ ಈಗ ತನ್ನ ಕೋಲು ಕೈಗೆ ಬಂಗಾರದ ಬಳೆಗಳು ಬೇಕೇ? ಅವನ್ನು ತೊಟ್ಟು ಮೆರೆಯುವ ಮನಸ್ಸೇ ತನ್ನದು? ಅಥವಾ ಆ ಬಂಗಾರದ ಬಳೆಗಳು ಈ ಕೈಯಲ್ಲಿ ನಗುತ್ತಿರುವ ಗಾಜಿನ ಬಳೆಗಳಿಗೆ ಸಮನಾದಾವೇ? ಎಂಬ ಚೌಡಮ್ಮನ ಕೊರಗನ್ನು ಯಾರೂ ಅರಿಯದಾದರು.

ಸೊಸೆ ವಿಮಲಾ ಗಂಡ ಮಾಡಿಸಿದ ಬಳೆಗಳನ್ನು ತಂದು "ಅತ್ತೆ, ನಿಮಗೆ ಬಳಿ ಮಾಡ್ಸಿ ತಂದಾರ. ಕೈಗೆ ಸರಿ ಆಗ್ತಾವ ನೋಡ್ರಿ ಒಮ್ಮೆ" ಎಂದು ಅಳುಕುತ್ತಾ ಹೇಳಿ ಅವರ ಪ್ರತಿಕ್ರಿಯೆ ತಿಳಿಯಲು ಪ್ರಯತ್ನಿಸಿ ಸೋತಳು. ಜೊತೆಗೆ ಅತ್ತೆ ಬಂಗಾರದ ಬಳೆ ತೊಡಲು ಇಂಥ ದಿನಕ್ಕೆ ಕಾಯಬೇಕಾಯಿತಲ್ಲ ಎಂಬ ವಿಷಾದ ವ್ಯಕ್ತಪಡಿಸಿದಳು.

ಒಟ್ಟಿನಲ್ಲಿ ಈ ಕತೆ ಮನಮುಟ್ಟುವಂತೆ ರಚನೆಗೊಂಡಿದ್ದು, ಗಂಡನನ್ನು ಕಳೆದುಕೊಂಡವಳ ಮುಂದಿನ ಜೀವನ ಕುರಿತು ಮಾತನಾಡುವ ಬದಲು ಸಂಪ್ರದಾಯ, ಖರ್ಚುಬಾಕಿಗಳ ಬಗ್ಗೆ ಚರ್ಚೆ ನಡೆಸುವ ರೀತಿ ನೋವನ್ನುಂಟುಮಾಡುತ್ತದೆ. ಈ ಸಂದರ್ಭದಲ್ಲಿ ಮುನ್ನುಡಿಯಲ್ಲಿ ವಿಷ್ಣುನಾಯ್ಕ ಅವರು ಹೇಳಿರುವ ತಮ್ಮ 'ನಾನು ಸತ್ತಾಗ' ಕವನದ ಸಾಲುಗಳನ್ನು ಇಲ್ಲಿ ಹೇಳುವುದು ಸೂಕ್ತ ಎನಿಸುತ್ತದೆ.

"ಸುದ್ದಿಯ ಬೆನ್ನೇರಿ ಬರುತ್ತವೆ ಗೆಳತಿ
ಹಿಂಡು ಹಿಂಡು ಹದ್ದುಗಳು
ಎರಗುತ್ತವೆ ಸಿರಿಮುಡಿಯ ಮೇಲೆ
ಜರೆಯುತ್ತವೆ ಹಸಿರುವ ಬಳೆಗಳನ್ನೊತ್ತಿ
ಕಸಿಯುತ್ತವೆ ಮಂಗಳಮಣಿ
ಸಕತ್ತಾಗಿ ನೆಕ್ಕಿ ನಾಪತ್ತೆ ಮಾಡುತ್ತವೆ
ಹಣೆ ಮುತ್ತಿನ ತಿಲಕ"[7]

'ಬೇವು-ಬೆಲ್ಲ' ಕಥೆಯ ಬದುಕಿನ ಸಿಹಿ-ಕಹಿ ಘಟನೆಗಳನ್ನು ಸಂಕೇತಿಸುವಂತಿದೆ. ಆದರೆ ಮುಖ್ಯವಾಗಿ ಅದು ಕುಟುಂಬ ಮತ್ತು ಸಮಾಜದಲ್ಲಿರುವ ಜಾತಿಯ ಭೂತ ಒಂದಿಲ್ಲೊಂದು ರೀತಿಯಲ್ಲಿ ಬಾದಿಸುವ, ಸಂತೋಷಕ್ಕೆ ತಣ್ಣೀರೆರಚಿ ದುಃಖ ನೀಡುವ ಬಗೆಯನ್ನು ತಿಳಿಸುತ್ತದೆ.

ಜಾತಿಯೆಂಬುದು ಸಾಮಾಜಿಕ ಪಿಡುಗು. ಅದು ಹೆಮ್ಮರವಾಗಿ ಬೆಳೆದು ನಿಂತಿದೆ. ಅದನ್ನು ಬುಡಮೇಲು ಮಾಡುವ ತನಕ ಪ್ರಗತಿ ಸಾಧ್ಯವಿಲ್ಲ. ಆ ನಿಟ್ಟಿನಲ್ಲಿ ಕೆಲಸಗಳು ಜರುಗುತ್ತಿವೆ. ಅಂತರ ಜಾತಿಯ ವಿವಾಹಗಳು ಜರುಗುತ್ತಿರುವುದು. ಅದಕ್ಕೆ ಒಂದು ಸಣ್ಣ ನಿದರ್ಶನ ಈ ಕಥೆಯಲ್ಲಿಯೂ ಸಹ ಕಥಾನಾಯಕಿ 'ಸರಳಾ' 'ಜೀವನ್' ಜೊತೆ ವಿವಾಹವಾಗಿ, ಜಾತಿ ನೆಲೆಯಾಚೆ ನಿಂತು ಇಬ್ಬರೂ ಸುಖ ಜೀವನ ನಡೆಸುತ್ತಿರುತ್ತಾರೆ.

ವೃತ್ತಿ ಬದುಕಿನಲ್ಲೂ ಯಶಸ್ಸನ್ನೂ ಸಾಧಿಸಿದ ಸರಳಾ ಸಂದರ್ಶನದ ಸಮಯದಲ್ಲಿ ತಮ್ಮ ದಾಂಪತ್ಯ ಜೀವನ ಕುರಿತು ಹೆಮ್ಮೆ ವ್ಯಕ್ತಪಡಿಸುತ್ತಾಳೆ. ನನ್ನ ಯಶಸ್ಸಿನಲ್ಲಿ ಹಿರಿಯ ಪಾಲು ತನ್ನ ಜೀವನ ಸಂಗಾತಿಯದೆಂದು ಹೇಳುತ್ತಾಳೆ. 'ನಿಮ್ಮ ಮತ್ತು ನಿಮ್ಮ ಬಾಳ ಸಂಗಾತಿಯ ನಡುವೆ ಜಾತಿ ನಂಬಿಕೆ, ಆಚರಣೆಗಳ ನೆಲೆಯಲ್ಲಿ ಭಿನ್ನಾಭಿಪ್ರಾಯ, ಸಂಘರ್ಷ ಎದ್ದಿಲ್ಲವೇ?' ಎಂದು ಕೇಳಿದಾಗ ಸರಳಾ ಕೊಡುವ ಉತ್ತರ ಮುಖ್ಯ ಮತ್ತು ಸರಿ ಎನಿಸುತ್ತದೆ. "......... ತಾವು ಬೇರೆ ಬೇರೆ ಜಾತಿಯವರು ಅಂತ ಅಂದುಕೊಂಡು ಮದುವೆ ಆದವರಲ್ಲಿ ಅಂತಹ ಭಿನ್ನತೆಗಳು, ಸಂಘರ್ಷಗಳು ಬರಬಹುದೇನೋ, ಆದರೆ ನಾನಾಗ್ಲೀ ನನ್ನ ಸಂಗಾತಿಯಾಗಲಿ, ಜಾತಿ ಎನ್ನುವ ವರ್ತುಲದಿಂದಲೇ ಹೊರಗೆ ಜಿಗಿದವರು. ಕೇವಲ ಮನುಷ್ಯರಾಗಿ ಮನುಷ್ಯರನ್ನು ನೋಡುವವರು...........ಇದರಿಂದಲೇ ನಮ್ಮ ನಡುವೆ ಜಾತಿ, ನಂಬಿಕೆ, ಶ್ರದ್ಧೆಗಳ ಸಂಘರ್ಷಕ್ಕೆ ಎಡೆ ಯಾವತ್ತೂ ಒದಗಿಲ್ಲ....." ಎಂದು ಹೇಳುತ್ತಾಳೆ.

ಜೀವನ್‌ನ ಮನೆಯವರಿಗೆ ಜಾತಿಯ ವಿಷಯ ನಂತರದಲ್ಲಿ ತಿಳಿಯಿತು. ಮೊದಲೇ ಪ್ರೀತಿ ಬೆಸೆದಿದ್ದರಿಂದ ಅವರಿಗೂ ಜಾತಿ ಮುಖ್ಯ ಎನಿಸಲಿಲ್ಲ. ಆದರೆ ಜೀವನ್‌ನ ಅಣ್ಣನ ಮಗಳ ಮದುವೆ ಸಮಯ ಬಂದಾಗ ಮಾತ್ರ ಸರಳಾಳ ಜಾತಿ ಕುರಿತು "ಇತ್ತೀಚೆಗೆ ನನ್ಗೊಂದು ಅನುಮಾನ. ನಮ್ಮ ಮದ್ವೆ ಏನಾದ್ರು ಅವ್ಳ ದಾರಿಗೆ ಮುಳ್ಳಾಗಿದೆನಾ ಅಂತ" ಎಂದು ಜೀವನ್ ಹೇಳಿದಾಗ ಆಕೆಗೆ ಆಘಾತವಾಯಿತು. ಜಾತಿ ಭೂತಾಕಾರವಾಗಿ ಕಂಡಿತು. "ನಾಭಿಮೂಲದಿಂದ ಹುಟ್ಟಿದ ನೋವನ್ನು ಸದ್ದೇ ಇಲ್ಲದೇ ಹೊರಹಾಕುವಂತೆ ಸರಳಾ ಅತ್ತಳು" ಮಾನಸಿಕವಾಗಿ ತುಂಬಾ ಹಿಂಸೆ ಅನುಭವಿಸಿದಳು ಆದರೆ ಜೀವನ್ ಮಾತ್ರ ಏನೂ ನಡೆದೇ ಇಲ್ಲ ಎಂಬಂತೆ ಇದ್ದನು. ತಾನಾಡಿದ ಮಾತಿನ ಬಗ್ಗೆ ಪಶ್ಚಾತಾಪದ ಎಳೆಕೂಡ ಕಾಣಲಿಲ್ಲ.

ಕದಡಿದ ಮನಸ್ಸು ತಿಳಿಯಾದ ನಂತರ ಯಾರೊಂದಿಗೂ ಹೇಳಬಾರದೆಂದುಕೊಂಡಿದ್ದ ವಿಷಯವನ್ನು ಗೆಳತಿ ನಳಿನಾಳ ಮುಂದೆ ಬಿಚ್ಚಿಟ್ಟಳು. ನಳಿನಾ ಹೇಳಿದ ಸಮಾಧಾನದ ಮಾತುಗಳು ಸರಿ ಎನಿಸಿದ್ದವು. ಜೀವನದ ಬಗ್ಗೆ ಯೋಚಿಸಿ "ನನ್ ಬದುಕಲ್ಲಿ ಜೀವನ್ ನೀಡಿದ ಸಮೃದ್ಧಿಯ ಮುಂದೆ ಈ ಕಹಿ ತುಂಬಾ ಸಣ್ಣದು. ಅವನಲ್ಲೇ ಈ ಭಾವ್ನೆ ಇರೋದಾದ್ರೆ ಅದರ ಬಿಸಿ ಇಷ್ಟು ವರ್ಷ ತಟ್ಟೆ ಇರ್ತಿರಲಿಲ್ಲ" ಎಂಬ ಅಂಶವನ್ನು ಮನಗಂಡು ಬದುಕನ್ನು ಉಳಿಸಿಕೊಂಡಳು.

ಜಾತಿ ಮರೆತು ಪ್ರೀತಿಯಿಂದ ಬದುಕಲು ಹೊರಟಾಗ ಹೊರಗಿನಿಂದ ಇಂಥ ಅಡೆ, ತಡೆ, ನೋವು ಎದುರಾಗಬಹುದು, ಅದನ್ನು ದೊಡ್ಡದು ಮಾಡದೆ ಜೀವನ ಸುಖಮಯವಾಗುವಂತೆ, ಸಮಾಜದಲ್ಲಿ ಮಾದರಿಯಾಗುವಂತೆ ಮಾಡಿಕೊಳ್ಳುವುದು ಮುಖ್ಯ.

"ಅಪೂರ್ಣರು" ಕಥೆಯಲ್ಲಿ ಪುರುಷಪ್ರಧಾನ ಸಮಾಜ ವ್ಯವಸ್ಥೆಯ ಕುಟುಂಬದಲ್ಲಿ ಹೆಣ್ಣು ಗಂಡಿನ ದರ್ಪ ದಬ್ಬಾಳಿಕೆಗೆ ಬಲಿಯಾಗಿ ಮಾನಸಿಕ ಹಿಂಸೆಗೆ ಒಳಗಾಗುತ್ತಾಳೆ ಎಂಬುದನ್ನು ತಿಳಿಸುತ್ತದೆ. ಜೊತೆಗೆ ಕುಟುಂಬ ವ್ಯವಸ್ಥೆಯಲ್ಲಿ ಸಂಬಂಧಗಳು ಹೇಗೆ ಸ್ವಾರ್ಥ ಲಾಲಸೆಯಿಂದ ಕೂಡಿರುತ್ತವೆ ಎಂಬುದು ಸಹ ತಿಳಿಯುತ್ತದೆ.

ಆಸ್ಪತ್ರೆಯಲ್ಲಿದ್ದ ಫಾತಿಮಾ ಬೀಬಿ ಕಾಯಿಲೆಯ ಕೊನೆಯ ಹಂತಕ್ಕೆ ತಲುಪಿದ್ದಳು. ಈ ಸಂದರ್ಭದಲ್ಲಿ ಗಂಡ ಹುಸೇನ್ ಸಾಹೇಬ ಮತ್ತು ಮಗಳು ಶಮಾ ಆಕೆಯನ್ನು ನೋಡಿಕೊಳ್ಳುತ್ತಿದ್ದರು. ಮಾತನ್ನು ಕಳೆದುಕೊಂಡಿದ್ದ ಆಕೆ ನೋವನ್ನನುಭವಿಸುತ್ತಿದ್ದಳು. ಅದನ್ನು ತಡೆಯಲಾಗದೆ 'ಓ ದೇವರೇ... ನೀನು ಇರುವುದೇ ಆದಲ್ಲಿ ನನಗೆ ಸುಖದ ಸಾವನ್ನು ಕೊಡು' ಎಂದು ಕೇಳಿಕೊಳ್ಳಬೇಕೆನಿಸಿತು. ಆದರೆ ದೇವರನ್ನು ನಂಬದೆ ಜನರನ್ನು ಅವರ ಪ್ರೀತಿಯನ್ನು, ಜೀವನವನ್ನು ನಂಬಿಕೊಂಡು ಬಂದ ಈಕೆಗೆ ಯಾವ ದೇವರು ತಾನೆ ತನ್ನ ನೋವನ್ನು ಪರಿಹರಿಸಿಯಾನು ಎಂಬ ಅನುಮಾನ ಮೂಡಿತು. ಇಲ್ಲಿ ಕಾಣದ ದೇವರಿಗಿಂತ ಜನ ಮತ್ತು ಅವರ ಪ್ರೀತಿ ಮುಖ್ಯ ಎಂಬುದು ತಿಳಿಯುತ್ತದೆ. ಅಷ್ಟೇ ಅಲ್ಲದೆ 'ಗಂಡನೇ ದೇವರೆಂದು' ನಂಬಿದ ಆಕೆ "ಆತನ ಇಷ್ಟಾನಿಷ್ಟಗಳನ್ನು ಪೂರೈಸುತ್ತ, ಸಿಟ್ಟು-ಸೆಡವುಗಳನ್ನು ನುಂಗಿಕೊಳ್ಳುತ್ತ, ಅವನಿಗೆ ಬೇಕಾದಂತೆ ತನ್ನನ್ನೇ ತಾನು ರೂಪಿಸಿಕೊಳ್ಳುತ್ತ ಬಂದವಳಿಗೆ ತನ್ನ ಇಷ್ಟಾನಿಷ್ಟಗಳು ಏನು ಎನ್ನುವುದೇ ಅರಿವಿಗೆ ಬಂದಿರಲಿಲ್ಲ!" ಈ ಮಾತುಗಳನ್ನು ಗಮನಿಸಿದಾಗ ಒಂದಲ್ಲ ಒಂದು ಕುಟುಂಬದಲ್ಲಿ ಹೆಣ್ಣಿನ ಜೀವನದ ರೀತಿ ಇದೇ ಆಗಿದೆ ಎಂಬುದು ವಾಸ್ತವ ಸತ್ಯ ಎನಿಸುತ್ತದೆ.

ಕ್ಯಾನ್ಸರ್ ಬಂದ ನಂತರವೇ ಹುಸೇನ್ ಸಾಹೇಬರು ಸ್ವಲ್ಪ ಮೆದುವಾದದ್ದು ಎಂದು ಫಾತಿಮಾಳಿಗೆ ಅನಿಸುತ್ತಿತ್ತು. ಆಕೆಯ ಸಾವು ಖಚಿತ ಎಂದು ತಿಳಿದಾಗ ಹುಸೇನ್ ಸಾಬರಿಗೆ ಅದನ್ನು ಸಹಿಸುವುದು ಸಾಧ್ಯವಿರಲಿಲ್ಲ. ಇದುವರೆಗೂ ದೂರ್ವಾಸ ಮುನಿಯಂತೆ ಬದುಕಿದ ತನ್ನ ಜೊತೆ ಮುಕ್ತವಾಗಿ ಮಾತನಾಡುವ ಯಾವ ವ್ಯಕ್ತಿಯನ್ನು ಉಳಿಸಿಕೊಂಡಿರಲಿಲ್ಲ. ದರ್ಪ, ದಬ್ಬಾಳಿಕೆಯನ್ನು ಸಹಜ ಎಂಬಂತೆ ನಡೆಸುತ್ತಿದ್ದ ಆತ ಇಂದು ಅಪಾರ ದುಃಖ ಅನುಭವಿಸುತ್ತಿರುವುದನ್ನು ಕಂಡು ಫಾತಿಮಾಳಿಗೆ ಕನಿಕರ, ಹೆದರಿಕೆ ಮತ್ತು ವಿಷಾದವುಂಟಾಯಿತು.

ಈ ಸಂದರ್ಭದಲ್ಲಿ ಹುಸೇನ್ ಸಾಹೇಬರಿಗೆ ತಮ್ಮ ದುಃಖ ಹಂಚಿಕೊಳ್ಳಲು ಸಂಬಂಧಿಕರು ಯಾರು ಇರಲಿಲ್ಲ. ಆದರೆ ಫಕೀರಪ್ಪ ಮಾತ್ರ ಆಪ್ತ ಬಂಧುವೇನೋ ಎಂಬಂತೆ ತನ್ನ ಮಡದಿಯನ್ನು ಕಾದು ಕುಳಿತಿರುವುದನ್ನು ಕಂಡು ಆಶ್ಚರ್ಯವಾಯಿತು. ಇದಕ್ಕೆ ಫಾತಿಮಾ ಆತನಿಗೆ ಮಾಡಿದ ಒಂದು ಸಣ್ಣ ಸಹಾಯವೇ ಕಾರಣ. ಎಲ್ಲರಿಗೂ ಉಪಕಾರ ಸ್ಮರಿಸುವ ಮನಸ್ಸು ಇರುವುದಿಲ್ಲ. ಕಷ್ಟಕಾಲದಲ್ಲಿ ಬಂಧುಗಳೆಲ್ಲ ದೂರ ಉಳಿದಾಗ ತಾನು ಹಿಂದೆ ಅನಾಗರಿಕ, ಮೋಸಗಾರ, ಸೋಮಾರಿ ಎಂದೆಲ್ಲ ಹಂಗಿಸಿದ್ದ ಫಕೀರಪ್ಪನ ಇಂದಿನ ನಡತೆ ಕಂಡು ಅವನ ಬಗ್ಗೆ ಹೆಮ್ಮೆ ಎನಿಸುತ್ತದೆ. ಆತ ನೀಡುವ ಸಮಾಧಾನ ಸಂಜೀವಿನ ಎನಿಸುತ್ತದೆ.

ಮಾತು ಕಳೆದುಕೊಂಡಿದ್ದ ಫಾತಿಮಾ ಹಿಂದಿನ ಘಟನೆಗಳ ಮೆಲಕು ಹಾಕುತ್ತಿದ್ದಳು. ಅಪ್ಪ ಮಗನ ನಡುವಿನ ಶೀತಲ ಸಮರದಲ್ಲಿ ತಾನು ಬಲಿಪಶುವಾಗಿ ಮಗನಿಂದ ನಿರ್ಲಕ್ಷ್ಯಕ್ಕೆ ಒಳಗಾಗಬೇಕಾದ ಬಗೆಯನ್ನು ಚಿಂತಿಸುತ್ತಿದ್ದಳು.

ಮಗ ಸೊಸೆ ಫಾತಿಮರನ್ನು ನೋಡಲು ಬಂದಿದ್ದರು. ಪ್ರೀತಿಗಿಂತ ಅದೊಂದು ಕರ್ತವ್ಯ ಎಂಬಂತೆ ಕಾಣುತ್ತಿತ್ತು. ಮಗಳು ತಾಹಿರಾಳ ನಡವಳಿಕೆಯು ಹಾಗೇ ಇತ್ತು. ಹೆತ್ತು ಹೊತ್ತು, ತನ್ನ ಸರ್ವಸ್ವವನ್ನು ತ್ಯಾಗ ಮಾಡಿ ಸಾಕಿ ಬೆಳೆಸಿದ ಮಕ್ಕಳು ಆ ಬಗ್ಗೆ ಕೃತಜ್ಞತಾ ಭಾವವನ್ನು ಹೊಂದದಿರುವುದು ನಿಜವಾಗಿಯೂ ವಿಷಾದವೆನಿಸುತ್ತದೆ.

ದೇಹದ ನೋವಿಗಿಂತ ಭೂತಕಾಲದ ಕಹಿ ಪ್ರಸಂಗಗಳೇ ಹೆಚ್ಚು ಹಿಂಸೆ ಕೊಡುತ್ತಿದ್ದವು. ತಾನು ಜೀವನದಲ್ಲಿ ಮಾತನಾಡದೇ ಮೂಕವಾಗಿದ್ದರಿಂದ ಜೀವನದಲ್ಲಾದ ಲಾಭ-ನಷ್ಟಗಳ ವಿಚಾರ ತಲೆಹೊಕ್ಕಿತ್ತು. ಈ ಸಂದರ್ಭದಲ್ಲಿ ತನ್ನಿಂದ ದೂರವಾದ ಕರುಳಕುಡಿ ಶರೀಫಳನ್ನು ನೋಡಲು ಸಾಧ್ಯವೇ ಎಂಬ

ಯೋಚನೆ ಮತ್ತು ಆಸೆ. ಆದರೆ ಅದನ್ನು ಅರ್ಥಮಾಡಿಕೊಳ್ಳುವವರು ಯಾರು ಜೊತೆಗೆ ಮಾತು ಇದ್ದಾಗಲೇ ಹೇಳಲಾಗದ ಇನ್ನು ತಾನು ಮಾತು ಕಳೆದುಕೊಂಡಿರುವಾಗ ಹೇಳಲು ಸಾಧ್ಯವೇ? ಎಂಬ ಚಿಂತೆ. ತನ್ನ ಆಸ್ತಿ, ವಸ್ತುಗಳನ್ನು ಹಂಚುವಾಗಲು ಶರೀಫಾಳಿಗೆ ನೀಡಲಾಗದ ಸ್ಥಿತಿ ಎಲ್ಲಾ ಮಾನಸಿಕ ಹಿಂಸೆ, ಅಸಾಯಕತೆ. ಈಗ ಆಕೆಗೆ ತಾನು ಅಂದು ಗಟ್ಟಿಯಾಗಿ ವಾದಿಸಬೇಕಾಗಿತ್ತು ಎನಿಸುತ್ತದೆ. ಈ ರೀತಿ ಯೋಚನಾ ಮಗ್ನಳಾಗಿದ್ದ ಫಾತಿಮಾಳನ್ನು ಕಂಡ ಫಕೀರಪ್ಪ ಅವಳ ಮನಸ್ಸನ್ನು ಓದಿದನೇನೋ ಎಂಬಂತೆ ಶರೀಫಳನ್ನು ನೋಡುವ ಆಸೆ ಇದೇಯೇ ಎಂದು ಪ್ರಶ್ನಿಸಿದ. ಅವಳ ಆಸೆಯೂ ಅದೇ ಆಗಿತ್ತು. ಆದರೆ ಹುಸೇನ್ ಸಾಹೇಬರು ಅದನ್ನು ಕೇಳಿಯೂ ತಿಳಿಯದವರಂತೆ ಸುಮ್ಮನಾದರು. ಇದು ಹೆಣ್ಣಿನ ಸಾವಿನ ಸಮಯದಲ್ಲೂ ಆಕೆಯ ಆಸೆಯನ್ನು ಪೂರೈಸಲಾಗದ ಕ್ರೂರಮುಖವನ್ನು ಬಿಂಬಿಸುತ್ತದೆ.

ಕೊನೆಗೂ ತನ್ನ ಆಸೆ ಈಡೇರದೆ, ತನ್ನ ಮನಸ್ಸು ಭಾವನೆಗಳಿಗೆ ಬೆಲೆ ಕೊಡುವವರಿಲ್ಲದೆ ಫಾತಿಮಾ ಕೊನೆಯುಸಿರೆಳೆಯುತ್ತಾಳೆ. ಸತ್ತ ನಂತರವಾದರೂ ಆಕೆಯ ಮನಸ್ಸಿಗೆ ಶಾಂತಿ ಸಿಗಲೆಂದು ಫಕೀರಪ್ಪ ಶರಿಫಾಳನ್ನು ಮನಸ್ಸಿನಟ್ಟಿಕೊಂಡು ಎಲ್ಲರ್ರೂಗ್ಗಿ ಸುದ್ದಿ ಮುಟ್ಸಿರಲ್ಲವ್ವ..... ಅದ್ಕಂತ ಅಂದೇ" ಎಂದು ಹೇಳಿದಾಗಲೂ ಆತನ ಇಂಗಿತವನ್ನು ಯಾರೂ ಮನಸ್ಸಿಗೆ ಅರಿಯಲಿಲ್ಲ. ಕೊನೆಗೆ ಹುಸೇನ್ ಸಾಹೇಬರ ಬಳಿಯೂ ಈ ವಿಚಾರ ಪ್ರಸ್ತಾಪಿಸಿದಾಗ ಮೌನವೇ ಉತ್ತರವಾಯಿತು. ಫಾತಿಮಾಳ ಪಾಲಿಗೆ ಜೀವನ ಪೂರ್ತಿ ಪೂರ್ಣಪ್ರಮಾಣದ ತೃಪ್ತಿ ನೀಡದ ಗಂಡ, ಮಕ್ಕಳು ಕೊನೆಗೂ ಅಪೂರ್ಣರಾಗಿಯೇ ಉಳಿದರು.

ಸಬಿಹಾ ಭೂಮಿಗೌಡ ಅವರ **'ಅಸ್ಮಿತೆ'** ಕಥೆಯು ಕುಟುಂಬ, ಸಮಾಜ ಮತ್ತು ಸಂಸ್ಕೃತಿಯ ಅಂಶಗಳನ್ನು ಕಟ್ಟಿಕೊಡುವಲ್ಲಿ ಮುಖ್ಯವೆನಿಸುತ್ತದೆ.

ಹಳ್ಳಿ ಔಷಧಿ ಕೊಡುವಲ್ಲಿ ಹೆಸರುವಾಸಿಯಾದ ಕಮಲಾಕ್ಷಮ್ಮನ ಜೀವನ ಆದರ್ಶವಾದುದು. ಆಕೆಯ ಧೈರ್ಯ, ಛಲ, ಪರೋಪಕಾರ ಮನೋಭಾವ, ಸಮಯಕ್ಕೆ ನೀಡುವ ಮಹತ್ವ, ಅತಿಥಿ ಸತ್ಕಾರ ಇನ್ನೂ ಅನೇಕ ಗುಣಗಳು ಅವಳಲ್ಲಿ ಎದ್ದು ಕಾಣುವಂತಿದ್ದು, ನೋಡುವವರಿಗೆ ಬೆರಗನ್ನುಂಟುಮಾಡುತ್ತವೆ.

ಕಮಲಾಕ್ಷಮ್ಮನವರನ್ನು ಸಂದರ್ಶನ ಮಾಡಲು ಬಂದಿದ್ದ ಶಿವಮೊಗ್ಗ ಕಾಲೇಜಿನ ಅಧ್ಯಾಪಕಿಗೆ ಕಮಲಾಕ್ಷಮ್ಮನ ಗಂಡನ ವರ್ತನೆ ವಿಚಿತ್ರ ಎನಿಸಿತು. ಕಮಲಾಕ್ಷಮ್ಮನನ್ನು ಭೇಟಿಯಾದ ನಂತರ ಅವರ ಸ್ವಭಾವ ತಿಳಿಯಿತು. ಗಂಡನಿಗೆ ಕಮಲಾಕ್ಷಮ್ಮನವರ ಕೆಲಸ ಇಷ್ಟವಿಲ್ಲ, ಜೊತೆಗೆ ಪ್ರಯೋಜನಕ್ಕೆ ಬಾರದ, ಆದಾಯವಿಲ್ಲದ ಕೆಲಸ ಎಂಬ ವಾದ. ಇದರ ನಡುವೆಯೇ ಕಮಲಾಕ್ಷಮ್ಮನವರು ಆ ವಿಷಯವನ್ನು ದೊಡ್ಡದು ಮಾಡದೆ ಅನುಸರಿಸಿಕೊಂಡು ಕೊಂಚ ಸಮಯವನ್ನೂ ವ್ಯರ್ಥ ಮಾಡದೆ ಕೆಲಸ ಮಾಡುತ್ತಿದ್ದ ರೀತಿ, ನಾಲ್ಕಾರು ಜನರಿಗೆ ಉಪಯೋಗವಾಗುವಂತೆ ಬದುಕುತ್ತಿದ್ದ ರೀತಿ, ಹಣಕ್ಕೆ ಆಸೆ ಪಡದೆ ಸೇವೆ ಮಾಡುತ್ತಾ, ಸ್ವಂತ ದುಡಿಮೆಯಿಂದ ಹಣ ಮಾಡುತ್ತಿದ್ದ ರೀತಿ ಇವೆಲ್ಲವೂ ಸಂದರ್ಶಕಿಗೆ ಮತ್ತು ಆಕೆಯ ಗೆಳತಿ ಮಂಜುಳಾಳಿಗೆ ಆಶ್ಚರ್ಯ ಉಂಟುಮಾಡಿದವು. ಸದಾ ಕ್ರಿಯಾಶೀಲರಾಗಿದ್ದ ಅವರು ಸಂಸಾರಕ್ಕೆ ಅಂಟಿಕೊಂಡ ಮೇಲೆ ಬಿಡುವೇ ಆಗುವುದಿಲ್ಲ, ಬೇರೆ ಯಾವ ಕೆಲಸವನ್ನು ಮಾಡಲಾಗುವುದಿಲ್ಲ ಎನ್ನುವವರಿಗೆ ಅಪವಾದವಾಗಿದ್ದರು.

ಕಮಲಾಕ್ಷಮ್ಮನವರು ದೂರದಿಂದ ಬಂದ ಅತಿಥಿಗಳನ್ನು ಸತ್ಕರಿಸಿದ ರೀತಿ ನಮ್ಮ ಸಂಸ್ಕೃತಿಯ ಪ್ರತೀಕವಾಗಿದೆ. ಅಷ್ಟೇ ಅಲ್ಲದೆ ಕಮಲಾಕ್ಷಮ್ಮ ಮತ್ತು ಅವರ ನಾದಿನಿ ಸಂದರ್ಶಕರಿಗೆ ಸಹಕರಿಸಿದ ರೀತಿ ವಿದ್ಯಾವಂತರನ್ನೇ ನಾಚಿಸುವಂಥದ್ದು. ನೆಂಟರಿಷ್ಟರು ಹೊರಹೊರಟರೆ ಹೊಸಿಲಿಂದಾಚೆಗೂ ಬಾರದ ಇಂದಿನ ಜನರನ್ನು ನೋಡುತ್ತಿರುವ ಪರಿಸ್ಥಿತಿಯಲ್ಲಿ ಕಮಲಾಕ್ಷಮ್ಮ ಸಂದರ್ಶಕರನ್ನು ಬೀಳ್ಕೊಟ್ಟ ರೀತಿ ತಲೆ ತಗ್ಗಿಸುವಂತಿದೆ. ಈ ಮುಂದಿನ ಸಾಲುಗಳು ಅದನ್ನು ಖಚಿತಪಡಿಸುತ್ತವೆ.

"ಇದು ಮೊಡವೆಗೆ ಒಳ್ಳೇದು, ಇದು ಬಾಣಂತಿ ಲೇಹ್ಯ, ಇದು ಮುಟ್ಟಿನ ದಿನಗಳಲ್ಲಿ ಬರೋ ಹೊಟ್ಟೆ ನೋವಿಗೆ ಔಷಧಿ, ಇವಿಷ್ಟು ಹಪ್ಪಳ ಸಂಡಿಗೆ, ಬಾಳಕ ಮನೇಲೇ ಮಾಡಿದ್ದು..... ಉಪಯೋಗಿಸಿ ನೋಡಿ....... ನಾನೇ ಹಾಕಿರೋ ಕಸೂತಿ.... ನಿಮ್ಗೆ ನೆನಪಿಗೆ..... ತಗೊಳ್ಳಿ ಎಂದು ಮುಂದಿಟ್ಟರು." ಅಷ್ಟೇ ಅಲ್ಲದೆ "ಸ್ವಲ್ಪ ಇರಿ ನನ್ನ ಮಗ ಭವಾನಿಶಂಕರ ಬಂದಿದ್ದಾನೆ. ಅವ್ನು ನಿಮ್ಮನ್ನ ಬಸ್‌ತನ್ಕ ಬಿಟ್ ಬರ್ತಾನೆ, ಕತ್ಲೆ ಆಗ್ತಿದೆ, ದಾರಿತಪ್ಪೀತು" ಎಂದರು. ಇಂಥ ಸಂಸ್ಕಾರಗಳು ಇಂದು ಕಣ್ಮರೆಯಾಗುತ್ತಿರುವುದು ವಿಷಾದವೆನಿಸುತ್ತದೆ.

ಗೆರೆಗಳು ಕಥಾಸಂಕಲನದ ಪ್ರಮುಖ ಕಥೆ **'ಗಂಗವ್ವ ಗಂಗಾಮಾಯಿ'**. ಈ ಕಥೆಯಲ್ಲಿ ಪ್ರಕೃತಿ ವಿಕೋಪ ಮತ್ತು ಅದರಿಂದ ಉಂಟಾಗುವ ಭೀಕರ ಪರಿಸ್ಥಿತಿಯ ಚಿತ್ರಣವಿದೆ. ಆದರೆ ಈ ಕಥೆ ಅದಷ್ಟರಿಂದ ಮಾತ್ರ ಮುಖ್ಯ ಎನಿಸುವುದಿಲ್ಲ. ಪ್ರಕೃತಿ ವಿಕೋಪ ಆಗಿಂದಾಗ್ಗೆ, ಅಲ್ಲಲ್ಲಿ ನಡೆಯುತ್ತಲೇ ಇರುತ್ತದೆ. ಆದರೆ ಇಲ್ಲಿ ಕಥೆ ಮುಖ್ಯವಾಗುವುದು ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಜೀವನ ಅಸ್ತವ್ಯಸ್ತವಾದಾಗ ಗಂಡಿಗಿಂತ ಹೆಣ್ಣು ಅಲ್ಲಿ ಬಲಿಯಾಗುತ್ತಾಳೆ, ಹಿಂಸೆ ನೋವನ್ನು ಅನುಭವಿಸುತ್ತಾಳೆ ಎಂಬುದನ್ನು ಅನಾವರಣಗೊಳಿಸುವುದರಿಂದ. ಈ ಸಂದರ್ಭದಲ್ಲಿ ಬಿ.ಎನ್.ಸುಮಿತ್ರಾಬಾಯಿ ಅವರು ಮುನ್ನುಡಿಯಲ್ಲಿ ಈ ಕಥೆ ಕುರಿತು ಹೇಳಿರುವ ಮಾತುಗಳು ಮುಖ್ಯ ಎನಿಸುತ್ತವೆ. "ಉತ್ತರ ಕರ್ನಾಟಕದಲ್ಲಿ ಸಂಭವಿಸಿದ ಭೀಕರ ಪ್ರವಾಹದ ಫಲವಾಗಿ ಉಂಟಾದ ಬದುಕಿನ ವಿಧ್ವಂಸಕ ದಾರುಣ ಚಿತ್ರಣಕ್ಕೆ ಪ್ರವಾಹದ ಪರಿಣಾಮಗಳ ಸಮಾಜಶಾಸ್ತ್ರೀಯ ಅಧ್ಯಯನದ ವೈಧಾನಿಕತೆಯನ್ನು ಅಳವಡಿಸಿಕೊಳ್ಳಲಾಗಿದೆ. ಬಹಿರಂಗದ ಸಾಮಾಜಿಕ ಕ್ರಿಯಾಚರಣೆ ಮತ್ತು ಕಥನದ ಸೃಜನಶೀಲ ಹೊಳಹುಗಾರಿಕೆಯನ್ನು ಜೋಡಿಸುವ ಈ ಯತ್ನ ಕುತೂಹಲ ಹುಟ್ಟಿಸುತ್ತದೆ."

ಉತ್ತರಕರ್ನಾಟಕದ ಅತೀವೃಷ್ಟಿಪೀಡಿತ ಪ್ರದೇಶಗಳಿಗೆ ವರದಿಗೆಂದು ತಯಾರಿಯಾಗಿ ಹೊರಟ ಲೀನಾ, ಮಂಜುಳಾ, ನವೀನ್, ರಫೀರ್‌ರಿಂದ ಅಲ್ಲಿನ ಚಿತ್ರಣ ತಿಳಿಯುತ್ತದೆ.

ಪ್ರಕೃತಿ ವಿಕೋಪದ ಸಂದರ್ಭದಲ್ಲಿ ತೊಂದರೆಗೊಂಡವರಿಗೆ ಸಹಾಯ ನೀಡುವ ಬದಲು ಮಾನವೀಯತೆ ಮರೆತು ಸಮಯಸಾಧಕರಾಗಿ ಸ್ವಾರ್ಥ ಸಾಧಿಸುವ ಪುಡಾರಿಗಳ ಮೋಸ, ವಂಚನೆಯನ್ನು ಚಿತ್ರಿಸಿರುವುದನ್ನು ಕಥೆಯಲ್ಲಿ ಕಾಣಬಹುದು. ವಿಪರೀತ ಮಳೆಯಿಂದಾಗಿ ಮನೆಗಳು ಕುಸಿದು ಕಣ್ಣ ಮುಂದೆಯೇ ತಮ್ಮವರು ಜೀವಂತ ಸಮಾಧಿಯಾದ ದಾರುಣ ಚಿತ್ರಣವನ್ನು ಕಾಣುವುದು ಜೀವನದ ಭೀಕರತೆಗೆ ಸಾಕ್ಷಿಯಾಗಿದೆ.

ಪಕೃತಿ ವಿಕೋಪದ ಸಂದರ್ಭದಲ್ಲಿ ಗಂಡಿಗಿಂತ ಹೆಣ್ಣು ಅದಕ್ಕೆ ಬಲಿಯಾಗುತ್ತಾಳೆ ಎಂಬುದಕ್ಕೆ ಸಾಕಷ್ಟು ನಿದರ್ಶನ ಕೊಡುತ್ತಾರೆ. ಹೆಣ್ಣು ಮಕ್ಕಳಿಗೆ ಆ ಸಮಯದಲ್ಲಿ ಜಳಕ ಮಾಡುವುದಕ್ಕೂ ಸರಿಯಾದ ವ್ಯವಸ್ಥೆ ಇಲ್ಲದಿರುವುದು, ಹಸಿ ಮೈ ಬಾಣಂತಿಯರು ಬರಿ ನೆಲದ ಮೇಲೆ ಕೌದಿಯಂತದ್ದು ಹಾಸಿಕೊಂಡು ನಡುಗುತ್ತಾ ಮಲಗಿದ್ದುದು ಇವೆಲ್ಲವನ್ನು ಗಮನಿಸಿದ ವರದಿಗಾರರು ಅಸಹಾಯಕರಾಗಿ ನಿಂತಿದ್ದರು. ಆದರೂ ಅದರಲ್ಲಿ ಲೀನಾ ಎಂಬಾಕೆ ಮುಂಜಾಗ್ರತೆಯಿಂದ ತಂದಿದ್ದ ಮಾತ್ರೆ, ಔಷಧಿಗಳನ್ನು ನೀಡಿ ಸಹಕರಿಸಿದರು.

ಮೂರು ದಿನಗಳಿಂದ ಏನನ್ನೂ ತಿನ್ನದೇ, ಕುಡಿಯದೇ ಇದ್ದ ಮೂವರು ಯುವತಿಯರನ್ನು ಭೇಟಿಯಾದಾಗ ತಿಳಿದ ಚಿತ್ರಣದಿಂದ ಹೆಣ್ಣು ಸಮಾಜದಲ್ಲಿ ಎಂಥೆಂಥ ಸ್ಥಿತಿ ಅನುಭವಿಸಬೇಕಾಗುತ್ತದೆ ಎಂಬುದು ತಿಳಿಯುತ್ತದೆ. ಊಟ ಮಾಡದಿರುವುದಕ್ಕೆ ಕಾರಣ "ನೀರು ಕುಡಿದರೆ, ಊಟ ತಿಂಡಿ ತಿಂದರೆ ಪ್ರಕೃತಿ ಕರೆಯನ್ನು ತಡೆಯುವುದು ಹೇಗೆ ಎಂಬುದಕ್ಕಾಗಿ" ಎಂದು ತಿಳಿಯಿತು. ಇದರಿಂದ ಎಲ್ಲರೂ

ದಂಗಾದರೂ ಇಂಥ ಇನ್ನೂ ಅನೇಕ ವಿಚಾರಗಳು ತಿಳಿದವು. ಜೊತೆಗೆ ಸ್ವಚ್ಛತೆಯ ಬಗ್ಗೆ ಜನರಿಗೆ ಅರಿವಿಲ್ಲದಿರುವುದು, ಸರಿಯಾದ ರೀತಿಯಲ್ಲಿ ಪರಿಹಾರ ಕಾರ್ಯ ನಡೆಯದಿರುವುದು, ಅದಕ್ಕೆ ಸರಿಯಾದ ತರಬೇತಿ, ಸಿದ್ಧತೆಗಳು ಇಲ್ಲದಿರುವುದು– ಈ ಅವ್ಯವಸ್ಥೆಗಳನ್ನು ಕುರಿತು ಮಾತನಾಡುತ್ತಾ ಇಂಥ ಸಮಸ್ಯೆ ಎದುರಿಸಲು ಅಧಿಕಾರಿಗಳು ಮತ್ತು ಸರ್ಕಾರ ಪೂರ್ವತಯಾರಿ ಮಾಡಿಕೊಂಡಿರಬೇಕು ಎಂಬ ಸಲಹೆಯನ್ನು ಕಥೆಯಲ್ಲಿ ನೀಡಿರುವುದು ಮುಖ್ಯ ಎನಿಸುತ್ತದೆ.

ಒಟ್ಟಾರೆಯಾಗಿ ಈ ಕಥೆಯು ಹೆಣ್ಣು ಮಕ್ಕಳು, ಸಾಮಾನ್ಯ ಜನರು ಹೇಗೆ ತೊಂದರೆಗೊಳಗಾಗುತ್ತಾರೆ ಎಂಬುದನ್ನು, ಇಂಥ ಸಂದರ್ಭದಲ್ಲಿ ಸಹಾಯ ನೀಡುವ ಬದಲು ಸ್ವಾರ್ಥಿಗಳಾಗುವ ಜನರ ನಡವಳಿಕೆಯನ್ನು, ಸರ್ಕಾರ ಮತ್ತು ಅಧಿಕಾರಿಗಳ ಪರಿಹಾರ ಕಾರ್ಯ ಸರಿಯಾಗಿ ಸಫಲವಾಗದಿರುವುದಕ್ಕೆ ಕಾರಣಗಳನ್ನು ತಿಳಿಸುವುದರಿಂದ ಮುಖ್ಯ ಎನಿಸುತ್ತದೆ.

'ತುಪ್ಪ ಮೆತ್ತಿದ ಕನ್ನಡಿ' ಕಥೆಯು ಜಾತ್ಯತೀತ ಸಮಾಜದ ಆದರ್ಶ ಚಿತ್ರಣವಾಗಿ ಮೂಡಿದೆ. ಇಂಥ ಒಂದು ಗ್ರಾಮ ಇತ್ತೇ? ಅಥವಾ ಇದೇಯೇ? ಎಂಬ ಪ್ರಶ್ನೆ ಏಳುವಂತೆ ಮೂಡಿಬಂದಿದೆ. ಜಾತಿ ಧರ್ಮ ಭೇದ ಮರೆತು ಪ್ರೀತಿ, ಸಹಕಾರದಿಂದ ಜೀವನ ನಡೆಸುವ ಜನರನ್ನೊಳಗೊಂಡ ಒಂದು ಪುಟ್ಟ ಗ್ರಾಮ 'ಇಟಗಿ'ಯ ಚಿತ್ರಣವನ್ನು ಕಥೆಗಾರ್ತಿ ನೀಡಿದ್ದು, ಅವೆಲ್ಲದರಿಂದ ದೂರ ಇರುವ ಇಂದಿನ ಪೀಳಿಗೆಗೆ ಇಂಥ ಜೀವನ ಸಾಧ್ಯವೇ? ಎನಿಸುವುದರ ಜೊತೆಗೆ ಕಥೆಯನ್ನು ವಾಸ್ತವಗೊಳಿಸುವುದರ ಮೂಲಕ ಅದರ ಸಾಧ್ಯತೆಯನ್ನು ತೋರಿಸಿರುವುದು, ಹೊಸ ಸಮಾಜದ ಸೃಷ್ಟಿಯ ಕಡೆಗೆ ಕೊಂಡೊಯ್ಯುತ್ತದೆ.

'ಇಟಗಿ' ಎಂಬ ಹಳ್ಳಿಯ ಜೀವನ ಕುರಿತು ದಾಖಲಿಸುತ್ತಿದ್ದ ಅಮ್ಮನ ಬಳಿ ಬಂದ ವಿಜಯ ಅದನ್ನು ಓದಿದಾಗ ರೋಮಾಂಚಿತಳಾಗಿ ಇಂತಹ ಒಂದು ಊರು ಇರಬೇಕಿತ್ತು ಎಂಬ ಆಸೆ ವ್ಯಕ್ತಪಡಿಸುತ್ತಾಳೆ. ಆದರೆ ಅದು ಸತ್ಯ ಕಥೆ ಎಂದು ತಿಳಿದಾಗ ಆಶ್ಚರ್ಯಗೊಳ್ಳುತ್ತಾಳೆ.

ಹಿಂದೆ "ಒಂದು ಮನೆಗೆ ಅಂಟಿಕೊಂಡು ಇನ್ನೊಂದು ಮನೆ! ಅದೂ ಬೇರೆ ಬೇರೆ ಜಾತಿಯವರದ್ದು...... ಜಗಳಾ ಇಲ್ಲಾ, ಗಲಾಟೆ ಇಲ್ಲಾ....." ಎಂಬ ಚಿತ್ರಣ ಓದಿ ತಿಳಿದ ವಿಜಯಾಳಿಗೆ ಇಂದಿನ ಜೀವನ ಸಪ್ಪೆ ಎನಿಸಿತು. ".....ಒಬ್ರು ಮುಂದಿನ್ ಬಾಗ್ಲು ತೆಗ್ದ್ರೆ ಇನ್ನೊಬ್ರ ಮನೆ ಡ್ರಾಯಿಂಗ್ ರೂಂ ಕಾಣುತ್ತೆ ಅಂತ ನಾವು ಬಾಗ್ಲು ಮುಚ್ಕೊಂಡೇ ಇರ್ತೀವಿ..... ಒಬ್ರ ಮನೇಗೆ ಹೋಗ್ಬೇಕು ಅಂದ್ರೆ ಮೀನಮೇಷ ಏಣಿಸ್ತೀವಿ,..... ಜೊತೇಲೇ ಇದ್ರು ನಮ್ಮಲ್ಲಿ ಕ್ಲೋಸ್‌ನೆಸ್ಸೇ ಇಲ್ಲ!" ಎಂಬ ವಾಸ್ತವ ಚಿತ್ರಣದಿಂದ ಅದು ಖಚಿತ ಎನಿಸುತ್ತದೆ. ವಿಜಯಾಳ ಆಸೆಯಂತೆ ಇಂದು ಇಟಗಿ ಹೇಗಿರಬಹುದು ಎಂದು ನೋಡಲು ಹೊರಟಾಗ ಅವರಿಗೆ ನಿಜವಾಗಿಯೂ ಆಶ್ಚರ್ಯ ಎನಿಸಿತು. ಅದು ಆ ಸತ್ವವನ್ನು ಇನ್ನು ತನ್ನಲ್ಲಿ ಉಳಿಸಿಕೊಂಡಿತ್ತು. ಅಲ್ಲಿನ ಜನ ಇವರನ್ನು ಸತ್ಕರಿಸಿದ ರೀತಿಯಂತೂ ಕನಸೋ ನನಸೋ ಎಂಬಂತಿತ್ತು. ಜಾತಿ, ಧರ್ಮ ಮರೆತು ಪ್ರೀತಿ, ಸ್ನೇಹ, ಸಹಕಾರದ ಜೀವನ ನಮ್ಮದಾಗಲು ಇಟಗಿಯಂಥ ಗ್ರಾಮಗಳು ಇಂದು ತಲೆ ಎತ್ತಬೇಕಾಗಿವೆ.

'ಕಲ್ಪನಾ ಲೋಕ' ಕಥೆಯು ಇತರ ಕಥೆಗಳಿಗಿಂತ ಭಿನ್ನ ಮತ್ತು ಮುಖ್ಯ ಎನಿಸುತ್ತದೆ. ಇದು ಮಕ್ಕಳ ಮನಸ್ಸು ಮತ್ತು ಶಿಕ್ಷಣಕ್ಕೆ ಸಬಂಧ ಪಟ್ಟಿದ್ದು, ಇಂಥ ವಿಷಯಗಳ ಚರ್ಚೆ ನಡೆಯಬೇಕಾಗಿದೆ.

ಶಾಲೆಯ ಕಟ್ಟುನಿಟ್ಟಿನ ವಾತಾವರಣದಲ್ಲಿ, ಪುಸ್ತಕಗಳ ಹೊರೆಯಲ್ಲಿ ಬಲವಂತವಾಗಿ ಕಲಿಯುವುದೇ ಶಿಕ್ಷಣ ಎಂಬಂತಿರುವ ಇಂದಿನ ದಿನಗಳಲ್ಲಿ ಮಕ್ಕಳ ಮನಸ್ಸನ್ನು ಅರಿಯುವ ಕೆಲಸವನ್ನು ಯಾರೂ ಮಾಡುತ್ತಿಲ್ಲ. ಕೇವಲ ಔಪಚಾರಿಕ ಶಿಕ್ಷಣದಿಂದ ಬದುಕು ಗಟ್ಟಿಯಾಗುವುದಿಲ್ಲ. ಮಕ್ಕಳು ಸ್ವತಂತ್ರರಾಗಿ ತಮ್ಮ ಆಸಕ್ತಿಗೆ ಅನುಗುಣವಾಗಿ ವಿಷಯಗಳನ್ನು ಕಲಿಯಬೇಕು. ಆಗ ಮಾತ್ರ ಅವರ ಮನೋವಿಕಾಸ ಮತ್ತು

ಬೌದ್ಧಿಕ ವಿಕಾಸ ಸಾಧ್ಯ. ಅಂಥ ಪೂರಕ ವಾತಾವರಣವನ್ನು ಶಿಕ್ಷಕರು ಮತ್ತು ಪೋಷಕರು ಒದಗಿಸಬೇಕಾಗಿರುವುದು ಇಂದು ಅವಶ್ಯಕವಾಗಿದೆ.

ಅಪ್ಪನ ಭಯದಲ್ಲಿ ಓದುತ್ತಾ ಕುಳಿತಿದ್ದ ಕಲ್ಪನಾಳಿಗೆ ನಿದ್ದೆ ತಡೆಯಲಾಗುತ್ತಿರಲಿಲ್ಲ. ಓದಿ ಒಪ್ಪಿಸದಿದ್ದರೆ ಅಪ್ಪನ ಕೋಪಕ್ಕೆ ಗುರಿಯಾಗಬೇಕಾದ ಭಯ. ಕಲಿತಿದ್ದರೂ ತಂದೆಯ ಮುಖ ನೋಡಿದೊಡನೆ ಗೊಂದಲ ಉಂಟಾಗುತ್ತಿದ್ದ ಸ್ಥಿತಿ ನೆನೆದು ಭಯಗೊಂಡಳು. ಇಂತಹ ಸಂದರ್ಭದಲ್ಲಿ ಅವಳಿಗೆ ನೆಮ್ಮದಿ ಕೊಡುವ ಒಂದೇ ಒಂದು ಜಾಗ ಎಂದರೆ ಪಾಯಿಖಾನೆ. ಅಲ್ಲಿ ಆಕೆಗೆ ಸ್ವಾತಂತ್ರ್ಯ. ಗೋಡೆಯ ಮೇಲಿನ ಚಿತ್ರ ವಿಚಿತ್ರ ಆಕಾರಗಳು ವಿವಿಧ ವೃಕ್ಷಗಳಾಗಿ, ಘಟನೆಗಳಾಗಿ, ಕಥೆಗಳು ಆಗಿ ಮನಸ್ಸಿನಲ್ಲಿ ಮೂಡುತ್ತಿದ್ದವು. ತಂದೆ ಹೇಳಿದ ಕಥೆಯಲ್ಲಿ ಬರುವ ಪಾತ್ರ, ಘಟನೆಗಳು ಅಲ್ಲಿರುವಂತೆ ಕಲ್ಪಿಸಿಕೊಳ್ಳುತ್ತಿದ್ದಳು. ಹಾಗೆ ಅಲ್ಲಿಯೇ ನಿದ್ದೆ ಹೋಗಿ ಎಷ್ಟು ಹೊತ್ತಾದರೂ ಬರದಿದ್ದುದು ಕಂಡು ಎಲ್ಲರಿಗೂ ದಿಗಿಲಾಯಿತು. ತಂದೆಯ ಭಯಕ್ಕೆ ಏನಾದರೂ ಹೆಚ್ಚು ಕಡಿಮೆ ಮಾಡಿಕೊಂಡಳೆ ಎಂಬ ಭಯವಾಯಿತು.

ತಂದೆ ಈಶ್ವರಪ್ಪನವರಿಗೆ ತಮ್ಮ ನಡವಳಿಕೆಯ ಬಗ್ಗೆ ಬೇಸರ ಮೂಡಿತು. ತಾವು ಓದಲು ತುಂಬಾ ಕಷ್ಟಪಡಬೇಕಾಯಿತು. ಹಾಗೆ ಓದಿ ರ್‍ಯಾಂಕ್ ಪಡೆದಿದ್ದರು. ಆದರೆ ಇಂದು ಇಷ್ಟೆಲ್ಲ ಅನುಕೂಲ ಇರುವಾಗ ಮಕ್ಕಳು ಕಡಿಮೆ ಅಂಕ ಪಡೆದು ಓದುವುದನ್ನು ಸಹಿಸಲಾಗುತ್ತಿರಲಿಲ್ಲ. ಆದ್ದರಿಂದ ಇದೊಂದು ಬಾರಿ ಏನೂ ಅನಾಹುತ ಆಗದಿರಲಿ ಎಂದು ಬೇಡಿಕೊಂಡರು.

ಏಣಿ ಹಾಕಿ ನೋಡಿದಾಗ ಕಲ್ಪನಾ ನಿದ್ದೆ ಹೋಗಿರುವುದು ಕಂಡು ಅದುವರೆಗೂ ಇದ್ದ ಆತಂಕ ದೂರವಾಗಿ ಮುಖದಲ್ಲಿ ನಗು ಮೂಡಿತು.

ಮಾರನೆ ದಿನ ಅಣ್ಣ-ತಂಗಿಯರು ನಿನ್ನೆ ನಡೆದ ಘಟನೆಯ ಬಗ್ಗೆ ವಿಚಾರಿಸಿದಾಗ ಅದರ ಬಗ್ಗೆ ಆಕೆಗೆ ಏನೂ ನೆನಪಿರಲಿಲ್ಲ. ತಂದೆ ಈಶ್ವರಪ್ಪ ಕೂಡ ಮಗಳನ್ನು ಕರೆದು ಭಯ ಹೋಗಲಾಡಿಸಿ ಪ್ರೀತಿಯಿಂದ ಮಾತನಾಡಿಸಿದರು. "ಒಂದೊಂದು ಕ್ಷಣ ಕಳೆದಂತೆ, ಸಂಕೋಚ ಮತ್ತು ಭಯದ ಪಕಳೆಗಳು ಒಂದೊಂದು ಉದುರಿ ಬಿದ್ದು, ಅವಳು ತನ್ನ ಕಲ್ಪನೆಗಳನ್ನು ಒಂದೊಂದಾಗಿ ಉಸುರತೊಡಗಿದಳು." ಅದೆಲ್ಲವನ್ನು ಕೇಳಿದ ಈಶ್ವರಪ್ಪನವರು ಮಗಳ 'ಕಲ್ಪನಾಲೋಕ' ವನ್ನು ಪ್ರವೇಶಿಸಿ ಆಕೆಯ ಮನಸ್ಸನ್ನು ಅರ್ಥಮಾಡಿಕೊಂಡು ಬದಲಾದುದು ಉತ್ತಮ ಬೆಳವಣಿಗೆಯಾಗಿದೆ. ಇದು ಒಂದು ಪುಟ್ಟ ಘಟನೆಯಾದರು ಪ್ರಮುಖವಾದುದಾಗಿದೆ.

೪.೧.೩ ಧರ್ಮ

ನಮ್ಮ ಸಮಾಜದಲ್ಲಿ ಹಲವು ಜಾತಿಯ, ಹಲವು ಧರ್ಮದ ಜನರು ವಾಸಿಸುತ್ತಿದ್ದಾರೆ. ಆದರೆ ಜಾತಿ ಜಾತಿಗಳ ನಡುವೆ, ಧರ್ಮ ಧರ್ಮಗಳ ನಡುವೆ ಹೊಂದಾಣಿಕೆ ಇಲ್ಲವಾಗಿ ದ್ವೇಷ, ವೈಮನಸ್ಸುಗಳು ಹುಟ್ಟಿಕೊಂಡು ಸಮಾಜದ ಪ್ರಗತಿಗೆ ಮಾರಕವಾಗಿವೆ. ಅದನ್ನು ಹೋಗಲಾಡಿಸಿ ಜಾತಿ, ಧರ್ಮ ಭೇದವಿಲ್ಲದ, ಸೌಹಾರ್ದತೆ ನೆಲೆಯೂರಿದ ಸ್ವಸ್ಥ ಸಮಾಜವನ್ನು ಕಾಣುವುದು ಕಥೆಗಾರ್ತಿಯ ಆಶಯ. ಅಂತರಜಾತಿಯ ವಿವಾಹಗಳೇ ಮುರಿದು ಬೀಳುತ್ತಿರುವ ಇಂದಿನ ಸಂದರ್ಭದಲ್ಲಿ ಅಂತರಮತೀಯ ವಿವಾಹವಾಗಿ ಜೀವನ ನಡೆಸುತ್ತಿರುವ ಸಬಿಹಾ ಭೂಮಿಗೌಡ ಅವರು ಸಮಾಜಕ್ಕೆ ಮಾದರಿಯಾಗಿದ್ದು ಧಾರ್ಮಿಕ ಐಕ್ಯತೆ ಸಾಧಿಸುವ ಹಂಬಲ ಹೊಂದಿರುವ ಅವರು ತಮ್ಮ 'ಕಡಲ ತಡಿಯ ಮನೆ' ಕಥಾಸಂಕಲನದ ಮೊದಲ ಮಾತಿನಲ್ಲಿ ಹೆಚ್ಚುತ್ತಿರುವ ಕೋಮು ದಳ್ಳುರಿ ಕುರಿತು "ಇತ್ತೀಚೆಗೆ..... ಎಲ್ಲೇ ನೋಡಿದರೂ ಸಣ್ಣಪುಟ್ಟ ಕ್ಷುಲ್ಲಕ ಸಂಗತಿಗಳಿಗಾಗಿ ಮನುಷ್ಯರು ಮನುಷ್ಯತ್ವವನ್ನು ಮರೆತು ಜಾತಿ

ಧರ್ಮಗಳೆಂಬ ಚೌಕಟ್ಟಿನೊಳಗೆ ತಮ್ಮನ್ನು ತುರುಕಿಕೊಂಡು ಕ್ಷುದ್ರವಾಗಿ ಚಿಂತಿಸುವ, ವ್ಯವಹರಿಸುವ ರೀತಿ ಪರಿಪಾಠವಾಗುತ್ತಿದೆ. ಆಗೆಲ್ಲ ನಾನು ಕಂಡ ಉತ್ತರ ಕರ್ನಾಟಕದ ಜನ, ಅವರ ಬದುಕು, ಆಚಾರ-ವಿಚಾರ, ಅವರೊಳಗಿನ ಅನ್ಯೋನ್ಯತೆ ನನಗೆ ಪರುಷಮಣಿಯಂತೆ ಪ್ರಭಾಪೂರ್ಣವಾಗಿ ಹೊಳೆಯಿತು.... ಕೋಮು ಸೌಹಾರ್ದದ ಕ್ಷಣಗಳನ್ನು, ಮನಸ್ಸುಗಳನ್ನು ಇಂದು ಗುರುತಿಸಿ ನೆನಪಿಸಿಕೊಳ್ಳುವುದೂ ತುಂಬ ಅಗತ್ಯ ಎನಿಸಿದಾಗ, ಇಲ್ಲಿಯ ಕೆಲವು ಕಥೆಗಳು ಹುಟ್ಟಿಕೊಂಡವು" ಎಂದು ಹೇಳಿದ್ದಾರೆ. ಇದು ಅವರಿಗೆ ಸಮಾಜದ ಬಗ್ಗೆ, ಅಲ್ಲಿನ ಜೀವನದ ಬಗ್ಗೆ ಇರುವ ಕಳಕಳಿಯನ್ನು ಸೂಚಿಸುತ್ತದೆ. ಅಂಥ ವಾತಾವರಣ ನಿರ್ಮಿಸಲು ಓದುಗರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ.

ಸಬಿಹಾಭೂಮಿಗೌಡ ಅವರ ಮೊದಲ ಕಥಾಸಂಕಲನ **'ಕಡಲತಡಿಯ ಮನೆ'**ಯ ಮೊದಲ ಕಥೆ **'ಎತ್ತಣಿಂದೆತ್ತ'**. ಒಂದೇ ಕುಟುಂಬಕ್ಕೆ ಸೇರಿದ ಮೂರು ತಲೆಮಾರಿನ ಭಿನ್ನಭಾವನೆ, ಹೊಂದಿಕೊಳ್ಳಲಾಗದ ನಡವಳಿಕೆಯಿಂದ ಉಂಟಾದ ವೈಮನಸ್ಸು ಒಂದು ಕಡೆಯಾದರೆ ಬೇರೆ ಬೇರೆ ಧರ್ಮಕ್ಕೆ ಸೇರಿದ ಎರಡು ಜೀವಗಳು ರಕ್ತ ಸಂಬಂಧವನ್ನು ಮೀರಿದ ಸ್ನೇಹ ಸಂಬಂಧವನ್ನು ಉಳಿಸಿಕೊಳ್ಳುವ ಬಗೆಯನ್ನು ಈ ಕಥೆಯಲ್ಲಿ ಕಾಣಬಹುದು. ಕೌಟುಂಬಿಕ ಚಿತ್ರಣ ಮತ್ತು ಧಾರ್ಮಿಕ ಸೌಹಾರ್ದತೆಯನ್ನು ಕಟ್ಟಿಕೊಡುವಲ್ಲಿ ಮುಖ್ಯವಾಗಿದೆ.

ಇಂದು ಕುಟುಂಬಗಳು ಛಿದ್ರವಾಗುತ್ತಿವೆ. ಹೆತ್ತು ಹೊತ್ತು ಸಾಕಿದ ತಂದೆ-ತಾಯಿಯರನ್ನು ನೋಡಿಕೊಳ್ಳಲಾಗದ ಸ್ಥಿತಿಗೆ ಮಕ್ಕಳು ತಲುಪುತ್ತಿರುವುದು ಆಘಾತಕಾರಿ ಬೆಳವಣಿಗೆಯಾಗಿದೆ. ಅಷ್ಟೇ ಅಲ್ಲದೇ ಅವರನ್ನು ವೃದ್ಧಾಶ್ರಮಕ್ಕೆ ಸೇರಿಸುವ ಪ್ರಸ್ತಾಪ ಮಾಡುವುದು, ಸೇರಿಸುತ್ತಿರುವುದು ವಿಷಾದ ಎನಿಸುತ್ತದೆ. ಇದಕ್ಕೆ ಉದಾಹರಣೆಯಾಗಿ ಕಥೆಯಲ್ಲಿ ಹೀರವ್ವನ ಪಾತ್ರವನ್ನು ನೋಡಬಹುದು.

ಮಗಳ ಮನೆಯಲ್ಲಿ ಆಶ್ರಯ ಪಡೆದಿದ್ದ ಹೀರವ್ವನಿಗೆ ತನ್ನನ್ನು ವೃದ್ಧಾಶ್ರಮಕ್ಕೆ ಸೇರಿಸುತ್ತಾರೆ ಎಂಬ ವಿಚಾರ ನೋವನ್ನುಂಟುಮಾಡುತ್ತದೆ. ನಾಲ್ಕಾರು ಜನರಿಗೆ ಬೇಕಾಗುವಂತೆ ಬಾಳಿ ಬದುಕಿದ ಜೀವ ಈಗ ತನ್ನ ಘನತೆಗೆ ಕುಂದುಂಟಾದಾಗ ಬೇರೆ ದಾರಿ ಕಂಡುಕೊಳ್ಳುವ ಪ್ರಯತ್ನ ಮಾಡುತ್ತದೆ. ಮೊಮ್ಮಗಳಿಗೆ- "ಆ ಶಿವಮ್ಮಂಗ ಒಂದ್ ಪತ್ರ ಬರೀಬೇಕಲ್ಲ, ಅಕಿ ಹಂತ್ಯಾಕ ಹೋಗ್‌ಬೇಕಂತ್ ನನ್ ಇಚ್ಛಾ ಅದ ಅಂತ ಅದರಾಗ ಬರಿಯವ್ವಾ" ಎಂದು ಹೇಳುತ್ತಾಳೆ. ಆದರೆ ಸಕೀನಾಳಿಗೆ ಶಿವಮ್ಮನ ಮಡಿ, ಮೈಲಿಗೆ, ಆಚಾರ, ವಿಚಾರಗಳ ಅರಿವಿದ್ದುದರಿಂದ ಇದು ಸಾಧ್ಯವೇ ಎಂಬ ಅನುಮಾನ ಉಂಟಾಯಿತು. ಆದರೆ ಈರವ್ವನಿಗೆ ತನ್ನ ಸ್ನೇಹದ ಮೇಲೆ, ಸ್ನೇಹಿತೆಯ ಮೇಲೆ ಬಲವಾದ ನಂಬಿಕೆ ಇತ್ತು.

ಹೀರವ್ವನ ನಂಬಿಕೆಯಂತೆ ಶಿವಮ್ಮನ ಆಗಮನವಾಯಿತು. ಆದರೆ ಇದರಿಂದ ಈರವ್ವನ ಮಗಳು ನೂರ್‌ಜಹಾನಳಿಗೆ ಆಶ್ಚರ್ಯದ ಜೊತೆಗೆ ಎಂದೂ ಬಾರದ ಶಿವಮ್ಮನವರು ದಿಡೀರನೆ ಬಂದುದರಿಂದ ತನ್ನ ತಾಯಿ ಏನಾದರೂ ಹೇಳಿಕಳಿಸಿದ್ದಳೇ ಎಂಬ ಸಂಶಯ ಉಂಟಾಯಿತು. ಆದರೆ ಶಿವಮ್ಮ ಮಗಳ ಮನಿಗೆ ಬಂದಿದ್ದೆ, ಹಾಗೆ ಇಲ್ಲಿಗೆ ಬಂದೆ ಎಂದು ಹೇಳಿ ತನಗೇನೂ ತಿಳಿಯದವಳಂತೆ ವರ್ತಿಸಿದಳು. ನಂತರ "ನಿಮ್ ಅವ್ವನ್ನ ಸ್ವಲ್ಪ ದಿವ್ಸ ನನ್ ಜೋಡಿ ಕಳ್ಸಿಕೊಡವ್ವ, ಒಂದಷ್ಟು ದಿವ್ಸ ಅಲ್ಲಿ ಇದ್ ಬರ್ತಾಳ" ಎಂದು ಮೆಲ್ಲನೆ ತಾವು ಬಂದ ಉದ್ದೇಶವನ್ನು ಶಿವಮ್ಮ ಅರುಹಿದರು." ಅಷ್ಟು ಮಾತ್ರವಲ್ಲ "ನೀನೇನೂ ಚಿಂತಿ ಮಾಡ್ಬೇಡ ಆಕಿ ನಿನಗ ಹೆಂಗ ಅವ್ವನೋ ನಂಗ ಹಂಗ ಅಕ್ಕ ಅನ್ನೊದ್ನ ಮರಿಬೇಡ, ಕಳ್ಸಿಕೊಡು ಒಂದ್ ಮನ್ಸಿನಿಂದ" ಎಂದು ಹೇಳಿದಳು. ಶಿವಮ್ಮನ ಈ ಮಾತುಗಳಲ್ಲಿ ಆಕೆಯ ಔದಾರ್ಯವನ್ನು ಕಾಣಬಹುದಾಗಿದೆ. ಹೀರವ್ವನು ಮೊದಲೇ ಕಟ್ಟಿಟ್ಟುಕೊಂಡಿದ್ದ ಬಟ್ಟೆ ಗಂಟಿನೊಂದಿಗೆ ತಕರಾರಿಲ್ಲದೆ ಶಿವಮ್ಮನೊಂದಿಗೆ ಹೊರಟಳು.

ತನ್ನ ಸರ್ವಸ್ವವನ್ನು ಮಕ್ಕಳಿಗಾಗಿಯೇ ಧಾರೆಯೆರೆದ ಜೀವವನ್ನು ಆ ಮಕ್ಕಳೇ ಕಡೆಗಣಿಸಿ, ಆಕೆಯನ್ನು ವೃದ್ಧಾಶ್ರಮಕ್ಕೆ ಸೇರಿಸುವ ನಿರ್ಧಾರ ಮಾಡುವುದು ಸಂಬಂಧ ಮತ್ತು ಸಮಾಜದ ಅವನತಿಗೆ ಹಿಡಿದ ಕನ್ನಡಿಯಂತಿದೆ. ಆದರೆ ಭಿನ್ನ ಧರ್ಮೀಯರಾದ ಎರಡು ಜೀವಗಳು ತಮ್ಮ ಕಟ್ಟುಪಾಡುಗಳನ್ನು ಬದಿಗಿಟ್ಟು ಪರಸ್ಪರ ಆಸರೆಯಾಗಿ ನಂಬಿಕೆ ಉಳಿಸಿಕೊಂಡುದು ವಿಶಿಷ್ಟ ಸಂಗತಿಯಾಗಿದೆ, ಜೊತೆಗೆ ಧಾರ್ಮಿಕ ಸೌಹಾರ್ದತೆಗೆ ಪ್ರೀತಿ, ಸ್ನೇಹ ಮುಖ್ಯವೇ ಹೊರತು ಜಾತಿ, ಧರ್ಮವಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಕುಟುಂಬ, ಸಮಾಜ ಮತ್ತು ಧರ್ಮದ ಹಿನ್ನಲೆಯಲ್ಲಿ ಪ್ರಮುಖ ಕಥೆಯಾಗಿ **'ಸಂಬಂಧ'** ಕಥೆಯನ್ನು ಗಮನಿಸಬಹುದು.

ಸಾಹುಕಾರ ಬಸವಣ್ಣೆಪ್ಪನವರಿಗೆ ಚನ್ನವ್ವ ಮತ್ತು ರಾಜವ್ವ ಎಂಬ ಇಬ್ಬರು ಹೆಂಡತಿಯರು. ಚನ್ನವ್ವ ಹಿಂದುವಾದರೆ ರಾಜವ್ವ ಮುಸಲ್ಮಾನರವಳು. ಆದರೆ ಬಸವೆಣ್ಣೆಪ್ಪನವರು ಮಾತ್ರ ಇಬ್ಬರು ಹೆಂಡಿತಿಯರಿಗೆ ಮತ್ತು ಅವರ ಮಕ್ಕಳಿಗೆ ಯಾವ ಭೇದವನ್ನು ಮಾಡದೆ ಸಮಾನವಾಗಿ ಕಂಡಿದ್ದರು. ಚನ್ನವ್ವನಿಗೆ ಮಾತ್ರ ರಾಜವ್ವನನ್ನು ಕಂಡರೆ ದ್ವೇಷ. ಬಸವಣ್ಣೆಪ್ಪನವರು ತೀರಿಕೊಂಡಾಗಲು ಸಹ ಈ ದ್ವೇಷ ಮುಂದುವರಿಯಿತು. ಹಿರಿಯರ ಈ ದ್ವೇಷ ಅವರ ಮಕ್ಕಳ ಸ್ನೇಹ, ಸಂಬಂಧವನ್ನು ದೂರ ಮಾಡಲಾಗಲಿಲ್ಲ. ಆದರೆ ಸಮಾಜದ ಕಟ್ಟುಪಾಡುಗಳು ಇವರಿಬ್ಬರು ಸೇರಲು ತಡೆಯನ್ನುಂಟುಮಾಡಿದವು.

ಬಸವಣ್ಣೆಪ್ಪನವರು ಇಬ್ಬರನ್ನು ಸಮಾನವಾಗಿ ಕಂಡರೂ ಸಹ ಚನ್ನವ್ವ ಹೊಂದಾಣಿಕೆ ಮಾಡಿಕೊಳ್ಳಲಿಲ್ಲ. ಇದಕ್ಕೆ ಮುಖ್ಯ ಕಾರಣ ಜನರು ರಾಜವ್ವನ ಬಗ್ಗೆ ಹೇಳುತ್ತಿದ್ದ ಚಾಡಿ. ಆದರೆ ರಾಜವ್ವ ಬಸವಣ್ಣೆಪ್ಪನವರಿಂದ ಬಯಸಿದ್ದು ಹಣ-ಆಸ್ತಿಯನ್ನಲ್ಲ ಕೇವಲ ಪ್ರೀತಿ, ವಿಶ್ವಾಸವನ್ನು ಎಂಬುದು ಕಥೆಯ ಕೊನೆಯಲ್ಲಿ ತಿಳಿಯುತ್ತದೆ.

ಸಾಹುಕಾರರ ಸಾವಿನ ನಂತರ ಅವರು ಬರೆದಿದ್ದ ವಿಲ್ ಅನ್ನು ಓದುವ ಸಂದರ್ಭದಲ್ಲಿ ಚನ್ನವ್ವ ಅಸಮಾಧಾನಗೊಂಡು ರಾಜವ್ವನ ಮೇಲೆ ಹಾರಾಡುತ್ತಾಳೆ. ಆದರೆ ವಿಲ್‌ನಲ್ಲಿ ಎಲ್ಲಾ ಹಣ ಆಸ್ತಿಯನ್ನು ಚನ್ನವ್ವನಿಗೆ ಮತ್ತು ಆಕೆಯ ಮಕ್ಕಳಿಗೆ ಸೇರಬೇಕೆಂದು ಬರೆದಿರುತ್ತಾರೆ. ಇದನ್ನು ನಿರೀಕ್ಷಿಸದಿದ್ದ ಚನ್ನವ್ವನಿಗೆ ತನ್ನ ತಪ್ಪಿನ ಅರಿವಾಗಿ ರಾಜವ್ವನ ಪ್ರೀತಿ ತಿಳಿಯುತ್ತದೆ. ಆಗ ಚನ್ನವ್ವ "ಅವರ್ ಹೇಳಿದ್ಹಾಂಗ ರೊಕ್ಕಾ ಕೊಡೋರಿಗೆ ಕೊಡ್ರಿ. ಉಳಿದದ್ ರೊಕ್ಕನ ಸುಂದ್ರವ್ವನ ಹೆಸ್ರಾಗ ಹಚ್ಚ್‌ರಿ. ಮನಿ ಬಂಗಾರನ ಈರವ್ವ ಮತ್ತು ಸುಂದ್ರವ್ವರಿಗೆ ಸಮಪಾಲು ಮಾಡ್ರಿ" ಎಂದು ಹೇಳುತ್ತಾಳೆ. ಈರವ್ವನ ಈ ಪರಿವರ್ತನೆ ಜೀವನದಲ್ಲಿ ದ್ವೇಷ, ಅಸೂಯೆ ಶಾಶ್ವತವಲ್ಲ. ನೆಮ್ಮದಿಗೆ ಪ್ರೀತಿ, ಸೌಹಾರ್ದತೆ ಮುಖ್ಯ ಎಂಬುದನ್ನು ತಿಳಿಸುತ್ತದೆ.

ರಾಜವ್ವ ಮುಸಲ್ಮಾನವರಳಾದಳು ಹಿಂದುವಿನಂತೆ ಬದುಕಿದ್ದಳು. ಪ್ರೀತಿ ತೋರಿ ವಿಶ್ವಾಸ ಉಳಿಸಿಕೊಂಡವಳು. ಹಣ ಆಸ್ತಿಗೆ ಆಸೆ ಪಡದೆ, ಈರವ್ವ ಎಷ್ಟೇ ದ್ವೇಷ ಸಾಧಿಸಿದರು ಅದರ ಬಗ್ಗೆ ಗಮನ ಕೊಡದೆ ಜೀವನ ನಡೆಸುತ್ತಾಳೆ. ಇದು ಆಕೆಯ ಉನ್ನತ ವ್ಯಕ್ತಿತ್ವವನ್ನು ತಿಳಿಸುತ್ತದೆ.

ಜಾತಿ, ಧರ್ಮಗಳ ಕುರಿತು ವೈಮನಸ್ಸು ಮೂಡಿದರೂ ಅದು ಶಾಶ್ವತವಲ್ಲ. ಅದಕ್ಕಿಂತ ಮಿಗಿಲಾದ ಪ್ರೀತಿ ವಿಶ್ವಾಸ ದೊಡ್ಡದು ಎಂಬುದನ್ನು ಕಥೆಯಿಂದ ತಿಳಿಯಬಹುದಾಗಿದೆ.

'ರೂಪಾಂತರ' ಕಥೆಯು ಕಲಾತ್ಮಕತೆಯಿಂದ ಕೂಡಿರುವ ಉತ್ತಮ ಕಥೆಯಾಗಿದೆ. ಜಾತಿ ಧರ್ಮವನ್ನು ಮೀರಿದ ಜೀವನ ನಡೆಸುವ, ಕಾಲಕ್ಕೆ ತಕ್ಕಂತೆ ಎಲ್ಲವನ್ನು ಸ್ವೀಕರಿಸುವ, ತ್ಯಜಿಸುವ

ಅಂಶಗಳನ್ನು ಇಲ್ಲಿ ಕಾಣಬಹದು. ಎಲ್ಲಕ್ಕೂ ಇಲ್ಲಿ ನಂಬಿಕೆ ಮುಖ್ಯವಾಗುತ್ತದೆ. ಹಾಗೆಯೇ ಧರ್ಮವೂ ಸಹ ಜನರ ನಂಬಿಕೆ, ಆಚರಣೆಯ ಮೇಲೆ ನಿಂತಿದೆ ಎಂಬುದು ಸತ್ಯ.

ಪ್ರವಾಸಕ್ಕೆ ಹೋಗಿದ್ದ ಸಂದರ್ಭದಲ್ಲಿ ನಿರೂಪಕಿ ತನ್ನ ಬಾಲ್ಯದ ದಿನಗಳನ್ನು ನೆನೆದು ಅಲ್ಲೇ ಹತ್ತಿರದಲ್ಲಿದ್ದ ಅಜ್ಜಿಯ ಊರಿಗೆ ಹೋಗಬೇಕೆಂದು ಬಯಸಿದ್ದಳು. ಆಗ ನೆನಪಿಗೆ ಬಂದದ್ದು ತಮ್ಮೆಲ್ಲರ ಮೇಲೆ ವಿಶಿಷ್ಟ ಪ್ರಭಾವ ಬೀರಿದ ಅಜ್ಜಿಯ ಪೂಜಾ ಕ್ರಮ. "ಅಂದು ಮುಸುಲರ ಅಜ್ಜಿ ಹಿಂದೂ ದೇವತೆಗಳನ್ನು ಪೂಜಿಸುವ ಬಗೆಗೆ ಯಾರಿಗೂ ಪ್ರಶ್ನೆಯೇ ಎದ್ದಿರಲಿಲ್ಲ!" ಎಂಬುದನ್ನು ಸ್ಮರಿಸುತ್ತಾರೆ.

ತಂದೆಯ ವೈಚಾರಿಕತೆಯ ಪ್ರಭಾವದಡಿಯಲ್ಲಿ ಬೆಳೆದ ನಿರೂಪಕಿ ತಮ್ಮ ಜೀವನ ಕ್ರಮದ ಬಗ್ಗೆ ತಿಳಿಸುತ್ತಾರೆ. ಇದು ಎಲ್ಲರ ಜೀವನವನ್ನು ಅನೇಕ ಅಂಶಗಳಲ್ಲಿ ಪ್ರತಿನಿಧಿಸುತ್ತದೆ. 'ಮನೆಮಾತು ಕನ್ನಡ, ಸ್ಮೃತಿ ತುಂಬ ಹಿಂದೂ ಪುರಾಣ ಪ್ರಪಂಚ, ಬದುಕು ಬಹುಭಾಷಿಕರ ನಡುವೆ, ಪಡೆದದ್ದು ಕ್ಯಾಂಪಸ್ ಕಲ್ಚರ್! ಇದರಲ್ಲಿ ಯಾವುದೂ ಸ್ವಂತದ್ದಲ್ಲ; ಯಾವುದು ಪರರದ್ದಲ್ಲ! ದೀಪಾವಳಿ, ನವರಾತ್ರಿ, ಸಂಕ್ರಾಂತಿ, ಕ್ರಿಸ್‌ಮಸ್, ರಂಜಾನ್ ಎಲ್ಲವೂ ನಮ್ಮದೇ. ಕೈಬಿಟ್ಟರೆ ಯಾವುದು ನಮ್ಮದಲ್ಲ! ಇದರಿಂದ ಪಡೆದದ್ದು ಹೆಚ್ಚೋ, ಕಳೆದುಕೊಂಡದ್ದು ಹೆಚ್ಚೋ? ಈ ದಾರಿಯೇ ಯೌವನದ ತಿರುವಿನಲ್ಲಿ ಸಂಗಾತಿಯ ಆಯ್ಕೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿತ್ತು" ಎಂದು ಹೇಳುತ್ತಾ ಅಜ್ಜಿಯಿಂದ ಅವಳ ಮನೆಯಿಂದ ದೂರ ಉಳಿದ ಪ್ರಸಂಗವನ್ನು ಹೇಳುತ್ತಾರೆ. ಈಗ ಇಪ್ಪತ್ತೈದು ವರ್ಷಗಳ ನಂತರ ಅಜ್ಜಿಯ ಊರಿಗೆ ಹೋಗುವ ಆಸೆ. ಅಂತೆಯೇ ಅಲ್ಲಿಗೆ ಹೋದಾಗ ಆ ಅಜ್ಜಿಯ ಮನೆಯಲ್ಲಿ ಅನೇಕ ಬದಲಾವಣೆಗಳಾಗಿವೆ. ಮುಸಲ್ಮಾನ ಸಂಸ್ಕೃತಿಯ ಪ್ರಭಾವ ಅಲ್ಲಿ ಆಕ್ರಮಿಸಿದೆ. ಅಜ್ಜಿಯ ದೇವರ ಕೋಣೆ ಇಲ್ಲವಾಗಿದೆ. ಖುರಾನ್ ಪಠಣ ಆರಂಭಗೊಂಡಿದೆ. ಉರ್ದು ಭಾಷೆ ಮಾತನಾಡುವ ಮಕ್ಕಳು ಮನೆಯಲ್ಲಿದ್ದಾರೆ. ಅದಕ್ಕೆ ಅವರು ಹೊಂದಿಕೊಂಡಿದ್ದಾರೆ. ಇದೆಲ್ಲವೂ ನಿರೂಪಕಿಗೆ ಆಶ್ಚರ್ಯ ಉಂಟುಮಾಡಿತು. ಆ ಸಂದರ್ಭದಲ್ಲಿ ಅಜ್ಜಿ ಒಮ್ಮೆ ಸಮುದ್ರರಾಜನನ್ನು ಎದುರುಗೊಂಡ ಭಕ್ತಿ ಭಾವದಲ್ಲಿ ಸಮುದ್ರದ ನೀರನ್ನು ತೀರ್ಥದಂತೆ ಬಾಯಿಗೆ ಹಾಕಿಕೊಂಡು ಸಂಭ್ರಮಿಸಿದ ರೀತಿಯನ್ನು ಸ್ಮರಿಸಿಕೊಳ್ಳುತ್ತಾರೆ. ಆದರೆ ಇಂದು ಅದು ರೂಪಾಂತರಗೊಂಡಿದೆ. ಇದರಿಂದ ನಿರೂಪಕಿಗೆ ಸ್ವಲ್ಪ ಬೇಸರವಾದರೂ ಕಾಲಕ್ಕೆ ತಕ್ಕಂತೆ, ಅವರವರ ನಂಬಿಕೆಗೆ ತಕ್ಕಂತೆ ಅದು ಸಹಜವಾಗಿ ನಡೆಯುತ್ತಿದೆ ಎನಿಸಿತು.

ಮನೆಯಲ್ಲಿ ಜೋಕಾಲಿ ಕಟ್ಟುತ್ತಿದ್ದುದನ್ನು ಕುರಿತು ಕೇಳಿದಾಗ ಅದು ನಾಗರ ಪಂಚಮಿಗೆ ಎಂದು ತಿಳಿದು ಆಶ್ಚರ್ಯವಾಯಿತು.

ಹೊರಡುವ ಸಂದರ್ಭದಲ್ಲಿ ಚಿಕ್ಕಮ್ಮನನ್ನು ಹುಡುಕಿಕೊಂಡು ಹೋದಾಗ ಆಕೆ ತೊಳೆಯುತ್ತಿದ್ದ ಬೆಳ್ಳಿ ನಾಗಪ್ಪ, ಲಕ್ಷ್ಮಿ-ಸರಸ್ವತಿ ಫೋಟೋ ನೋಡಿ ಮೂಕಳಾಗಿ ಪ್ರಶ್ನಿಸಿದಾಗ "ನಿಮ್ಮ ಅಜ್ಜೀ ಕಾಲದ್ ನಾಗಪ್ಪ ಇದು. ಅವತ್ತು ನೀನ್ ನೋಡಿರ್ ಬೇಕಲ್ಲ. ಈಗ ಮಕ್ಳು ಇಂಥವೆಲ್ಲಾ ಒಪ್ಪಂಗಿಲ್ಲ. ನಮ್ ಮಂದಿ ಬಂದ್ರೂ ಇದ್ನ ಕಂಡ್ರ ಬೈತಾರ.... ಹಿಂದಿನಂಗ ಹುತ್ತಕ್ಕೆ ಹಾಲು ಎರೆಯೂಕ ಹೋಗಂಗಿಲ್ಲ. ಬೆಳ್ಳಿ ನಾಗಪ್ಪಂಗ ಮನ್ಯಾಗ ಹಾಲು ಹನಸ್‌ತಿನಿ. ಮುಂದ ಸೊಸೆರು ಮಾಡಾದು ಬಿಡೂದು ಅವ್ರಿಗೆ ಬಿಟ್ಟಿದ್ದು" ಎಂಬ ಉತ್ತರ ಬಂತು.

ಖುರಾನ್ ಪಠಣ ಆರಂಭಗೊಂಡಿರುವ ಮನೆಯಲ್ಲಿ ಬೆಳ್ಳಿನಾಗಪ್ಪನನ್ನು ಹಳೇ ಸೀರೆಯಲ್ಲಿ ಕಟ್ಟಿ ಇಟ್ಟಿದ್ದಾರೆ. ಹೊಸದನ್ನು ಒಪ್ಪಿದರೂ ಹಳೆಯದನ್ನು ಬಿಡಲು ಮನಸ್ಸು ಒಪ್ಪುವುದಿಲ್ಲ. ಜಾತಿ, ಧರ್ಮ ಮೀರಿದ ಆಚರಣೆಗಳು ನಂಬಿಕೆಗನುಗುಣವಾಗಿ ನಡೆಯುತ್ತಿರುತ್ತವೆ. ಅಂಥ ಬದುಕಿಗೆ ಮನುಷ್ಯ ಹೊಂದಾಣಿಕೆ ಮಾಡಿಕೊಳ್ಳಬೇಕಾದ ಅನಿವಾರ್ಯತೆಯನ್ನು ಕಥೆ ಧ್ವನಿಸುತ್ತದೆ.

ನೌಕರಿ ವರ್ಗಾವಣೆಯ ಕಾರಣದಿಂದ ತಮ್ಮ ಊರನ್ನು ಬಿಡಬೇಕಾಗಿ ಬಂದಾಗ ಆಗುವ ನೋವು, ಹೊಸ ಹೊಸ ಪರಿಸರಗಳಿಗೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಕುರಿತು ನಮ್ಮೂರು ಚಂದವೋ ಕಥೆಯಲ್ಲಿ ಹೇಳುತ್ತಾರೆ. ಕ್ಯಾಂಪಸ್ ಸಂಸ್ಕೃತಿಯ ಐಕ್ಯತೆಯ ಒಳಕ್ಕೆ ಜಾತಿ, ಧರ್ಮದ ಭೂತ ಹೊಕ್ಕಾಗ ಆಗುವ ಆಘಾತ ಭಯಾನಕ ಎಂಬುದನ್ನು ತಿಳಿಸುತ್ತಾರೆ.

'ಕೆಆರ್‌ಇಸಿಯನ್' ಸಂಸ್ಕೃತಿಯ ಪರಿಚಯವೇ ಒಂದು ಸುಂದರ ಲೋಕವನ್ನು ನಮ್ಮ ಮುಂದೆ ತರೆದಿಟ್ಟಂತೆ ತೋರುತ್ತದೆ. ಕೆಆರ್‌ಇಸಿಯನ್ ಸಂಸ್ಕೃತಿಯ ಆವರಣದಲ್ಲಿ.... "ಯಾರಿಗೂ ಜಾತಿ, ಉಪಜಾತಿ, ಧರ್ಮ, ಊರು, ರಾಜ್ಯ ಎಂಬ ಪ್ರತ್ಯೇಕ ಐಡೆಂಟಿಟಿ ಇರಲಿಲ್ಲ. ಇದ್ದುದು ಒಂದೆ ಐಡೆಂಟಿಟಿ ಅದುವೇ ಕೆಆರ್‌ಇಸಿಯನ್" ಎಂಬ ಸಾಲುಗಳು ಅಲ್ಲಿನ ಐಕ್ಯತಾ ಮನೋಭಾವವನ್ನು ತೋರುತ್ತವೆ. ಅಲ್ಲಿನ ಪರಂಪರೆ ಕೂಡ ವಿಶಿಷ್ಟವಾದುದು. "ಪಾಟೀಲರ ಮನೆಯ ಸುರುಳಿ ಹೋಳಿಗೆ, ರಂಗಣ್ಣ ಅವರ ಮನೆಯ ವಾಂಗೀಬಾತ್, ದೇವರಾಜ್ ಮನೆಯ ಪಾಯಸ, ಶೆಟ್ಟರ್ ಮನೆಯ ಕೋಳಿರೊಟ್ಟಿ-ಕೋಳಿಸಾರು........ ಹೀಗೆ ಒಂದೊಂದು ಮನೆಯೂ ಒಂದೊಂದು ಭಕ್ಷ್ಯಕ್ಕೆ ಪ್ರಸಿದ್ಧವಾಗಿತ್ತು ಎನ್ನುವಲ್ಲಿ ಅದರೆಲ್ಲದರ ಪರಿಚಯ ಮತ್ತು ಸ್ವಾದ ಎಲ್ಲರಿಗೂ ಇತ್ತು ಎಂಬುದು ತಿಳಿಯುತ್ತದೆ.

ಬಾಂಧವ್ಯ ಮತ್ತು ಭಾವೈಕ್ಯತೆಗಳ ಪುಟ್ಟ ಜಗತ್ತಿನಂತೆ ಆ ಕ್ಯಾಂಪಸ್ಸಿತ್ತು. ಆದರೆ ಅಲ್ಲಿಗೆ ಹೊರಗಿನಿಂದ ಬಂದ ಅತಿಥಿಯೊಬ್ಬರು ಜಾತಿ, ಧರ್ಮದ ಪ್ರಶ್ನೆ ಎತ್ತಿದಾಗ ಅದು ಆತಂಕ ಹುಟ್ಟಿಸಿತು. ಆದರೆ ಅವು ಹೊರಗಡೆಯಿಂದ ಬಂದದ್ದು, ಕ್ಯಾಂಪಸ್ ಒಳಗಿನದಲ್ಲ ಎಂಬುದು ಮುಖ್ಯ. ಆದರೂ ಅದು ಉಂಟುಮಾಡಿದ ಪರಿಣಾಮ ಆಘಾತಾಕಾರಿಯಾದುದು.

ಕ್ಯಾಂಪಸ್ ಸಂಸ್ಕೃತಿಯ ಕೊನೆಯ ಸಾಲುಗಳು ಮುಖ್ಯವಾಗಿ "ಈ ಕುಬ್ಜ, ಯೂನಿಫಾರಂ ತೊಟ್ಟ ಜನರಿಂದ ದೂರ ಬಹುಬಣ್ಣಗಳ ಬಹುಭಾಷಿಕರ 'ಪರಿಸರ'ವೊಂದು ನಮಗೆ ದೊರೆತೀತೆ? ಎಂಬ ಪ್ರಶ್ನೆ ಎದುರಾದ ಕ್ಷಣದಲ್ಲೇ ನನಗೆ 'ಕೆಆರ್‌ಇಸಿಯನ್ ಸಂಸ್ಕೃತಿಯ ಔಚಿತ್ಯ, ಮಹತ್ವ ಮತ್ತು ಆದರ್ಶ ತುಂಬ ಮೌಲಿಕವೆನಿಸಿದೆ." ಅಂಥ ಮೌಲ್ಯಯುತವಾದ ಸಂಸ್ಕೃತಿಯೊಂದರ ಬೆಳವಣಿಗೆ ಇಂದು ಅವಶ್ಯಕ ಎಂಬುದನ್ನು ಹೇಳುತ್ತವೆ.

ಒಟ್ಟಾರೆಯಾಗಿ ಸಬಿಹಾ ಭೂಮಿಗೌಡ ಅವರ ಎರಡು ಸಂಕಲನದಲ್ಲಿರುವ ಕಥೆಗಳು ಭಾಷೆ, ಶೈಲಿ, ನಿರೂಪಣೆ, ಕಥಾತಂತ್ರ ವಸ್ತು, ವಿಷಯ– ಈ ಎಲ್ಲಾ ಅಂಶಗಳಿಂದ ಮುಖ್ಯವಾಗಿದ್ದು ಅವಶ್ಯವಿದ್ದರೂ ಚರ್ಚೆಗೆ ಬಾರದೆ ಇದ್ದ ಅನೇಕ ವಿಷಯಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಚರ್ಚಿಸಿದ್ದಾರೆ. ಅವರ ಕಥೆಗಳು ಮುಖ್ಯವಾಗಿ ಸಮಾಜ, ಹೆಣ್ಣು, ಜೀವನ, ಕುಟುಂಬ, ಧರ್ಮ, ಸೂಕ್ಷ್ಮ ಸಂವೇದನೆಗಳನ್ನು ಬಿಂಬಿಸುವಂತಿದ್ದು, ಅವುಗಳ ಓದು ಎಷ್ಟು ಅವಶ್ಯ ಎಂಬುದು ಓದಿದಾಗ ತಿಳಿಯುತ್ತದೆ.

೪.೨ ಕವನಗಳು

ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆಯ ಆರಂಭಿಕ ಹಂತದ ಪುಟಗಳನ್ನು ತಿರುವಿ ಹಾಕಿದಾಗ ಕವಯಿತ್ರಿಯರು ಗಣನೀಯ ಪ್ರಮಾಣದಲ್ಲಿ ಕಾಣುವುದಿಲ್ಲ. ಕಾವ್ಯವು ಹೇಳುವ ವಿಚಾರವನ್ನು ಸಂಕ್ಷಿಪ್ತವಾಗಿ ಕಾವ್ಯ ಪರಿಕರಗಳಾದ ಪ್ರತಿಮೆ, ರೂಪಕ, ಸಂಕೇತಗಳ ಮೂಲಕ ಹೇಳಬೇಕೆಂದು ಬಯಸುತ್ತದೆ. ಕಥಾಸಾಹಿತ್ಯದ ಮೂಲಕ ಭಾವನೆಗಳೆಲ್ಲವನ್ನು ಬಿಚ್ಚಿಡಲು ಪ್ರಯತ್ನಿಸುವ ಮಹಿಳೆಯರು ಆರಂಭದಲ್ಲಿ ಕಾವ್ಯ ಪ್ರಕಾರದಿಂದ ದೂರವೇ ಉಳಿದರು. ಆದರೆ ಇತ್ತೀಚೆಗೆ ಇದು ಬದಲಾಗಿದ್ದು ಜ್ಞಾನ ಮತ್ತು ಶಿಕ್ಷಣದ ಸೌಲಭ್ಯದಿಂದಾಗಿ ಅಭಿವ್ಯಕ್ತಿಯ ಸ್ವಾತಂತ್ರ್ಯ ದೊರೆತಿದೆ. "ಕವಿತೆಯೆಂಬುದೊಂದು ನೀರಹನಿ, ಸದಾ ಚಲನಶೀಲವಾದದ್ದು. ವಿಮರ್ಶಕರು ಲಾಕ್ಷಣಿಕರು ಕವಿತೆಯ ನಿಯಮಗಳನ್ನು

ಗುರುತಿಸಿದ್ದಾರೆ. ಕವಿ ಇಂಥದನ್ನು ಕುರಿತು ಹಾಡಬಹುದೆಂದು, ಹಾಡಬಾರದೆಂದು ಹೇಳುತ್ತಾರೆ. ಕವಿತೆ ಆ ಯಾವ ನಿಯಮಗಳನ್ನೂ ಕೇಳದು. ಅದು ಉರುಳುರುಳಿ ಹೋಗುತ್ತಿದೆ ಗೋಲಾಕಾರವಾಗಿ ನೀರ ಹನಿಯೇ ಜಗತ್ತನ್ನು ಹಿಡಿವ ಕನ್ನಡಿಯಾಗಿ, ಕನ್ನಡಿಯೊಳಗಿನ ಹುಡುಗಿ ಸ್ವಯಂ ಪ್ರಭೆ ಹೇಳುತ್ತಾಳೆ.

ನನ್ನಿಷ್ಟಕ್ಕೆ ನನ್ನ ಬಿಟ್ಟರೆ

ನಾನು ನದಿಯಾಗಿ ಹರಿಯ ಬಲ್ಲೆ

ಯಾರು ಅದಕ್ಕೆ ಸೇತುವೆ ಕಟ್ಟಿ ದಾಟಬೇಕಾಗಿಲ್ಲ

ಬೆಳಗೆರೆ ಜಾನಕಮ್ಮನವರ ಕಾಲದಿಂದ ಇಂದಿನ ಸ್ವಯಂಪ್ರಭೆಯವರೆಗೂ ಮಹಿಳಾ ಕಾವ್ಯ ಹರಿದಿದೆ"[೪]

ಸಂವೇದನಾ ಶೀಲರಾದ ಹಾಗೂ ಸೃಜನಾತ್ಮಕತೆಯನ್ನು ಹೊಂದಿದ ಮಹಿಳೆಯರು ಕಾವ್ಯ ಸೃಷ್ಟಿಯಲ್ಲಿ ತೊಡಗಿ ಅರ್ಥಪೂರ್ಣವಾದ ಕಾವ್ಯವನ್ನು ಕೊಡುಗೆಯಾಗಿ ನೀಡುತ್ತಿದ್ದಾರೆ. ಈಗ ಹೊರಗಿನ ಸಿದ್ಧ ಮಾದರಿಗಳ ಪ್ರಭಾವದಿಂದ ಮುಕ್ತವಾಗಿ ನಿರ್ದೇಶಿಸಲ್ಪಡುವ ದಿನಗಳು ಆರಂಭವಾಗಿವೆ. ಆದುದರಿಂದಲೇ **"ಯಾವುದು ಹಲವು ವರ್ಷಗಳ ಹಿಂದಿನ ಮಹಿಳಾ ಬರಹಗಾರರಿಗೆ ಕಥಾಮಾಧ್ಯಮದ ಸಂದರ್ಭದಲ್ಲಿ ಸಾಧ್ಯವಾಗಲಿಲ್ಲವೋ ಅದು ಇಂದಿನ ಕವಯಿತ್ರಿಯರಿಗೆ ಸಾಧ್ಯವಾಗಿದೆ"**[೫] ಎಂಬುದಕ್ಕೆ ಅನೇಕ ಕಾವ್ಯಗಳು ನಿದರ್ಶನವಾಗಿ ದೊರೆಯುತ್ತವೆ. ಸಬಿಹಾ ಭೂಮಿಗೌಡ ಅವರ ಕವನಗಳು ಈ ನಿಟ್ಟಿನಲ್ಲಿ ಮುಖ್ಯವಾಗಿದ್ದು ಅಂತರಂಗದ ಆಳವನ್ನು ಬಗೆದು ಭಾವನೆ, ತುಡಿತಗಳನ್ನು ಹೊರಹಾಕಿದ್ದಾರೆ.

ಕಥಾ ಸಂಕಲನಗಳು, ವಿಮರ್ಶಾ ಕೃತಿಗಳು ಹಾಗೂ ಅನೇಕ ಲೇಖನಗಳನ್ನು ಬರೆದಿರುವ ಸಬಿಹಾ ಭೂಮಿಗೌಡ ಅವರ ಮೊದಲ ಕವನ ಸಂಕಲನ **'ಚಿತ್ತಾರ'**(೨೦೦೫). ತಮ್ಮ ಕವನ ರಚನೆಯ ಕುರಿತು ಅವರು ಈ ರೀತಿ ಹೇಳುತ್ತಾರೆ. "ಕೆಲ ವರ್ಷಗಳ ಪೂರ್ವದಲ್ಲಿ ಕವನಗಳನ್ನು ಬರೆಯಬಲ್ಲೆ ಎಂದು ನಾನೇ ಅಂದುಕೊಂಡಿರಲಿಲ್ಲ. ದಶಕಗಳಷ್ಟು ಹಿಂದೆ ಕವನವೊಂದು ಪ್ರಕಟವಾದದ್ದು ಕಂಡು, ಸಾಹಿತ್ಯ ತತ್ವವನ್ನು ಪಾಠ ಮಾಡುತ್ತಿದ್ದ ಗುರುಗಳಾದ ಪಂಡಿತಾರಾಧ್ಯರು ಬರವಣಿಗೆಯನ್ನು ಅಚ್ಚಿಸುವ ಮೊದಲು ಎಚ್ಚರ ವಹಿಸಬೇಕೆಂದು ಕಿವಿಮಾತು ಹೇಳಿದ್ದರು. ಇದರಿಂದ ಇನ್ಯಾವತ್ತೂ ಈ ಸಾಹಸಕ್ಕೆ ಹೋಗಬಾರದೆಂದೇ ತೀರ್ಮಾನಿಸಿದ್ದೆ" ಎಂದು ತಮ್ಮ ಅಳುಕನ್ನು ವ್ಯಕ್ತಪಡಿಸಿದ್ದಾರೆ. ಆದರೆ ನಂತರದಲ್ಲಿ ಕವನ ಸಂಕಲನವನ್ನೇ ಪ್ರಕಟಿಸಿದ್ದು ಅವರ ಪ್ರತಿಭೆಗೆ ಮತ್ತು ಪ್ರಯತ್ನಕ್ಕೆ ಸಾಕ್ಷಿಯಾಗಿದೆ.

'ಚಿತ್ತಾರ' ಮುವತ್ತೊಂದು ಕವನಗಳನ್ನೊಳಗೊಂಡ ಸಂಕಲನ. ಅವುಗಳನ್ನು ಓದುತ್ತಾ ಹೋದಾಗ ಜೀವನದ ಅನುಭವಗಳು ಅದರಲ್ಲೂ ಹೆಣ್ಣಿನ ಜೀವನದ ನೋವು, ನಲಿವು, ನೆನಪು, ಆಸೆ, ಹಂಬಲ, ನಿರೀಕ್ಷೆ, ಬದಲಾವಣೆ, ಸಂಬಂಧಿಕರ ಒಡನಾಟದ ಬಯಕೆ, ಅದನ್ನು ಕಳೆದುಕೊಂಡಾಗ ಆಗುವ ಸಂಕಟಗಳನ್ನು ಜೊತೆಗೆ ಆಕೆಗೆ ಅಡುಗೆ ಮನೆಯ ಜೊತೆಗಿರುವ ಒಡನಾಟ ಎಲ್ಲವೂ ಕಾಣುತ್ತದೆ. "ಹೆಂಗಸರ ಸರಾಸರಿ ವರ್ಷ ೫೦ ಎಂದಾದರೆ ಶೇ.೧೬.೬೬ ಆಕೆಯ ದಿನಗಳು. ಅಂದರೆ ೮.೩೩ ವರ್ಷಗಳು, 'ಅಂದರೆ ಸುಮಾರು ೭೩ ಸಾವಿರ ಗಂಟೆಗಳನ್ನು ಆಕೆ ಅಡಿಗೆ ಮನೆಯ ಒಳಗೆ ಕಳೆಯುತ್ತಾಳೆ. ಇದು ಬರೀ ಅಡಿಗೆ ಮನೆಯ ಕೆಲಸಗಳು.......ಇದರಲ್ಲಿ ತರಕಾರಿ ಹೆಚ್ಚುವುದು, ನೆಲ ಸಾರಿಸುವುದು, ಮಾರುಕಟ್ಟೆಗೆ ಹೋಗುವುದು, ಮಸಾಲೆ ತಯಾರಿಸುವುದು, ಅಕ್ಕಿ ಬೇಳೆ ಶುಭ್ರಗೊಳಿಸುವುದು ಇತ್ಯಾದಿ ಬಿಟ್ಟು......"[೬] ಈ ಸಮಯದಲ್ಲಿ ಅಡುಗೆ ಮನೆಯಲ್ಲಿ ಹೆಣ್ಣು ಒಂದು ರೀತಿಯ ಸಂಭ್ರಮದ ಜೊತೆಗೆ ಹಲವು ರೀತಿಯ ಹಿಂಸೆ ಅನುಭವಿಸುವುದನ್ನು ಕಾಣಬಹುದು.

ಸಬಿಹಾ ಅವರ ಹೆಚ್ಚು ಕವನಗಳು ಅಡುಗೆ ಮನೆ, ಅಲ್ಲಿನ ವಸ್ತುಗಳು, ಅಲ್ಲಿನ ಕೆಲಸಗಳ ನಡುವೆ ಹುಟ್ಟಿದವು. ಹೆಣ್ಣು ಎಂದರೆ ಅಡಿಗೆ ಮನೆ ಎಂಬುದು ಸಾಮಾಜಿಕ ನಿಯಮ. ಅಂತೆಯೇ ಆಕೆ ಕೂಡ ಅದರೊಡನೆ ಬೆರೆತು ತಲ್ಲೀನಳಾಗುತ್ತಾಳೆ. ಸಬಿಹಾ ಭೂಮಿಗೌಡ ಅವರು ಸಹ ಅಲ್ಲಿಂದಲೇ ತಮ್ಮ ಭಾವ ಪ್ರಪಂಚವನ್ನು ಹೊರಹಾಕಿದ್ದಾರೆ. ಅಲ್ಲಿ ಆಕೆಯ ನೋವು, ನಲಿವು, ಸಂಬಂಧಗಳ ಮೆಲುಕು, ತಾಯಿಯ ನೆನಪು, ಲಿಂಗತಾರತಾಮ್ಯದ ಬಗೆಗಿನ ಅಸಮಧಾನ, ಅಡಿಗೆ ಕಾಯಕದ ಬಗೆಗಿನ ಬೇಸರ ಇತ್ಯಾದಿ ಅನೇಕ ಅಂಶಗಳು ಅಲ್ಲಿ ಬಿಚ್ಚಿಕೊಳ್ಳುತ್ತವೆ. ಇಲ್ಲಿ ಮುಖ್ಯವಾಗಿ **'ಅಡುಗೆ', 'ಕೋಳಿಅಂಕ', 'ಸಂಬಂಧ', 'ಮನದ ಕಿಟಕಿ' , 'ಮೆಲುಕು', 'ಇಕ್ಕಟ್ಟು', 'ಗಡಾಯಿ ಕಲ್ಲು'** ಮುಂತಾದ ಕವನಗಳನ್ನು ಗಮನಿಸಬಹುದು.

'ಅಡುಗೆ' ಕವನದಲ್ಲಿ ಹೆಣ್ಣಿನ ಮನಸ್ಸಿನ ನೋವು, ಅಸಮಧಾನ, ಸಿಟ್ಟು, ಅಸಹಾಯಕತೆಗಳನ್ನೆಲ್ಲ ಒಟ್ಟಿಗೆ ವ್ಯಕ್ತಪಡಿಸಿದ್ದಾರೆ. ಕುಟುಂಬದಲ್ಲಿ ಹೆಣ್ಣಿಗೆ ಆರಂಭದಿಂದಲೇ 'ಅಡುಗೆ' ಕಾಯಕದ ಪಾಠ ನಡೆಯುತ್ತದೆ. ಆಕೆಯೂ ಉತ್ಸಾಹದಿಂದ ಪಾಕ ತಯಾರಿಯಲ್ಲಿ ಪ್ರಾವಿಣ್ಯತೆ ಪಡೆಯುವ ಮನಸ್ಸು ಮಾಡುತ್ತಾಳೆ. ಆದರೆ ಅದರ ಸಂಪೂರ್ಣ ಭಾರ ತನ್ನ ಮೇಲೆಯೇ ಬಿದ್ದಾಗ ಮಾತ್ರ ಸಹಜವಾಗಿ ರೋಷ ಉಕ್ಕುತ್ತದೆ. ಆದರೆ ಅದು ಪ್ರಕಟವಾದದ್ದು ಮಾತ್ರ **'ಕೈಗೆಟುಕಿದ ಪಾತ್ರೆ ಮೇಲೆ!'** ಎಂಬಲ್ಲಿ ವ್ಯಂಗ್ಯ ಕಾಣುತ್ತದೆ.

ವಿವಾಹದ ನಂತರ ಇದರಿಂದ ಮುಕ್ತಿ ಸಾಧ್ಯವೇ ಎಂಬ ಆಸೆ. ಆದರೆ

ಹೊಸ ಮನೆ, ಹೊಸ ಪಾಠ
ಕಲಿತಿದ್ದ ಒಪ್ಪಿಸುವ ರಭಸ
ಹಾದಿ ಮಧ್ಯೆಯೇ ಅಚ್ಚರಿ
ಅರೆ ಇಲ್ಲೂ ಸರದಿ ತನ್ನದೆ! –

ಎಂಬ ಆಶ್ಚರ್ಯ ಭಾವ. ಆದರೆ ಗಂಡಿನ ಪರಿಸ್ಥಿತಿ ಇಲ್ಲಿ ಭಿನ್ನ–

ಮದುವೆಗಿಂತ ಮುಂಚೆ
ಸಾಗಿತ್ತಲ್ಲ ಭೀಮ ಪಾಕ
ಆತನಿಗೋ ಅಜ್ಞಾತ ವಾಸಕ್ಕೆ
ಈತನಿಗೋ ಬ್ರಹ್ಮ ಚರ್ಯಕ್ಕೆ ಮುಕ್ತಾಯ!
. . . .
. . . .
ಓದು ಉದ್ಯೋಗದಲ್ಲಿ ಸರಿಸಾಟಿ
ಬೌದ್ಧಿಕ ಸಾಹಚರ್ಯಕೆ ನಿತ್ಯ ಸಂಗಾತಿ
ಪಾಕಶಾಲೆಗೆ ಮಾತ್ರ ಆತ ಅನ್ಯ!
ನಾನು ಒಬ್ಬಂಟಿ

ಇಲ್ಲಿ ಸಾಂಸಾರಿಕ ಜೀವನದ ತಾರತಮ್ಯವನ್ನು ಗಮನಿಸಿಬಹುದು. ಹೆಣ್ಣಿನ ಬೆನ್ನೇರಿ ಬಂದ ಹಳಸಲು ಉಣಿಸಲು ಆಕೆಯ ಜೀವನದ ಪ್ರತೀಕವಾಗಿದೆ. ಅಷ್ಟೇ ಅಲ್ಲದೆ ಆಕೆಯ ಅಡುಗೆಯ ಕೆಲಸ

ಜಾಬೂಕು ಬಿರುನೋಟ ಇಲ್ಲದೆಯೂ
ಕಾಲಕಾಲಕ್ಕೆ ಪಾಕ ಪಕ್ವಗೊಂಡಿದೆ

ನೊಗ ಕಟ್ಟಿದ ಎತ್ತುಗಳು ದಣಿ
ಮರೆತರೂ ಮನೆ ಸೇರುವಂತೆ
ಅಡುಗೆ ಸಾಗಿದೆ ಎಡವದೆ!

ಅಡುಗೆ ಎಂದರೆ ಹೆಣ್ಣಿನ ಕೆಲಸ ಎಂದೇ ತಲೆಪಟ್ಟಿ ಕಟ್ಟಿರುವ ಸಮಾಜ ಅದರಲ್ಲಿರುವ ನೋವು ಅಸಮಾಧಾನಗಳ ಗೊಡವೆಗೆ ಹೋಗುವುದಿಲ್ಲ. ಆದರೆ ಕವಯಿತ್ರಿ

ನಮ್ಮ ತಲೆಮಾರಿನ ಪಾತ

ನಮಗೇ ಕೊನೆಯಾಗಲಿ'–

ಎಂಬ ಆಶಯ ವ್ಯಕ್ತ ಪಡಿಸುತ್ತಾರೆ. ಆದರೆ ಪರಿಸ್ಥಿತಿಯೇ ಬೇರೆ ಅದಕ್ಕೆ ಕೊನೆಯೇ ಇಲ್ಲವೇನೋ ಎಂಬಂಥಹ ವಾತಾವರಣ ಇರುವುದನ್ನು ಕವಿತೆಯ ಕೊನೆಯ ಸಾಲುಗಳು ಕಟ್ಟಿಕೊಡುತ್ತವೆ.

ಇಂದು ತಾನಾಗಿ ಕಲಿಯಲು

ಓಡಿ ಬರುವ ಮಗಳ

ಕಂಡು ನಿರುತ್ತರಿಯಾಗಿದ್ದೇನೆ !

'ಇಕ್ಕಟ್ಟು' ಕವನವೂ ಸಹ ಅಡುಗೆ ಕಾಯಕ ಕುರಿತಂತೆ ಕೆಲವೊಮ್ಮೆ ಹೆಣ್ಣಿಗಾಗುವ ಅನುಭವವನ್ನು ಕಟ್ಟಿಕೊಡುತ್ತದೆ. ನಿತ್ಯ ಅದೇ ಕೆಲಸ ಮಾಡಿ ಬೇಸರಗೊಂಡ ಆಕೆ ರಜೆಯಿಲ್ಲದ ಅಡುಗೆ ಮನೆಗೆ ರಜೆ ಮಂಜೂರು ಮಾಡುವಿರಾ? ಎಂಬ ಪ್ರಶ್ನೆಯನ್ನು ಗಂಡನ ಮುಂದೆ ಇಡುತ್ತಾಳೆ. ಅದಕ್ಕೆ ಬಂದ ಉತ್ತರ

– **ಓಹೋ ಅದಕ್ಕೇನು**
ಯಾರಿಗುಂಟು ಯಾರಿಗಿಲ್ಲ
ಹೋಟೆಲೂಟದ ಮಜಾ
ಹಾಕು ರಜಾ ಇಂದಿನಿಂದ

ಇಲ್ಲಿ ನಾಲ್ಕು ದಿನ ಅಡಿಗೆ ಕಾಯಕವನ್ನು ತಾನೇ ನಿರ್ವಹಿಸುತ್ತೇನೆ ಎಂಬ ಮಾತು ಮಾತ್ರ ಆತನಿಂದ ಹೊರಡುವುದಿಲ್ಲ. ಸರಿ ಹೋಟೇಲಿಗೇ ಹೋಗೋಣವೆಂದರೆ ಖರ್ಚಿನ ಚಿಂತೆ. ಕೊನೆಗೆ ತಾನೇ ನಳಪಾಕ ಮಾಡುವೆನೆಂದು ಹೇಳಿದರೂ ಅದನ್ನು ಒಪ್ಪಿಕೊಳ್ಳುವ ಮನಸ್ಥಿತಿಯೂ ಆಕೆಗಿಲ್ಲ.

ಹೊರಕೋಣೆಯಲ್ಲಿ ಕೂತು
ಸೀದ ಪಲ್ಯ ಉಕ್ಕಿದ ಹಾಲಿನ
ವಾಸನೆಯಿಂದ ಮುಕ್ತಿ ಎಲ್ಲಿ
ಗಡಿಯಾರದ ಮುಳ್ಳು
ಆಗದ ಅಡಿಗೆಯ ಅಳುಕು
ಅವಳಂತೆ ಅವನ ತಟ್ಟದಲ್ಲ

ಇದು ರಜೆಯೊ ಸಜೆಯೊ

ಇಲ್ಲಿ ಹೆಣ್ಣು ಅಡುಗೆ ಕಾಯಕದಲ್ಲಿ ತನ್ನನ್ನು ತೊಡಗಿಸಿಕೊಂಡಂತೆ ಗಂಡು ತೊಡಗಿಸಿಕೊಳ್ಳದಿರುವುದನ್ನು ಕಾಣಬಹುದು. ಕೆಲಸದಲ್ಲಿ ಅಚ್ಚು ಕಟ್ಟುತನ ಇಲ್ಲ. ಸಮಯದ ಪಾಲನೆ ಇಲ್ಲ ಒಂದಕ್ಕೆ ಎರಡು ಕೆಲಸ ಮಾಡಬೇಕಾದ ಪರಿಸ್ಥಿತಿಯನ್ನು ತಿಳಿಸುತ್ತದೆ.

ಈ ಕವನದಲ್ಲಿ ಕೋರಿಕೆ ಮತ್ತು ಸಂದಿಗ್ಧತೆ ಇದೆ. ಈ ಸಂಧರ್ಭದಲ್ಲಿ ಇದಕ್ಕೆ ವಿರುದ್ಧವಾದ ಪ್ರತಿಭಾ ನಂದಕುಮಾರ್ ಅವರ ಪದ್ಯವೊಂದನ್ನು ನೋಡಬಹುದು.

"ಇವತ್ತು ನಾನು ಅಡಿಗೆ ಮಾಡುವುದಿಲ್ಲ

ಅಥವಾ ಮಗುವಿಗೆ ಮೊಲೆಯೂಡುವುದಿಲ್ಲ

ಹರಿದ ಅಂಗಿ ಹೊಲಿಯುವುದಿಲ್ಲ

ಇವತ್ತು ನಾನು ಸುಮ್ಮನೇ ಕೂರುತ್ತೇನೆ

ಕಿಟಕಿಯಿಂದ ಹೊರಗೆ ನೋಡುತ್ತಾ

ಅಂದರೆ ನಿನಗೇಕೆ ಇಷ್ಟು ಕೋಪ?"[2]

ಎಂಬ ಸಾಲುಗಳು ಕೆಲಸದ ಒತ್ತಡದಿಂದ ಆಕೆ ನುಡಿದವುಗಳಾಗಿದ್ದು ನೇರವಾಗಿ ತನ್ನ ನಿಲುವನ್ನು ವ್ಯಕ್ತಪಡಿಸಿರುವುದನ್ನು ಕಾಣಬಹುದು.

'ಕೋಳಿ ಅಂಕ' ಕವನದಲ್ಲಿ ಹಿಂಸೆ ಅಹಿಂಸೆಗಳ ನಡುವಣ ತರ್ಕವನ್ನು ಕಾಣಬಹುದು. ಕವನದ ಆರಂಭದಲ್ಲಿ ಚಿಕನ್ ಡ್ರೈ ಮಾಡುವಾಗ ಮಗಳು ಖುಷಿಯಿಂದ ತಟ್ಟೆ ಕುಟ್ಟುತ್ತಿದ್ದುದನ್ನು ಕಂಡು ತನ್ನ ಪಾಕ ಕುಶಲತೆಗೆ ಬೆನ್ನು ಚಪ್ಪರಿಸಿ ನಕ್ಕಿದ್ದರು. ಆದರೆ ಅಂಥ ಮಗಳು ಶಾಲೆಯಿಂದ ಬಂದು

..... ಬೊಗಸೆಯೊಳಗೆ ಮೊಗ

ಹುದುಗಿಸಿ ಕುಸಿದು ಕೂತಿದ್ದಳು

ಕೇಳಿದ್ದಕ್ಕೆಲ್ಲ ಮೂಕ ಉತ್ತರ

ಅರ್ಥವಾಗದೆ ಬಗೆ ಬಗೆದಾಗ

ಹೊರಬಿತ್ತು ಪ್ರಾಣಿದಯೆ ಪಾಠ

ಇಣುಕಿದ್ದ ಆ ಕಂಬನಿಯ ಒಳಗೆ

ನನ್ನ ಹಳೆಯ ದಿನಗಳ ನೆರಳು

ಹೀಗೆ ತಮ್ಮ ಹಳೆಯ ದಿನಗಳನ್ನು ನೆನೆಯುತ್ತ ತಾವು ಸಹ ಅಂಥವೇ ಪರಿಸ್ಥಿತಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದನ್ನು ಸ್ಮರಿಸುತ್ತಾ ಅದು ಮತ್ತೆ ಮಗಳಿಂದ ಮರುಹುಟ್ಟು ಪಡೆದಿರುವುದನ್ನು ಹೇಳುತ್ತಾರೆ. ಪ್ರೀತಿಯೊಳಗೂ ಹಿಂಸೆ ಇದೆ **'ನೋವಿನಿಂದಲೇ ನಗೆಮೊಗ್ಗು'** ಎಂಬ ಸತ್ಯವ ಹೇಳುತ್ತಾ.

. . . . ದಿಟವ ಅರಗಿಸುವ

ಶಕ್ತಿಯ ಆಕೆಗೆ ದಾಟಿಸುವ

ಪರಿ ಯಾವುದು ಹೇಳಿ

ಎಂದು ಇಕ್ಕಟ್ಟಿಗೆ ಸಿಲುಕುವುದರ ಜೊತೆಗೆ ಹಿಂಸೆಯ ನಂತರ ನಗು ಹುಟ್ಟುತ್ತದೆ ಎಂದು ಅದನ್ನು ಒಪ್ಪಿಕೊಂಡಿರುವುದನ್ನು ಕಾಣುತ್ತೇವೆ.

ಹೆಣ್ಣಿಗೂ ಅಡಿಗೆ ಮನೆಗೂ ಅವಿನಾಭಾವ ಸಂಬಂಧ ಹೆಣ್ಣು ಮಗಳಿಗೆ ತವರು ಮನೆಯಿಂದ ಅಡಿಗೆ ಮನೆಗೆ ಬೇಕಾದ ಸಾಮಾನುಗಳನ್ನು ಉಡುಗೊರೆಯಾಗಿ ನೀಡುವುದನ್ನು ಇಂದಿಗೂ ಕಾಣಬಹುದು. ಅಲ್ಲಿನ ಪ್ರತಿ ವಸ್ತುವಿನ ಮೇಲೂ ಆಕೆಗೆ ಪ್ರೀತಿಯ ಬೆಸುಗೆ, ನೆನಪಿನ ಚಿತ್ತಾರ. ಜೊತೆಗೆ ಅಲ್ಲಿಗೆ ಬೇಕಾದ ವಸ್ತುಗಳನ್ನು ಕೊಳ್ಳುವ, ಜೋಪಾನ ಮಾಡುವ ಇಚ್ಛೆ. **'ಸಂಬಂಧ'** ಕವನದಲ್ಲಿ ಉಪ್ಪಿನ ಕಾಯಿ ಜಾಡಿಯನ್ನು ಜೋಪಾನ ಮಾಡುವ ರೀತಿ ಆಶ್ಚರ್ಯ ತರುತ್ತದೆ. ಅದನ್ನು ಹಾಕುವಾಗ ತೆರೆಯುವಾಗಲೆಲ್ಲ ಎಚ್ಚರಿಕೆಯ ಗಂಟೆ. ಬಿದ್ದರೆ ಒಡೆಯುತ್ತದೆ ಎಂಬ ಭಯ. ಇದು ಸಂಬಂಧಗಳಿಗೂ ಅನ್ವಯವಾಗುತ್ತದೆ. ಎಚ್ಚರಿಕೆ ಇಲ್ಲದಿದ್ದರೆ ಒಡೆಯುವ ಸಾಧ್ಯತೆ ಹೆಚ್ಚು ಅಂಥ ಜಾಡಿ ಒಮ್ಮೆ

ಮೇಲಕೂ ಬರದೆ ಒಳಗೂ

ಹೋಗದೆ ನಡುವಲ್ಲಿ ನಿಂತಿತ್ತು

ಕಾಲವೇ ನಿಂತಂತೆ!

ಆದರೆ ಅಷ್ಟು ಸುಲಭವಾಗಿ ಅದನ್ನು ಬಿಟ್ಟು ಹೊಸ ಜಾಡಿಯ ಬಳಕೆ ಸಾಧ್ಯವೇ?

ಊರಿಂದ ಬಂದಿಳಿದ ಅತ್ತೆಗೆ
ಸಾರಿತ್ತು ಡಂಗುರ ಹಿಡಿಯಾದ
ಮನಸಿಗೆ ಮಿದುಗೈ ಭರವಸೆ
ಅನುಭವವ ಎರೆದು
ಜಾಡಿಗೆ ಕೈಹಾಕಿದ್ದೇ
ಪಟ್ಟಂತ ತೆರೆದಿತ್ತು ಬಾಯಿ!

ಎನ್ನುವಲ್ಲಿ ಸಂಬಂಧಗಳ ಉಳಿಯುವಿಕೆಗೆ ಪ್ರೀತಿ ಮತ್ತು ಅನುಭವ ಮುಖ್ಯ ಎಂಬುದು ತಿಳಿಯುತ್ತದೆ.

'ಮೆಲುಕು' ಕವನದಲ್ಲಿ ಉಪ್ಪಿನಕಾಯಿ ಮಾಡುವ ಕಾಯಕ ಮತ್ತು ಅದನ್ನು ಹಂಚುವುದರಿಂದ ಸಿಗುವ ಖುಷಿಯ ಚಿತ್ರಣವಿದೆ. ಜೊತೆಗೆ ಅವ್ವನ ಅಪೂರ್ವ ಚಿತ್ರಣವಿದೆ.

ಬೇಸಿಗೆಗೆ ಕಾದು ಮಾವಿನ ಮಿಡಿ ಉಪ್ಪಿನಕಾಯಿ ತಯಾರಿಸಲು ಹದಮಾಡಿ ಕುಳಿತಾಗ ಹೊರಗಿನಿಂದ ಬಂದಾತ ಸಿಡಿಮಿಡಿಗೊಂಡು ಎಲ್ಲ ಅಂಗಡಿಯಲ್ಲೇ ಸಿಕ್ಕರೂ ಯಾಕೆ ಈ ಯಾಗ ಎಂಬ ಪ್ರಶ್ನೆ. ಆದರೆ

ಆ ಮನೆ ಈ ಮನೆ ಉಪ್ಪಿನ ಕಾಯಿ

ವಿನಿಮಯ ತರುವ ಖುಷಿ

ಅತಿಥಿ ಅಭ್ಯಾಗತರಿಗೆ

ಕಟ್ಟಿ ಕಳಿಸುವಲ್ಲಿನ ಸಂಭ್ರಮ

ಅಂಗಡಿಯಿಂದ ತಂದ ಉಪ್ಪಿನಕಾಯಿಯಿಂದ ಸಾಧ್ಯವಿಲ್ಲ.

ಉಪ್ಪಿನಕಾಯಿ ಮಾಡಲು ಕುಳಿತ ಅವ್ವನ ಸಹಜ ಕ್ರಿಯೆಯನ್ನು ಮಹಾಯಜ್ಞವಾಗಿಸಿ ಅಪೂರ್ವ ಚಿತ್ರಣವನ್ನು ನೀಡಿದ್ದಾರೆ.

ಮಹಾಯಜ್ಞದ ಮುಂದೆ ಪ್ರಧಾನ

ಯಾಜಕಳಂತೆ ಕೂತ ಅವ್ವ

ಸುತ್ತಲೂ ಅಳಿಲು ಸೇವೆ ನೆಪದಲ್ಲಿ

ಮೈ ಮುಸುಡಿಗೆಲ್ಲ ಮಸಾಲೆ ರಂಗೇರಿಸಿ

ಕುಣಿದಾಡಿದ ಬಾಲ್ಯ.

ಇಂಥ ನೆನಪು, ಖುಷಿ, ಸಂಭ್ರಮ ಸಡಗರಗಳ ಅನುಭವಿಸಲು ಹೊಸಬಣ್ಣ ತುಂಬಲು ಈ ಕಾಯಕ ಈಗಲೂ ಬೇಕು.

ಹೀಗೆ ಸಬಿಹಾ ಅವರ ಅನೇಕ ಕವನಗಳು ಹೆಣ್ಣಿಗೂ ಅಡುಗೆ ಮನೆಗೂ ಇರುವ ಸಂಬಂಧ ಮತ್ತು ಅಲ್ಲಿ ಆಕೆಯ ಸ್ಥಾನವನ್ನು ತಿಳಿಸುತ್ತದೆ.

ಸಾಹಿತ್ಯ 'ಜೀವನ'ದ ಪ್ರತಿಬಿಂಬವೂ ಹೌದು ಗತಿಬಿಂಬವೂ ಹೌದು. ಜೀವನದ ಹಾದಿಯಲ್ಲಿ ಆದ ಅನುಭವ, ಕಂಡ ಸಂಗತಿ, ಕೇಳಿದ ವಿಷಯ ಎಲ್ಲವು ಸಾಹಿತ್ಯದ ವಸ್ತುವಾಗುತ್ತವೆ. ಜೀವನವನ್ನು ಹೊರತುಪಡಿಸಿ ಸಾಹಿತ್ಯ ರಚನೆ ಸಾಧ್ಯವಿಲ್ಲ ಅಂತೆಯೇ ಸಬಿಹಾ ಭೂಮಿಗೌಡ ಅವರು ಸಹ ತಮ್ಮ ಕವನಗಳಲ್ಲಿ ಜೀವನವನ್ನು ಚಿತ್ರಿಸುವ ಅದರಲ್ಲೂ ಹೆಣ್ಣಿನ ಜೀವನದ ನಲಿವು, ನೋವು, ನೆನಪು ಆತಂಕ ಶೋಷಣೆಗೆ ಒಳಗಾಗುವ ಪರಿ, ಅಂತರಂಗ, ತುಮುಲ ಎಲ್ಲವನ್ನೂ ಕಟ್ಟಿ ಕೊಡುವ ಪ್ರಯತ್ನ ಮಾಡಿದ್ದಾರೆ. ಈ ನಿಟ್ಟಿನಲ್ಲಿ 'ಹೀರಾ', 'ತೆರೆ', 'ಬೇಲಿ', 'ತ್ರಿಶಂಕು', 'ಅಂತರಂಗ', 'ಕರವಸ್ತ್ರ', 'ಆಟದ ಲೆಕ್ಕ' 'ಚೂಯಿಂಗ್‌ಗಮ್-೧', 'ಚೂಯಿಂಗ್‌ಗಮ್-೨' ಮುಂತಾದ ಕವನಗಳನ್ನು ನೋಡಬಹುದು.

'ಹೀರಾ' ಕವನದಲ್ಲಿ ಅಜ್ಜಿಯ ಜೀವನ ಮತ್ತು ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ. ಬಡ್ಡಿ ಬಂಗಾರಮ್ಮ ಅಜ್ಜಿ

.....ತೊಟ್ಟಾಗ ಸಾಕ್ಷತ್ ದೇವಿ

ಮಕ್ಕಳಿಗೂ ಆಕೆ

ಕಲ್ಪ ವೃಕ್ಷದ ಒಡತಿ

ಅಂಥ ಅಜ್ಜಿ

ಜಗಳಕ್ಕೆ ನಿಂತರೆ ಕೊಜ್ಜಿ

ತಂತ್ರ ಪ್ರತಿ ತಂತ್ರ ಅವಳ

ನೆರಿಗೆಯ ಬಾಳೆಕಾಯಿ ಗಂಟು

ಬೀದೀನೆ ನಡುಗಿಸಿದಾಕೆ

ಅವಳಿದಿರು ನನ್ನಮ್ಮ

ಬರೀ ಸಪ್ಪೆ

ಇಲ್ಲಿ ಅಜ್ಜಿಯ ಒಳ್ಳೆಯತನ ಮತ್ತು ಬಾಯಲ್ಲೇ ಬೀದಿಯನ್ನು ನಡುಗಿಸುವ ಸಾಮರ್ಥ್ಯ ಮುಖ್ಯವಾಗುತ್ತದೆ. ಹೀಗೆ ಇಳಿ ವಯಸ್ಸಿನಲ್ಲಿ ತನ್ನತನ ಉಳಿಸಿಕೊಂಡು ಬದುಕುತ್ತಿದ್ದ ಆಕೆಗೂ ಕಾಲನ ಕರೆ ಬಂದಿತ್ತು. ಆಕೆಗೆ ಮಾತ್ರವಲ್ಲ ಅಮ್ಮನಿಗೂ ಅಮ್ಮನ ನಂತರ ತನಗೂ ಅದೇ ಸ್ಥಿತಿ ಎಂಬುದನ್ನು ತಿಳಿಸುತ್ತಾರೆ.

'ಅನುಭವವು ಸವಿಯಲ್ಲ ಅನುಭವದ ನೆನಪು ಸವಿಯು' ಎಂಬ ಮಾತು ಎಷ್ಟು ಸತ್ಯ ಅನುಭವಗಳ ಮೆಟ್ಟಿಲೇರಿ ನಿಂತು ಹಿಂದಿರುಗಿ ನೋಡುವುದೇ ಸೊಗಸು. ಅದನ್ನು **'ತೆರೆ'** ಕವನದಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಅಜ್ಜನ ಮುಷ್ಟಿಯ ಬಿಚ್ಚುವ

ಒಳಗನು ಬಗೆವ ಆಸೆಗೆ

ಕೊನೆಯಿಲ್ಲ ಮೊದಲಿಲ್ಲ

ಇಲ್ಲಿನ ಅಜ್ಜನ ಮುಷ್ಟಿ ಅನುಭವದ ಆಳಕ್ಕೆ ಸಂಕೇತವಾಗುತ್ತದೆ. ಸಿಹಿನೆನಪುಗಳು ಅಮೃತದಂತೆ ಜೀವನಕ್ಕೆ ಜೀವ ಕೊಡುತ್ತವೆ ಹಂತ ಹಂತವಾಗಿ ಜೀವನದಲ್ಲಿ ಮೇಲೇರಿದ್ದನ್ನು ಜಯ ಸಾಧಿಸಿದ್ದನ್ನು ಹಿಂದಿರುಗಿ ನೋಡುವುದು ಮುಖ್ಯ. ಅಜ್ಜನ ಮುಷ್ಟಿಯನ್ನು ಬಿಡಿಸಿದಾಗ

ಅಜ್ಜನ ಮುಷ್ಟಿ ಆ ಊರು

ಒಳಗೆ ಏನಿದೆ ಏನಿಲ್ಲ

ಅಜ್ಜ ಕಟ್ಟಿಸಿದ ಗುಡಿ

ಅವನೇ ಇಲ್ಲದ ಮನೆ

ಕೊಟ್ಟ ಕಲ್ಲು ಸಕ್ಕರೆ ಸವಿ

ಕರಗಿಲ್ಲ ಇನ್ನೂ

....

ಹೀಗೆ ಬಾಲ್ಯದ ಆಟ ಆನಂದಗಳು ಒಂದೇ ಎರಡೇ ಪಟ್ಟಿ ಬೆಳೆಯುತ್ತದೆ. ಈ ನೆನಪುಗಳನ್ನು ತನಗೇ ಸೀಮಿತಗೊಳಿಸಿಕೊಳ್ಳದೆ ತನ್ನ ಮಗಳಿಗೂ ಹಂಚಬೇಕೆಂಬ ಬಯಕೆ. ಆದರೆ ಇಂದಿನ ಪರಿಸ್ಥಿತಿಯೇ ಬೇರೆಯಾಗಿದೆ.

ಕೈಚಾಚಿ ಕದವ ತೆರೆಯಲು ಹೋದೆ

ಜಂಗು ಹಿಡಿದಿದ್ದ ಬಾಗಿಲ ತೆರೆವ

ಸಾಧನ ಇಲ್ಲವಾಗಿತ್ತು.

ಅಜ್ಜನ ಮುಷ್ಟಿ ತೆರೆಯವ ಆಸೆ ಎಲ್ಲರಿಗೂ ಇದೆ. ಆದರೆ ಅದನ್ನು ಕೇಳುವ ಪರಿಸ್ಥಿತಿ ಮಕ್ಕಳಲ್ಲಿಲ್ಲ, ಹಾಗೆಯೇ ಅಂಥ ವಾತಾವರಣ ನಿರ್ಮಿಸುವ ವ್ಯವದಾನ ಹಿರಿಯರಲ್ಲೂ ಇಲ್ಲದಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ.

ಕನ್ನಡಿ ಮುಖದ ಪ್ರತಿಬಿಂಬ ಮಾತ್ರವಲ್ಲ ಜೀವನದ ಪ್ರತಿಬಿಂಬವನ್ನು ತೆರೆದು ತೋರುತ್ತದೆ. **'ಮುಮ್ತಾಜ್ ಮತ್ತು ಕನ್ನಡಿ'** ಕವನವು ಜೀವನದ ಏಳು ಬೀಳುಗಳನ್ನು ಅದರಲ್ಲೂ ಹೆಣ್ಣಿನ ಜೀವನದ ಚಿತ್ರಣವನ್ನು ಪ್ರತಿಬಿಂಬಿಸುವ ಮತ್ತು ಜೀವನದ ಬಗ್ಗೆ ಆಶಾವಾದ ಹೊಂದಿರುವ ಪ್ರಮುಖ ಕವನ.

ಜೀವನದ ಹಾದಿಯಲ್ಲಿ ನೋವು ನಲಿವಿನೊಂದಿಗೆ ಸಾಗಿ ದಣಿದ ಜೀವಕ್ಕೆ ನೆರಳಿನ ಆಶ್ರಯ ಬೇಕು ಅಂತಹ ಸಾಮಾನ್ಯ ಸೂರಿನ ಆಶ್ರಯಕ್ಕೆ ಹೋದಾಗ, ಅಲ್ಲಿ ಗೋಡೆಯ ಮೇಲೆ ಕಂಡ ಕನ್ನಡಿಯಲ್ಲಿ ಮುಖ ನೋಡಲು ಹೋದಾಗ ಕಂಡದ್ದು ಬದುಕಿನ ಹಾದಿ

ಬೆವರು ಗಟ್ಟಿದ ಹಣೆ

ಎತ್ತಿ ಕಟ್ಟಿದ ಗಂಟು

ಸೋತ ದೇಹ ಸತ್ತ ಕನಸು

ಹೆಬ್ಬಾಗಿಲತ್ತ ದಿಟ್ಟಿ

ವರ್ಷಕ್ಕೊಮ್ಮೆ ತವರು

ಆ ಮನೆ ಈ ಮನೆ

ನಡುವೆ ಜಗತ್ತು

ಇಲ್ಲಿ ಹೆಣ್ಣಿನ ಇಡೀ ಬದುಕಿನ ಚಿತ್ರಣವನ್ನು ಎತ್ತಿ ಹಿಡಿದಿರುವುದನ್ನು ಕಾಣಬಹುದು. 'ಆ ಮನೆ ಈ ಮನೆ'ಯ ನಡುವಿನ ಜಗತ್ತು ಹುಟ್ಟು ಸಾವುಗಳ ನಡುವಿನ ಜೀವನವನ್ನು, ಅಲ್ಲಿ ಪಡುವ ಪಾಡನ್ನು ತಿಳಿಸುತ್ತದೆ.

ಹೆಣ್ಣಿನ ಜೀವನದಲ್ಲಿ ಮದುವೆಯ ನಂತರ ತಾಯ್ತನ ಬಹು ಮುಖ್ಯ ಭಾಗ, ಮಗು ಪಡೆಯಲು ಗಂಡು ಹೆಣ್ಣು ಇಬ್ಬರ ಪಾತ್ರವೂ ಮುಖ್ಯ ಆದರೆ ಸಮಾಜದ ನೀತಿಯೇ ಬೇರೆ ಅಪವಾದವೆಲ್ಲಾ ಹೆಣ್ಣಿನ

ಮೇಲೆಯೇ. ತಾರತಮ್ಯದ ಪರಮಾವಧಿಯಾಗಿ ಗಂಡಿಗೆ ಮರು ಮದುವೆ. ಅದನ್ನು ಕೆಳಗಿನ ಸಾಲುಗಳಲ್ಲಿ ಹಿಡಿದಿಟ್ಟಿದ್ದಾರೆ.

ವ್ರತ ಉಪವಾಸ ನೇಮ

ನಿಷ್ಠೆ ಅಶ್ವತ್ಥ ನಾಗಾರಾಧನೆ

ಏನಿದ್ದರೇನು ಕುಡಿ ಇಲ್ಲದ ಬಳಿಕ

ಅಂಗಿಯ ಮೇಲೊಂದು ಅಂಗಿ

ವಂಶದುಳಿವಿಗೆ ತಾನೆ

ಈರ್ಷೆ ಹತಾಶೆ ನೋವು

. . . .

ಕರೆಯುವ ದನಕ್ಕೆ ನೆಂಟರು ಹೆಚ್ಚು. ಅಂತೆಯೇ ಹೆಣ್ಣಿಗೆ ಬಳಗ ಹೆಚ್ಚು ಅದನ್ನು ಅರಿಯುವಷ್ಟರಲ್ಲಿ ಇಳಿ ಬಿಸಿಲು ನಿಂತು ಕೊಳಲಿನ ಕರೆ ಕೇಳುತ್ತಿತ್ತು.

ಭೂತದಿಂದ ಮುಂದಕ್ಕೆ ಅಂದರೆ ವರ್ತಮಾನ ಮತ್ತು ಭವಿಷ್ಯದಲ್ಲಿ ನಕ್ಷತ್ರದೀಪ ಕಾಣುತ್ತಿತ್ತು. 'ಕತ್ತಲಲ್ಲಿ ಬೆಳಕಿತ್ತು' ಎಂಬ ಮಾತು ನೋವಲ್ಲು ನಲಿವು ಕಾಣುವ ಧನಾತ್ಮಕ ಮನಸ್ಸನ್ನು ಪ್ರತಿನಿಧಿಸುತ್ತದೆ.

ಸಮಾಜದ ಸಂಪ್ರದಾಯ, ಆಚರಣೆಗಳು ಹೆಣ್ಣಿಗೆ ಬಂಧನವಾಗಿವೆ. ಜೊತೆಗೆ ಅವಳ ಜೀವನದಲ್ಲಿ ಬರುವ ವ್ಯಕ್ತಿಗಳು ಸಹ ಪ್ರತಿ ಹಂತದಲ್ಲು ಆಕೆಯ ಕಾರ್ಯ ಇಚ್ಛೆಗಳಿಗೆ ಹೇಗೆ ಅಡ್ಡವಾಗುತ್ತಾರೆ ಎಂಬುದನ್ನು **'ಬೇಲಿ'** ಕವನದಲ್ಲಿ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ.

ಬಾಲ್ಯದಲ್ಲಿ 'ಅಪ್ಪ' ಆಕೆಯ ಜೀವನದ ಬೇಲಿಯಾಗುತ್ತಾನೆ. ಅಪ್ಪ, ಅಮ್ಮ ಹೇಳಿದ ಕೆಲಸ ಮುಗಿಸಿ ಹೊರ ಹೋಗಲು ಅಳುಕು. ಅನುಮತಿ ಪಡೆದು ಹೊರ ಹೋದರೂ ನಂತರ –

ಹೊತ್ತಿಗೆ ಬರಲಾಗದ ಮುಳ್ಳು

ಒಳಗೊಳಗೆ ಒತ್ತುತ್ತಿದ್ದು

ಮನೆ ಹತ್ತಿರಾದಂತೆ

ಅಳುಕುತ್ತಿತ್ತು.

ಇಂಥ ಸಂದರ್ಭದಲ್ಲಿ ಮುಂಬಾಗಿಲು ತೆರೆದಿದ್ದರೂ ಅಲ್ಲಿ ಹೋಗಲು ಭಯ ಅಪ್ಪನನ್ನು ಎದುರಿಸಲಾಗದ ಸ್ಥಿತಿ.

'ನಮ್ಮಂಥವರಿಗೆಂದೇ ಇತ್ತು ಹಿಂಬಾಗಿಲು' – ಎಂಬ ಸಾಲು ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಿ ತಮಗನಿಸಿದ್ದನ್ನು ನೇರವಾಗಿ ಮಾಡಲಾಗದ ಸ್ಥಿತಿ ಮತ್ತು ಭಯದ ವಾತಾವರಣ ಹೇಗೆ ನಿರ್ಮಿತವಾಗುತ್ತದೆ ಎಂಬುದನ್ನು ತಿಳಿಸುತ್ತದೆ. ತಡವಾಗಿ ಬಂದಾಗ ಮನೆಗೆ ಯಾರಾದರು ಅತಿಥಿಗಳು

ಬಂದು ಮನೆಯವರು ಅವರ ಜೊತೆ ಇದ್ದಾಗ ಬೈಗುಳದಿಂದ ತಪ್ಪಿಸಿಕೊಂಡೆವಲ್ಲ ಎಂಬ ಖುಷಿ. ಹೆಣ್ಣಿಗೆ ಇಂಥ ಪರಿಸ್ಥಿತಿ ಇಷ್ಟಕ್ಕೇ ನಿಲ್ಲುವುದಿಲ್ಲ

ಭೂತ ಬಿಡದೆ ಸಾಗಿತ್ತು

ನಾವು ಬೆಳೆದಂತೆ

ಅದೂ ಬೆಳದಿತ್ತು ನಮ್ಮಲ್ಲೆ

ಅಪ್ಪನ ಬದಲು ಗಂಡ ಮಕ್ಕಳು

ಇಂದು ತಂದೆಯ ಭಯವಿಲ್ಲ ಆದರೂ ಅದೇ ವ್ಯವಸ್ಥೆ, ಆದರೆ ಇಂದು **'ಮನೆಗೆ ಹಿಂಬಾಗಿಲು'** ಬೇಕೆನಿಸಿಲ್ಲ ಎಂಬುದು ಸಮಾಧಾನ ತಂದರೂ ಪರಿಸ್ಥಿತಿ ಹಾಗೇ ಇರುವ ವಿಷಾದವನ್ನು ತಿಳಿಸುತ್ತದೆ.

'ತ್ರಿಶಂಕು' ಕವನವು ಹೆಣ್ಣಿನ ಪರಿಸ್ಥಿತಿಯ ಬಗ್ಗೆ ಆಕೆಯ ಜೀವನದ ತೊಡಕಿನ ದಾರಿಯ ಬಗ್ಗೆ ತಿಳಿಸುತ್ತದೆ.

ಸತ್ಯವ್ರತ ಇತರರಿಗಿಂತ ಭಿನ್ನನಾಗಲು ಹೋಗಿ ಮರೆಯಾದ. ಅಂತೆಯೇ ಮಹಿಳೆಯರು ಕನಿಷ್ಠ ತಮ್ಮ ಹೆಸರನ್ನು ಉಳಿಸಿಕೊಳ್ಳಲಾಗದ ಪರಿಸ್ಥಿತಿ.

ನಿನ್ನಂತೆ ಮೂಲ ಹೆಸರನ್ನೇ ಅಳಿಸಿಕೊಂಡು

ಹೊಸ ಹೆಸರ ಹೊತ್ತವರು

ಹೆಸರೇ ಇಲ್ಲದೆ

ಬರೀ ಲೇ ಇಗೋಳೇ

ಕೇಳೇ ಗಳಾದವರು

ಮಾತ್ರ ಅರಿಯಬಲ್ಲರು

ಹೆಸರು ಕಳಕೊಂಡ ನೋವ

ಎಂಬ ಸಾಲುಗಳು ಪ್ರತಿ ಹೆಣ್ಣಿನ ನೋವನ್ನು ಪ್ರತಿನಿಧಿಸುತ್ತವೆ. ಆ ದೋಣಿ ಈ ದೋಣಿ ಮೂದೋಣಿಗಳಲ್ಲಿ ಕಾಲಿಟ್ಟು ಕಸರತ್ತಿನ ಜೀವನವನ್ನು ಸಂಭ್ರಮಿಸುತ್ತಿದ್ದಾಳೆ. ವಿದ್ಯೆ, ಉದ್ಯೋಗಗಳ ಹಾದಿಯಲ್ಲೂ ಪುರುಷ ಮಾದರಿಗಳ ಅನುಸರಣೆ ಮಾಡುವ ಪರಿಸ್ಥಿತಿ ಇಂದಿಗೂ ಇದೆ. ಶೋಷಣೆಗೆ ಹಲವು ಮುಖವಿದ್ದು ಕಂಡೂ ಕಾಣದಂತೆ ನಡೆಯುತ್ತಲೇ ಇದೆ.

ಮನಸಿನ ಭಾವವನ್ನು ಶಬ್ದಗಳಲ್ಲಿ ಹೊರ ಹಾಕುವುದು ಸುಲಭವಲ್ಲ ಹಾಕಿದರೂ ಅದರಲ್ಲಿ ಪರಿಪೂರ್ಣತೆಯಿರುವುದಿಲ್ಲ. ಅಂಥ ಮನಸ್ಸಿನ ತುಡಿತ ಮತ್ತು ತೊಳಲಾಟವನ್ನು **'ಅಂತರಂಗ'** ಕವಿತೆಯಲ್ಲಿ ತಿಳಿಸುವ ಪ್ರಯತ್ನ ಮಾಡಿದ್ದಾರೆ. **'ಹೇಳಿದರೆ ಹಾಳಾಗುವುದು ಅನುಭವದ ಸವಿಯು ಹೇಳದಿರೆ ತಾಳಲಾರನು**

ಕವಿಯು'ಎಂಬ ಉಕ್ತಿಯಂತೆ ಅದನ್ನು ಹೊರಹಾಕಲೇ ಬೇಕು. ಸಬಿಹಾ ಅವರ 'ಅಂತರಂಗ' ಕವನವು ಅನುಭವವನ್ನು ಹೊರ ಹಾಕಹೊರಟಾಗ ಆಗುವ ಮಾನಸಿಕ ಸ್ಥಿತಿಯನ್ನು ತಿಳಿಸುತ್ತದೆ.

ಹೇಳುವುದು ಅಂದು ಕೊಂಡಷ್ಟು

ಸುಲಭವೇ ಗೆಳತಿ? – ಎಂಬ ಪ್ರಶ್ನೆಯೊಂದಿಗೆ ಕವನ ಆರಂಭವಾಗುತ್ತದೆ.

ಹಾಗೊಮ್ಮೆ ಹೇಳಹೊರಟು

ಆದಿ ಮಧ್ಯ ಅಂತ್ಯಗಳ

ಅಂತರವೇ ತಿಳಿಯದೆ

ಏರಿಳಿತಗಳಲ್ಲಿ ನಿನ್ನ

ಮುಖದ ಗೆರೆ ಕಂಡಾಗ

ಹೇಳಲಾರದೆ ಉಳಿದು ಬರಡಾಗಿ

ಮಾತಿಗಿಂತ ಅಳುವೇ ಮುಂದಾಗಿ

. . . .

. . . .

ಹೇಗೆ ಪ್ರಯತ್ನಿಸಿದರೂ
ಅನುಭವಿಸಿದ್ದನ್ನು ಪೂರ್ಣ
ಹೇಳಲಾಗದೆ ಹೇಳುವ
ತುಡಿತದಿಂದ ಹೊರ ಬರಲಾಗದ
ತೊಳಲಾಟಕ್ಕೆ ಕೊನೆಯಿದೆಯೇನೆ!

ಎನ್ನುವಾಗ ಹೌದು ನಿಜವಾಗಿಯೂ ಕೊನೆಯಿಲ್ಲ ಎಂಬ ಉತ್ತರವೇ ಸೂಕ್ತ ಎನಿಸುತ್ತದೆ.

ಯಾರಾದರೂ ತಮ್ಮ ಅನುಭವ ಹೇಳುವಾಗ, ಅವು ರಂಗು ರಂಗಾಗಿ ಮೂಡಿ ಬರುವಾಗ ಹೇಳುವ ತವಕ, ಕೇಳುವ ಪುಳಕ ಮಾತ್ರವಲ್ಲ ತಾನೇಕೆ ಹೇಳುತ್ತಿಲ್ಲ ಎಂಬ ಮರುಕ ಹುಟ್ಟುವುದನ್ನೂ **'ರಸಿಕ'** ಕವನದಲ್ಲಿ ಚಿತ್ರಿಸಿದ್ದಾರೆ ಆದರೆ ಹಾಗೆ ಹೇಳಲು ಕಾಯಬೇಕು ಕಾದು ಮಾಗಬೇಕು ಆಗ ಮಾತ್ರ

ಕೊನೆಗೂ ಮೆಲ್ಲ ತೊಡಗಿದ ಪಲ್ಲವಿ

ಯಕ್ಷಗಾನದ ಅಬ್ಬರದ ನಡುವಿನ

ಭಾವಗೀತ – ಆಗಲು ಸಾಧ್ಯ.

ಆಟದ ಲೆಕ್ಕದಲ್ಲಿ ಮುಂದಾಗಿ ಬದುಕಿನ ಲೆಕ್ಕದಲ್ಲಿ ದೂರ ಉಳಿಯುವ ಬಗೆಯನ್ನು **'ಆಟದ ಲೆಕ್ಕ'** ಕವನದಲ್ಲಿ ತಿಳಿಸಿದ್ದಾರೆ. ಅಡುಗೆಗೆ ವಗ್ಗರಣೆ, ವಗ್ಗರಣೆಗೆ ಕರಿಬೇವು ಮುಖ್ಯ ಆದರೆ ಅಡಿಗೆಯ ನಂತರ ಕರಿಬೇವಿನ ಸ್ಥಾನ?! ಅಂತೆಯೇ ಜೀವನ ಕರಿಬೇವಿನಂತೆ ಸಾರ್ಥಕವಾದರೂ ಮೂಲೆಗುಂಪಾಗುವ ವ್ಯಂಗ್ಯವನ್ನು ಇಲ್ಲಿ ಕಾಣಬಹುದಾಗಿದೆ.

ಜೀವನದ ಕೊನೆಯ ಹಂತ ವೃದ್ಧಾಪ್ಯ. ಏರುಪೇರುಗಳನ್ನು ದಾಟಿ ಕೊನೆ ತಲುಪಿ ತಿರುಗಿ ನೋಡಿದಾಗ ಉಳಿಯುವುದು ಬರಿ ನೆನಪು ಮಾತ್ರ. ಆ ನೆನಪುಗಳೋ 'ಚೂಯಿಂಗ್ ಗಮ್' ನಂತೆ ಎಳೆದಷ್ಟೂ ಉದ್ದ, ಜಗಿದಷ್ಟ ಮುಗಿಯದು ಎಂದು **'ಚೂಯಿಂಗ್ ಗಮ್ ೧'** ಕವನದಲ್ಲಿ ತಿಳಿಸಿದ್ದಾರೆ.

ಕೇಳಲಿ ಬಿಡಲಿ

ಮೆಲುಕಾಟ ನಿಲ್ಲದು

ಎಳೆದಷ್ಟೂ ಉದ್ದ

. . . .

. . . .

ನೆನಪುಗಳೇ ಹೀಗೆ ಸಿಹಿ, ಒಗರು, ಹುಳಿ, ಕಹಿ ಒಂದೊಂದು ವಿಭಿನ್ನ ಆದರೆ ಅನಿವಾರ್ಯ, ಜಗಿತಗಾರನ ಕೈ ಕೋಲಾಗಿ ಇರಲೇಬೇಕು ಎಂದು ಹೇಳುತ್ತಾರೆ. ಮುಂದುವರಿದು **'ಚೂಯಿಂಗ್ ಗಮ್ ೨'** ಕವನದಲ್ಲಿ ನೆನಪುಗಳ ಸವಿಯ ಹಿತ ಮತ್ತು ಅವುಗಳ ಕಿರಿಕಿರಿಯ ಬಗ್ಗೆ ತಿಳಿಸುತ್ತಾರೆ. ಚೂಯಿಂಗ್ ಗಮ್‌ನಂತೆ ಅಗಿಯುವಾಗ ಸಿಹಿ, ಅಂಟಿದಾಗ **'ಇಸ್ಸೀ ಮೈಯೆಲ್ಲಾ ಮುಳ್ಳು'** ಎಂಬ ಭಾವ.

ಕಿತ್ತೆನೆಂದರೂ ಬಿಡದ

ನೆನಪುಗಳೇ ಹೀಗೆ

ಚೂಯಿಂಗ್ ಗಮ್ಮಿನಂತೆ!

ಹೀಗೆ ಸಬಿಹಾ ಅವರ ಕವನಗಳಲ್ಲಿ ಅವರು 'ಜೀವನ'ವನ್ನು ನೋಡಿರುವ ದಾರಿಯನ್ನು ಗುರುತಿಸುವಾಗ ನೆನಪುಗಳಿಗೆ, ಭಾವನೆಗಳಿಗೆ ಅವುಗಳಿಂದ ಸಿಗುವ ಆನಂದ, ನೋವು, ನಿರಾಸೆ, ಸಂಭ್ರಮಗಳಿಗೆ ಸ್ಪಂಧಿಸಿರುವ ಬಗೆ ಮುಖ್ಯವಾಗುತ್ತದೆ.

ಮನುಷ್ಯನ ಬದುಕಿನಲ್ಲಿ **'ಸಂಬಂಧ'** ಗಳು ಬಹು ಮುಖ್ಯ ಪಾತ್ರ ವಹಿಸುತ್ತವೆ. ಅದರ ಬಂಧ ಗಟ್ಟಿಯಾಗಿದ್ದಾಗ ಜೀವನದಲ್ಲಿ ನಗು, ನಲಿವು, ಭದ್ರತೆ. ಆದರೆ ಅದರಲ್ಲಿ ಒಡಕುಂಟಾದಾಗ ಮನಸ್ಸು ಸಹ ಒಡೆಯುತ್ತದೆ. ತಂದೆ-ತಾಯಿ, ಅಕ್ಕ-ತಂಗಿ, ಅಣ್ಣ-ತಮ್ಮ, ಅತ್ತೆ-ಮಾವ, ಗಂಡ-ಹೆಂಡತಿ, ಹೀಗೆ ಸಂಬಂಧಗಳು ನಾನಾ ಬಗೆಯಲ್ಲಿದ್ದು ಕುಟುಂಬದ ಮತ್ತು ಸಮಾಜದ ಸ್ವಾಸ್ಥ್ಯಕ್ಕೆ ಇವುಗಳ ನಡುವಿನ ನಂಟು ಸಿಹಿಯಾಗಿರಬೇಕು. ಅದು ಸಾಧ್ಯವಾಗಬೇಕಾದರೆ ತಾಳ್ಮೆ, ಸಹನೆ, ತ್ಯಾಗ, ಸಹಕಾರ, ಸೌಹಾರ್ದತೆ ಎಲ್ಲವೂ ಬೇಕಾಗುತ್ತದೆ. ಇವುಗಳು ಇದ್ದಾಗ ಅದರಿಂದ ಸಿಗುವ ಆನಂದ, ಪುಳಕವೇ ಬೇರೆ. ಜೊತೆಗೆ ಅವುಗಳ ಕೊರತೆಯಿಂದಾಗುವ ನೋವು, ತಲ್ಲಣ ಮಾನಸಿಕ ಯಾತನೆ ಕೂಡ ಅಪಾರ. ಅವುಗಳನ್ನು

ಕಟ್ಟಿಕೊಡುವ ಪ್ರಯತ್ನವನ್ನು ಸಬಿಹಾ ಅವರು ತಮ್ಮ ಕೆಲವು ಕವನಗಳಲ್ಲಿ ಮಾಡಿದ್ದಾರೆ. ಅವುಗಳನ್ನು ಇಲ್ಲಿ ಗಮನಿಸಬಹುದು.

ಸಂಬಂಧಗಳ ನೆನಪಿನಿಂದ ಸಿಗುವ ಆನಂದ ಮತ್ತು ಅವುಗಳು ದೂರಾಗುವಾಗ ಕಳಕೊಳ್ಳುವ ಭಯ, ಆತಂಕ ತಲ್ಲಣಗಳನ್ನು **'ಕಳಕೊಂಡದ್ದು'** ಕವನದಲ್ಲಿ ಕಾಣಬಹುದು.

ಅತ್ತೆ ಮನೆಯಲ್ಲಿ ಆತಿಥ್ಯ ಮುಗಿಸಿ ಅಜ್ಜಿ ಮನೆಗೆ ಹೊರಟಿದ್ದವಳಿಗೆ ಆ ಮನೆ ನಾಪತ್ತೆಯಾಗಿರುವುದನ್ನು ಕಂಡು ಆದ ಆಶ್ಚರ್ಯ, ಆತಂಕ, ಮತ್ತು ನೋವನ್ನು ಕಟ್ಟಿಕೊಟ್ಟಿದ್ದಾರೆ.

ಎಷ್ಟು ಹುಡುಕಿದರು ಸಿಗದಿದ್ದಾಗ ರೆಕ್ಕೆ ಕಟ್ಟಿ ಹಾರಿತೇ ಹೇಗೆ! ಎಂಬ ಆಶ್ಚರ್ಯ. ಜೊತೆಗೆ

ಅಜ್ಜಿ ಕಕ್ಕ ಅಪ್ಪ ಅಮ್ಮ
ಎಲ್ಲಿ ಎಲ್ಲಿ ಕಣ್ಣಲ್ಲಿ
ಗಂಗಾ ಯಮುನಾ

. . . .

. . . .

ಎಲ್ಲಿಗೂ ಓಡಾಡುವ ಧೈರ್ಯಗಳಿಸುವಷ್ಟರಲ್ಲಿ
ಅಜ್ಜಿ ಅವಳ ಕಳ್ಳುಬಳ್ಳಿ
ಎಲ್ಲವೂ ಛಿದ್ರ ವಿಚ್ಛಿದ್ರ

ಇಲ್ಲಿ ಅಜ್ಜಿಯ ಸೂರನ್ನು ಕಳಗೊಳ್ಳುವ ಭಯವನ್ನು ವ್ಯಕ್ತಪಡಿಸುತ್ತಾರೆ.

ತಂದೆಯ ಪ್ರೀತಿ, ಮಗುವಿನ ಮುಗ್ಧತೆ, ತಾಯಿಯ ಕರುಬುವಿಕೆ ಮತ್ತು ನೋವನ್ನು **'ತಂದೆತನ'** ಕವನದಲ್ಲಿ ಕಾಣಬಹುದು.

ತಂದೆಯ ಆಗಮನವನ್ನು ಎದುರು ನೋಡುವ ಮಗಳು ಆತ ಬರುವುದು ಸ್ವಲ್ಪ ತಡವಾದರೂ ತನಿಖೆ ಆರಂಭಿಸುತ್ತಾಳೆ.

ತಂದೆ ಕೂಡ ಹಾಗೆಯೇ
ಈಕೆ ಉಗುರಲ್ಲಿ ತೋರಿದ್ದ
ಆತ ಶಿರದಲ್ಲಿ ಹೊತ್ತು
ಸೇವೆಗೆ ಸದಾ ಸಿದ್ಧ !

ಮಾತು, ಮುದ್ದು, ಕೊಂಡಾಟ, ಗುಟ್ಟು, ಹರಟೆ ಎಲ್ಲವನ್ನೂ ತಂದೆಯ ಜೊತೆಯೇ ನಡೆಸುವ ಮಗಳಿಗೆ ತಾಯಿ ನೆನಪಾಗುವ ಸಂದರ್ಭವೆಂದರೆ–

ಅಪರೂಪಕ್ಕೊಮ್ಮೆ ಬಂದರೆ
ಗುಡುಗು ಮಿಂಚು
ನೆನಪಾಗುವುದೀಕೆಗೆ
ಅಮ್ಮನ ಸೆರಗು

ಇಷ್ಟೊಂದು ಪ್ರೀತಿಯಿಂದ ಇರುವ ಅಪ್ಪ-ಮಗಳನ್ನು ಕಂಡು ತಾಯಿಗೆ ಅಸೂಯೆ, ಅಸೂಯೆಯ ಜೊತೆಗೆ ತೀವ್ರವಾದ ನೋವಿದೆ. ಅದನ್ನು ಈ ಸಾಲುಗಳು ತಿಳಿಸುತ್ತವೆ.

ಕ್ಷಣ ಕ್ಷಣಕ್ಕೂ ಹೆಚ್ಚುವುದು
ನನ್ನಿಂದ ಕಸಿದುಕೊಂಡ
ತಾನೂ ಕಳಕೊಂಡ
ಅಪ್ಪನ ತಂದೆತನ

ವಾಸ್ತವ ಜೀವನದಲ್ಲೂ ಸಹ ಎಷ್ಟೋ ಹೆಣ್ಣುಮಕ್ಕಳು ಅನೇಕ ಕಾರಣಗಳಿಗೆ ತಂದೆಯನ್ನು ಕಳೆದುಕೊಳ್ಳುವ, ತಂದೆಯಿಂದ ದೂರಾಗುವ ಸನ್ನಿವೇಶ ಬರುತ್ತದೆ. ಆಗ ಆಗುವ 'ನೋವು' ದುಃಖ ಅಪಾರ.

ದಾಂಪತ್ಯ ಜೀವನದಲ್ಲಿ ಹೆಣ್ಣು ಅಪಾರ ನೋವನ್ನು ಅನುಭವಿಸುತ್ತಾಳೆ. ಸಮಾಜದ ಅನೇಕ ಸ್ತರಗಳಲ್ಲಿ ಆಕೆ ಶೋಷಣೆಗೆ ಒಳಗಾಗುತ್ತಾಳೆ ಅದನ್ನು **'ಜಿಗಣೆಗಳು'** ಕವನದಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಜಿಗಣೆಗಳು ಮೈಗಂಟಿ ರಕ್ತಹೀರುತ್ತವೆ. ಆದರೆ ಅದರ ಅರಿವೇ ಆಗದು. ಕಾಡುಮೇಡು ಏರುವಾಗ ಮಾರ್ಗದರ್ಶಿಯೊಬ್ಬ ಇದನ್ನು ಅರಿತು ಜಿಗಣೆಗಳಿಂದ ತಪ್ಪಿಸಿಕೊಳ್ಳಲು ತಂಬಾಕು ಕಟ್ಟಿಕೊಳ್ಳಿ ಎಂಬ ಸಲಹೆ ನೀಡಿದ್ದ. ಅಂಥ ಮಾರ್ಗದರ್ಶಿ ದಾಂಪತ್ಯದ ಮೇಡು ಏರುವಾಗ ಸಿಗದಿದ್ದುದರ ಬಗೆಗೆ ಬೇಸರ ವ್ಯಕ್ತಪಡಿಸುತ್ತಾರೆ.

ಕಿತ್ತ ಬೇರು ಹೊಸ ಮಣ್ಣಲಿ
ಚಿಗುರೊಡೆಯುವಷ್ಟರಲಿ
ಪರೋಪ ಜೀವಿಗಳ ಸಾಲುಸಾಲು
ಉಂಡುಟ್ಟ ನಡೆದಾಗ
ಬೈಗು ಮಾರುದ್ದ ಕಂಡಿತ್ತು

ಹೊಸ ಪರಿಸರಕ್ಕೆ ಆಕೆ ಹೊಂದಾಣಿಕೆ ಆಗುವಷ್ಟರಲ್ಲೇ ಆಕೆಯನ್ನು ಕಿತ್ತು ತಿನ್ನುವವರ ಸಾಲೇ ಇತ್ತು. ಇದರಿಂದ ಜೀವನದ ಕೊನೆ ಬಹಳ ದೂರ ಎನ್ನುವ ನೋವು ಉಂಟಾಗುವುದು ಸಹಜ. ಇಂಥ ಜಿಗಣೆಗಳಿಂದ ತಪ್ಪಿಸಿಕೊಳ್ಳಲು ಯಾರು ತಂಬಾಕು ಕೊಟ್ಟಿರಲಿಲ್ಲ.

ಜಿಗಣೆಗಳು
ಹೀರಿ ಉದುರಿದರೂ
ಒಸರುತ್ತಿತ್ತು ರಕ್ತ
ಕುಣಿದು ಕುಣಿ ಸರಿದರೂ
ಎಸೆಯುತ್ತಿದ್ದರು ಶರ ಸಂದೇಹ
ಇವರಿಗಿಂತ ಅವೇ ಮೇಲು

ಈ ಸಾಲುಗಳನ್ನು ಗಮನಿಸಿದಾಗ ದಾಂಪತ್ಯ ಜೀವನದಲ್ಲಿ ಹೆಣ್ಣು ಅನುಭವಿಸುವ ಹಿಂಸೆಯ ತೀವ್ರತೆಯ ಅರಿವಾಗುತ್ತದೆ.

'ಮುಟ್ಟಾಟ' ಕವನದಲ್ಲಿ ಸಂಬಂಧಗಳನ್ನು ಸಂಬಂಧಿಕರನ್ನೂ ಆಟಕ್ಕೆ ಹೋಲಿಸುತ್ತಾ ವಾಸ್ತವ ಚಿತ್ರಣವನ್ನು ಮುಂದಿಟ್ಟಿದ್ದಾರೆ.

ಸಂಬಂಧಗಳೂ ಮುಟ್ಟಾಟವಾಡುತ್ತವೆ
ಹೀಗೆ ಬಂದು ಇನ್ನೇನು ಸಿಕ್ಕೇ ಬಿಟ್ತು
ಅರಿತೇಬಿಟ್ಟೇ ಎನ್ನುವಷ್ಟರಲ್ಲಿ
ದೂರದೂರ ಸಾಗುವವು
ಅದೋ ದೂರ ಬಹುದೂರ
ಮುಟ್ಟಲಾರೆ ಹಿಡಿಯಲಾರೆ ಎಂದೇ
ತೋರಿದವು ಅರಿವಿಗೇ ಬರದಂತೆ
ಬಳಿಸಾರಿ ತೆಕ್ಕೆಗೆ ಬಿದ್ದಿರುತ್ತವೆ. ॥ಸಂಬಂಧಗಳೂ..............

ನೆಂಟರೂ ಸಹ ಸ್ವಾರ್ಥದಿಂದ ನಮ್ಮನ್ನು ಕಷ್ಟಕ್ಕೆ ದೂಡುವ ಪರಿಸ್ಥಿತಿಗಳು ಎದುರಾಗುವುದನ್ನು ತಿಳಿಸುತ್ತಾರೆ. ಬೆಸೆದ ಸಂಬಂಧ ಮುರಿಯುವ, ಮುರಿದ ಸಂಬಂಧ ಬೆಸೆಯುವ ಕೆಲಸವನ್ನು ಅನಿವಾರ್ಯವಾಗಿ ಮಾಡಬೇಕಾಗುತ್ತದೆ. ಅದಕ್ಕೇ ಹೇಳುತ್ತಾರೆ

ಕಳೆದ ಸಂಬಂಧದ ಒಂದೊಂದೇ।
ಎಳೆಯ ಹುಡುಕುತ್ತ ಹೆಣೆಯುತ್ತಾ
ಹಾಕಬೇಕು ತರತರದ ಕಸೂತಿ
ಕಲಾತ್ಮಕತೆ ಕೌದಿಗೂ ಪ್ರಾಪ್ತಿ ॥ಸಂಬಂಧಗಳೂ.............

ಮನುಷ್ಯ **'ಸಮಾಜ'** ಜೀವಿ. ಅಲ್ಲಿ ಬದುಕುವಾಗ ಆತ ತನ್ನದೇ ಮಾದರಿಗಳನ್ನು ಸಿದ್ಧಪಡಿಸಿಕೊಂಡಿದ್ದಾನೆ. ಅದು ಬೆಳೆಸಿಕೊಂಡು ಬಂದದ್ದು. ನಾವು ಹೇಗೆ ಸಮಾಜವನ್ನು ರಚಿಸುತ್ತೇವೆಯೋ ಹಾಗೆ ಸಮಾಜ. ಆಚಾರ, ವಿಚಾರ ಸಂಸ್ಕಾರಗಳು ಅದಕ್ಕೆ ಪೂರಕವಾಗಿರುತ್ತವೆ. ನಾವು ಮಾಡುವ ಕಾರ್ಯಗಳು ನಾಲ್ಕು ಜನರಿಗೆ ಉಪಯೋಗವಾಗುವಂತೆ ಇರಬೇಕು. ಬದಲಿಗೆ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದರೆ ಅದು ಕಂಟಕಪ್ರಾಯ. ಸಮಾಜದ ಉದ್ಧಾರಕ್ಕೆ ಸರ್ಕಾರದ ಸಹಕಾರ ಅಗತ್ಯ. ಮಹಿಳೆಯರ ಉದ್ಧಾರ ಹೆಸರಿಗೆ ಮಾತ್ರ. ಸರಕಾರ ತನ್ನ ಬೊಕ್ಕಸ ತುಂಬಿಸಿಕೊಳ್ಳಲು ಮಾತ್ರ ಯೋಚಿಸುತ್ತದೆ. ಇದಕ್ಕೆ ವಿರೋಧ ವ್ಯಕ್ತ ಪಡಿಸುವಾಗ ಹೇಳುವ ಸಾಂತ್ವನ ಕೂಡ ಹಾರಿಕೆಯದು. ಸಮಾಜದಲ್ಲಿ ನಡೆಯುತ್ತಿರುವವ ಮೋಸ, ವಂಚನೆ, ಒಳಿತು-ಕೆಡಕು, ಆಚಾರ-ವಿಚಾರಗಳು, ಸಾಹಿತ್ಯದಲ್ಲಿ ಚರ್ಚೆಯಾಗುತ್ತಲೇ ಇವೆ. ಅಂತೆಯೇ ಸಬಿಹಾಭೂಮಿಗೌಡ ಅವರು ಸಹ ಅದರ ಬಗ್ಗೆ ಚಿಂತನೆ ಮಾಡಿದ್ದಾರೆ.

ವ್ಯಕ್ತಿ ವಸ್ತುಗಳ ಬೆಳವಣಿಗೆಗೆ ಪರಿಸರ ಪೂರಕ. ಉತ್ತಮ ಪರಿಸರ ಅಂಥದೇ ಸಂಸ್ಕಾರಕ್ಕೆ ಕಾರಣವಾಗುತ್ತದೆ. ಎಂಬುದನ್ನು **'ಸಂಸ್ಕಾರ'** ಕವನದಲ್ಲಿ ತಿಳಿಸಿದ್ದಾರೆ.

ನೀರು, ಗೊಬ್ಬರ, ಉಪಚಾರ, ಇಲ್ಲದ ಮರದ ಹಣ್ಣಿಗೂ, ಕಸಿಕಟ್ಟಿ, ನೀರು, ಗೊಬ್ಬರ, ಉಪಚಾರ ಮಾಡಿ ಬೆಳೆಸಿದ ಮರದ ಹಣ್ಣಿನ ರುಚಿಗೂ ಇರುವ ವ್ಯತ್ಯಾಸ ತಿಳಿಸುತ್ತಾ ಅದಕ್ಕೆ ಕಾರಣವನ್ನು ಈ ರೀತಿ ಹೇಳುತ್ತಾರೆ.

ತವರಿನ ಬೇರು ಎರಡಕ್ಕೂ ಒಂದೇ
ಆದರೇನು ಕಟ್ಟಿದ ಬಂಧದ ಗುಣವೇ ಇದಕ್ಕೆ
ಅಂತರಂಗ
ತವರಬೇರಿನ ರುಚಿ ಬಣ್ಣ ಆಸೆ ಕನಸು ಗುರಿ
ಎಲ್ಲಾ ಭಿನ್ನ ವಿಭಿನ್ನ ಸಂಸ್ಕಾರ ಫಲ

ಸಮಾಜದಲ್ಲಿ ಮೋಸ, ವಂಚನೆ, ಹಿಂಸೆ ಭ್ರಷ್ಟಾಚಾರಗಳು ಹೇಗೆ ಪ್ರಗತಿ ವಿರೋಧಿಯಾಗಿ ಹರಡಿವೆ ಎಂಬುದನ್ನೂ **'ಅಫೀಮು'** ಕವನದಲ್ಲಿ ತಿಳಿಸಿದ್ದಾರೆ.

ಅಫೀಮು ಸೇವನೆಯಲ್ಲಿ ತೊಡಗಿದವನು ಅಮಲೇರಿ ತನ್ನ ಅವನತಿಗೆ ತಾನೆ ಕಾರಣನಾಗುತ್ತಾನೆ. ಅಂತೆಯೇ ಸಮಾಜದಲ್ಲೂ ವಿವಿಧ ಬಗೆಯ ಅಫೀಮುಗಳ ಅಮಲೇರಿರುವುದನ್ನು ಕಾಣಬಹುದು.

ಕೆಲವರಿಗೆ ಅಫೀಮಿನಲಿ
ಹಲವರಿಗೆ ರಕ್ತದೋಕುಳಿಯಲಿ
ಅಧಿಕಾರ ದಂಡದಲಿ ಧರ್ಮ
ಭಾಷೆ ಬಣ್ಣ ಬಾವುಟಗಳ
ನೆರಳಲಿ ಅಮಲೋ ಅಮಲು
. . . .
. . . .

ಇವು ರೂಪ, ಗಾತ್ರ ಸ್ವರೂಪದಲ್ಲಿ ಭಿನ್ನವಾದರೂ ಪರಿಣಾಮ ಮಾತ್ರ ಒಂದೇ ಆಗಿದೆ. ಅದರಲ್ಲಿ ಭಾಗಿಯಾದ ಎಲ್ಲರ ಮೇಲೂ ಪ್ರಭಾವ ಬೀರುತ್ತದೆ. ಇದನ್ನೆಲ್ಲಾ ನೋಡಿಯೂ ನೋಡದಂತಿರುವ ನಮಗೂ ಸಹ ಅದರ ಬಿಸಿ ತಾಕುತ್ತದೆ ಎಂಬುದನ್ನು ಕೊನೆಯ ಸಾಲುಗಳಲ್ಲಿ ತಿಳಿಸಿದ್ದಾರೆ.

ಹಾಡುಹಗಲೇ ಇಳಿಗಣ್ಣರಾದ
ನಮ್ಮನ್ನೆಲ್ಲ ಸುತ್ತಿ ಒತ್ತುತ್ತಿದೆ
ಬಗೆಬಗೆಯ ಅಫೀಮು

ಇದನ್ನು ತೊಡೆಯದ ಹೊರತು ಸಮಾಜದ ಪ್ರಗತಿ ಸಾಧ್ಯವಿಲ್ಲ ಎಂಬ ಎಚ್ಚರಿಕೆಯನ್ನು ಈ ಕವಿತೆಯ ಮೂಲಕ ನೀಡಿದ್ದಾರೆ.

'ಸರಕಾರ ಮತ್ತು ಸಬಲೀಕರಣ' ಕವನವು ವಾಸ್ತವಕ್ಕೆ ಹಿಡಿದ ಕನ್ನಡಿಯಂತಿದೆ. ಸ್ತ್ರೀವಾದಿಗಳು, ಮಹಿಳಾ ಪರ ಚಿಂತಕರು ಮಹಿಳೆಯರಿಗೆ ಸಮಾಜದಲ್ಲಿ ಉತ್ತಮ ಸ್ಥಾನಮಾನ ಸಿಗುವಂತಾಗಬೇಕೆಂದು

ಹೋರಾಡುತ್ತಿದ್ದಾರೆ. ಇದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳು ಕೇವಲ ತೋರಿಕೆಯವಾಗಿದ್ದು, ಬರಿ 'ಲಾಭ' ಮತ್ತು 'ಸ್ವಾರ್ಥ'ವೇ ತುಂಬಿರುವುದನ್ನು ಕಾಣಬಹುದಾಗಿದೆ.

ಸರ್ಕಾರ ಮಹಿಳೆಯರನ್ನು ಕುರಿತು ನೀವು ಸಬಲರಾಗಬೇಕು ಎಂದು ಹೇಳುತ್ತದೆ. ಆದರೆ ಒಂದಂಕಿ ಲಾಟರಿ ವಿರುದ್ಧವಾಗಿ ಉಂಟಾದ ಹರತಾಳಗಳ ಕಂಡು ಹೆದರಿ ಈ ರೀತಿ ಹೇಳಿತು

ಮಾಡಿರಿ ಹರತಾಳ ಎಷ್ಟು
ಒಂದಿಷ್ಟು ಫಲಕ ಹಿಡಿದು
ಊರೆಲ್ಲಾ ಸುತ್ತಿ ಬನ್ನಿ ಸಾಕು
ಮುಟ್ಟದಿರಿ ಸೊತ್ತುಗಳ ಎಳ್ಳಷ್ಟು
ಅಕ್ಕಿ ಉಪ್ಪು ಮೆಣಸು ತೆಂಗಿಗೆ
ಇಲ್ಲದಿದ್ದರೇನಂತೆ ಕಾಸು
ಲಾಟರಿಗೆ ಹಾಕಿದರೆ ಬಂದೀತು
ಲಕ್ಷ ಇಂದಲ್ಲ ನಾಳೆ ಅಲ್ಲ ನಾಳಿದ್ದು!

ಲಾಟರಿಯಿಂದ ಬರುವ ಲಾಭ ನಿಂತು ಹೋಗುವುದೆಂಬ ಭಯ

ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ
ನಾವೇನೂ ಉಂಡಿಲ್ಲ ನಿಮಗೇ ಎಲ್ಲಾ
ಉಚಿತ ಸ್ತ್ರೀ ಶಿಕ್ಷಣ ಸಮವಸ್ತ್ರ ಪಿಂಚಣಿಗೆ
ಲಾಭವೇನೂ ಇಲ್ಲ ನಮ್ಮದು ಲೋಕ ಕಲ್ಯಾಣ

ಕುಟುಂಬ, ಸಮಾಜದ ಉಳಿವಿಗಿಂತ ಸರ್ಕಾರಕ್ಕೆ ಬರುವ ಆದಾಯವೇ ಮುಖ್ಯವೆಂದು, ಅದನ್ನು ಸಮರ್ಥಿಸಿಕೊಳ್ಳುವ ಬಗೆಯನ್ನು ಇಲ್ಲಿ ಕಾಣುತ್ತೇವೆ. ಒಟ್ಟಿನಲ್ಲಿ ಸ್ತ್ರೀಯರು ದನಿಯೆತ್ತುವುದು ಬೇಕಾಗಿಲ್ಲ 'ಅಬಲತ್ವವೇ ನಿಮಗೆ ಶೋಭೆ!' ಎನ್ನುವಲ್ಲಿ ಇರುವ ಧಮನಕಾರಿ ನೀತಿಯನ್ನು ಕಾಣಬಹುದು. ಜೊತೆಗೆ ವ್ಯಂಗ್ಯ ಮತ್ತು ವಿಡಂಬನೆಯನ್ನು ಸಹ ಈ ಪದ್ಯದಲ್ಲಿ ಕಾಣಬಹುದು.

ಸಬಿಹಾ ಅವರು ತಮ್ಮ ಕವನಗಳಲ್ಲಿ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಜೊತೆಗೆ ಸಮಾಜ ಬದಲಾವಣೆಗೊಂಡು ಅಲ್ಲಿ ಸ್ವಾಸ್ಥ್ಯವನ್ನು ಕಾಣಬಯಸುವ ಹಂಬಲವೂ ಇದೆ.

ಒಟ್ಟಾರೆಯಾಗಿ ಸಬಿಹಾ ಭೂಮಿಗೌಡ ಅವರ ಕವನಗಳು ವಸ್ತು ವೈವಿಧ್ಯತೆಯಿಂದ ಕೂಡಿದ್ದು, ಸ್ವತಃ ಅನುಭವ ಮತ್ತು ಅರಿವಿನಿಂದ ಮೂಡಿ ಬಂದವುಗಳೆಂದು ತೋರುತ್ತದೆ. ವೈದೇಹಿ ಅವರು ಹೇಳುವಂತೆ ಅವು ಅವರ ಆತ್ಮಕಥೆಯ ಪುಟಗಳಂತೆಯೂ ಇವೆ. ಮಹಿಳಾ ಪರ ಚಿಂತನೆಯನ್ನು ಹೊಂದಿರುವ ಅವರು ತಮ್ಮ ಕವನಗಳನ್ನು ಮಹಿಳೆಯರಿಗೆ ನ್ಯಾಯ ಒದಗಿಸುವ ಪ್ರಯತ್ನ ಮಾಡಿದ್ದಾರೆ. ಸಾಮಾನ್ಯ ವಿಷಯವನ್ನು ಸೂಕ್ಷ್ಮವಾಗಿ ಗ್ರಹಿಸಿ ಶಬ್ದಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಆಪ್ತರ ಪತ್ರದಲ್ಲಿ "ಸಬಿಹಾ, ಕಾವ್ಯದ ದಾರಿ ಸಾಗಿದಷ್ಟೂ ದೂರ ಮತ್ತು ದೂರ ಎಂದು ಕೇಳಿದ್ದೇನೆ. ಅಂತಹ ದಾರಿಗೆ ಬಂದು ಸೇರಿದ್ದೀರಿ. ಅದು

ನಿಮ್ಮನ್ನು ಬಹುದೂರ ಒಯ್ಯಲಿ ಎಂದು ಹಾರೈಸುತ್ತೇನೆ. – ಎಂದು **ವೈದೇಹಿ** ಅವರು ಪತ್ರದಲ್ಲಿ ತಿಳಿಸಿದ್ದಾರೆ ಅವರು ಹೇಳಿದಂತೆ ಎತ್ತರಕ್ಕೆ ಬೆಳೆಯುವುದು ಎಲ್ಲರ ಹಾರೈಕೆ ಮತ್ತು ಬಯಕೆಯೂ ಆಗಿದೆ.

೪.೩ ಚಿಂತನ ಬರಹ

ಆಧುನಿಕ ಕನ್ನಡ ಸಾಹಿತ್ಯವು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಅನೇಕ ಹೊಸ ಪ್ರಕಾರಗಳನ್ನು ತನ್ನದಾಗಿಸಿಕೊಂಡಿದೆ. ಅವುಗಳಲ್ಲಿ ಪ್ರಬಂಧವು ಪ್ರಮುಖ ಪ್ರಕಾರವಾಗಿದೆ. ಕನ್ನಡ ನವೋದಯ ಲೇಖಕರು ಪ್ರಬಂಧ ಸಾಹಿತ್ಯಕ್ಕೆ ತೀವ್ರವಾಗಿ ಸ್ಪಂಧಿಸಿದರು. ಲಲಿತ ಪ್ರಬಂಧವು ಹೆಚ್ಚು ಜನಪ್ರಿಯತೆಯನ್ನು ಪಡೆಯಿತು. ಇದರ ಜೊತೆಗೆ ಚಿಂತನ ಪ್ರಬಂಧ ಪ್ರಕಾರವೊಂದು ಕನ್ನಡದಲ್ಲಿ ಪ್ರವೇಶ ಪಡೆದು ಯಶಸ್ಸನ್ನು ಪಡೆಯಿತು. ಇದು ಕನ್ನಡದಲ್ಲಿಯೇ ರೂಪುಗೊಂಡ ಹೊಸ ರೂಪವಾಗಿದೆ.

ಚಿಂತನ ಬರಹಗಳು ದಾರಿತಪ್ಪಿ ತೊಳಲುತ್ತಿರುವ ಮನಸ್ಸುಗಳಿಗೆ ದೀಪಗಳಿದ್ದಂತೆ. ಆಳವಾದ ಜ್ಞಾನ ಮತ್ತು ಅನುಭವದಿಂದ ಹೊರಹೊಮ್ಮುವ ಇವು ಬದುಕಿನ ದಿಕ್ಕನ್ನೇ ಬದಲಿಸಿ ಜೀವನವನ್ನು ಹಸನುಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಪ್ರಪಂಚದಾದ್ಯಂತ ಪ್ರಾಚೀನ ಕಾಲದಿಂದಲೂ ಹಿರಿಯರು, ಜ್ಞಾನಿಗಳು ತಮ್ಮ ಉನ್ನತ ಚಿಂತನೆಗಳನ್ನು ಹಂಚಿಕೊಂಡಿದ್ದಾರೆ. ಇವು ಜನರ ಮನಸ್ಸಿನ ಮೇಲೆ ಪರಣಾಮಕಾರಿಯಾದ ಪ್ರಭಾವವನ್ನು ಬೀರುತ್ತವೆ. ನೊಂದ, ಎಡವಿದ, ದಾರಿತಪ್ಪಿದ ಜೀವಗಳು ಚೇತರಿಸಿಕೊಂಡು ಮನೋವಿಕಾಸವನ್ನು ಹೊಂದುವುದರ ಜೊತೆಗೆ ಉತ್ತಮ ಮತ್ತು ಆದರ್ಶ ಬದುಕನ್ನು ತಮ್ಮದನ್ನಾಗಿಸಿಕೊಳ್ಳುವಲ್ಲಿ ಸಹಕಾರಿಯಾಗಿವೆ. ಅಷ್ಟು ಮಾತ್ರವಲ್ಲ ಸಮಾಜವನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಇವುಗಳ ಪಾತ್ರ ದೊಡ್ಡದು. ಪ್ರಸ್ತುತ ಡಾ॥ ಸಬಿಹಾ ಮತ್ತು ಡಾ॥ ಭೂಮಿಗೌಡ ಅವರ **'ನುಡಿಹೊನಲು'** ಪ್ರಬಂಧ ಸಂಕಲನ ವಿಶಿಷ್ಟ ಕೃತಿಯಾಗಿದ್ದು, ದಂಪತಿಗಳಿಬ್ಬರ ಚಿಂತನೆಗಳು ಅದರಲ್ಲಿವೆ. ಇವು ಮೂಲತಃ ಆಕಾಶವಾಣಿ ಭಾಷಣಗಳಾಗಿವೆ. ಈ ಸಂಕಲನದಲ್ಲಿ ಸಬಿಹಾ ಅವರ ಹದಿನೈದು ಪ್ರಬಂಧಗಳು, ಭೂಮಿಗೌಡ ಅವರ ಹದಿನಾರು ಪ್ರಬಂಧಗಳಿವೆ. ಅಧ್ಯಯನದ ದೃಷ್ಟಿಯಿಂದ ಸಬಿಹಾ ಅವರ ಚಿಂತನ ಪ್ರಬಂಧಗಳನ್ನು ಮಾತ್ರ ಇಲ್ಲಿ ಪರಿಗಣಿಸಲಾಗಿದೆ.

'ಸತ್ಯ' ದಲ್ಲಿ ನಿಜವಾದ ಸತ್ಯ ಯಾವುದು ಎಂಬ ಹುಡುಕಾಟವನ್ನು ***'ಸತ್ಯ ಹೇಳುವುದು ಎಷ್ಟು ಸುಲಭ'*** ಎಂಬ ಪ್ರಬಂಧದಲ್ಲಿ ನೋಡಬಹುದಾಗಿದೆ. ಸತ್ಯ ಹೇಳುವುದು ಸುಲಭ. ಆದರೆ ಅದು ನಿಜವಾಗಿಯೂ ಸತ್ಯವೇ ಎಂಬುದು ಯೋಚಿಸಬೇಕಾದ ಸಂಗತಿ. ಏಕೆಂದರೆ ಅದು ಯಾರ ಸತ್ಯ ಎಂಬ ಪ್ರಶ್ನೆ ಏಳುತ್ತದೆ. ಪ್ರತಿಯೊಬ್ಬರಿಗೂ ತಾವು ಕಂಡುಕೊಂಡದ್ದೇ ಸತ್ಯ ಎಂಬ ಭ್ರಮೆ ಇರುತ್ತದೆ. ಸತ್ಯವನ್ನು ನಿರ್ಧರಿಸುವ ನೆಲೆಗಳು ಬೇರೆಬೇರೆಯಾಗಿರುತ್ತವೆ.

ಸಬಿಹಾ ಅವರು ಹೇಳುವಂತೆ ಸತ್ಯಕ್ಕೆ ಹಲವು ಮುಖಗಳಿವೆ. ಅಸಮಾನತೆಯ ಬುನಾದಿಯಂತಿರುವ ಸಮಾಜ ವ್ಯವಸ್ಥೆಯಲ್ಲಿ ಒಡಕುಂಟುಮಾಡಿ ಒತ್ತಾಯ ಪೂರ್ವಕವಾಗಿ ಮೌಲ್ಯಗಳನ್ನು ರೂಪಿಸಿದೆ. ***"ಇಂತಹ ಸಮಾಜ ವ್ಯವಸ್ಥೆಯಲ್ಲಿ ಸತ್ಯ ಹೇಳುವುದು, ಸತ್ಯಮಾರ್ಗದಲ್ಲಿ ನಡೆಯುವುದು ಎಂದರೆ, ಈ ಸಮಾಜ ನಿರೀಕ್ಷಿಸುವ ಸತ್ಯ ಅಥವಾ ಅಪೇಕ್ಷಿಸುವ ಸತ್ಯವೇ ಹೊರತು ಆಯಾ ಗುಂಪಿನ ಅವರ ಬದುಕಿನ ಸತ್ಯವಲ್ಲ. ಇಂತಹ ಸನ್ನಿವೇಶಗಳಲ್ಲಿ ಅವರವರ ಸತ್ಯವನ್ನು ಹೇಳಲು ಸಾಧ್ಯವೇ.? ಹೇಳಬೇಕಾದಲ್ಲಿ ಇರುವ ಇಕ್ಕಟ್ಟುಗಳೆಷ್ಟು? ಎಂದು ಅರ್ಥ ಮಾಡಿಕೊಳ್ಳಬೇಕಿದೆ"*** ಎಂಬ ಮಾತುಗಳು ಚಿಂತಿಸಬೇಕಾದಂಥವು. ಹಾಗೆಯೇ ನಮ್ಮ ಸಂಪ್ರದಾಯದ ನಿಲುವುಗಳು ಮತ್ತು ಮನೋಭಾವಗಳು ಬದಲಾಗಬೇಕಾದ ಅನಿವಾರ್ಯತೆಯನ್ನು ಈ ಪ್ರಬಂಧದಲ್ಲಿ ಹೇಳಿರುವುದು ಗಮನಾರ್ಹವಾಗಿದೆ.

'ಅನಗತ್ಯ ಔದಾರ್ಯ' ಮತ್ತೊಂದು ಪ್ರಮುಖ ಪ್ರಬಂಧ. ಸತ್ಯ, ತ್ಯಾಗ, ದಾನ, ಔದಾರ್ಯ, ಇವು ಪರಂಪರಾಗತವಾಗಿ ನಾವು ನಂಬಿಕೊಂಡು ಬಂದಿರುವ ಶ್ರೇಷ್ಠ ಮೌಲ್ಯಗಳು. ಆದರೆ ಅವುಗಳನ್ನು ಪಾಲಿಸುವ ಸಂದರ್ಭದಲ್ಲಿ ವಿವೇಚನೆ ಇರಬೇಕು. ಇಲ್ಲದಿದ್ದಲ್ಲಿ ಅವೇ ನಮ್ಮ ಪಾಲಿಗೆ ಮುಳುವಾಗುತ್ತವೆ ಎಂಬ ಎಚ್ಚರಿಕೆಯನ್ನು ಈ ಪ್ರಬಂಧದಲ್ಲಿ ಕಾಣಬಹುದು. ಪುರಾಣ ಪಾತ್ರಗಳಾದ ಶಿಬಿ, ಕರ್ಣ, ಪುರು, ಗಾಂಧಾರಿ ಇವರ ನಿದರ್ಶನದ ಮೂಲಕ ಸ್ವಂತದ ಹಿತವನ್ನು ಕಡೆಗಣಿಸಿ ಮಾಡುವ ತ್ಯಾಗ ಔದಾರ್ಯಗಳು ಅಸಹಜವೆನಿಸುತ್ತವೆ ಮತ್ತು ಅವು ಬದುಕಿಗೆ ಆದರ್ಶವಾಗಲಾರವು ಎಂಬುದನ್ನು ಹೊಸ ಆಯಾಮದಲ್ಲಿ ಚಿಂತಿಸಿದ್ದಾರೆ.

ಸಬಿಹಾ ಅವರು ಸ್ತ್ರೀಪರ ಕಾಳಜಿಯ ಜೊತೆಗೆ ಸಾಮಾಜಿಕ ಕಳಕಳಿಯನ್ನು ಹೊಂದಿದ್ದಾರೆ. *'ಅಪಮಾನ'* ಲೇಖನದಲ್ಲಿ ಅಭಿಮಾನ, ಅಪಮಾನಗಳು ಎರಡು ವಿರುದ್ಧ ಧ್ರುವಗಳು. ಇವು ವ್ಯಕ್ತಿಯ ವ್ಯಕ್ತಿತ್ವವನ್ನು ಕಟ್ಟುವಲ್ಲಿ ಕೆಡಹುವಲ್ಲಿ ಪಾತ್ರ ವಹಿಸುತ್ತವೆ. ಅಭಿಮಾನ ತೋರಿದಾಗ ಹಿಗ್ಗದೆ ಅಪಮಾನ ಮಾಡಿದಾಗ ಕುಗ್ಗದೆ ಬದುಕಬೇಕು. ಕೆಲವು ಸ್ವಾರ್ಥಿಗಳು ಮತ್ತೊಬ್ಬರ ತೇಜೋವಧೆ ಮಾಡಲೆಂದೇ ಅಪಮಾನ ಮಾಡುತ್ತಾರೆ. ಅದನ್ನು ಮೆಟ್ಟಿನಿಲ್ಲಬೇಕು ಎಂದು ಲೇಖಕಿ ಹೇಳುತ್ತಾರೆ. ಅಷ್ಟೆ ಅಲ್ಲದೇ ಅಪಮಾನ ಮಾಡುವ ಸಂದರ್ಭದಲ್ಲಿ ಪುರುಷನ ಅಪಮಾನಕ್ಕೆ ಆತನ ತಾಯಿ, ಹೆಂಡತಿ ಇಲ್ಲವೇ ತಂಗಿಯನ್ನು ಎಳೆದು ತರಲಾಗುತ್ತದೆ. ***"ಮಹಿಳೆಯ ತೇಜೋವಧೆಗೂ ಮೊದಲು ಆಯ್ಕೆಯಾಗುವುದು ಆಕೆಯ ಶೀಲ ಮತ್ತು ನೈತಿಕತೆಗಳೇ! ಎಂದರೆ ಗರಗಸದ ಮುಳ್ಳಿನಂತೆ ಅತ್ತ ಕೊಯ್ದರೂ ಇತ್ತ ಕೊಯ್ದರೂ ಪೆಟ್ಟು ಹೆಣ್ಣಿಗೆ"*** ಎನ್ನುವಲ್ಲಿ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀ ಹೇಗೆ ಎಲ್ಲಾ ರೀತಿಯಲ್ಲಿಯೂ ಶೋಷಣೆಗೆ ಅವಮಾನಕ್ಕೆ ಒಳಗಾಗುತ್ತಾಳೆ ಎಂಬ ನೋವಿದೆ. ಜೊತೆಗೆ ಅದನ್ನು ಪ್ರತಿಭಟಿಸಿ ಎಚ್ಚೆತ್ತುಕೊಳ್ಳಬೇಕಾದ ಅನಿವಾರ್ಯತೆಯನ್ನು ತಿಳಿಸುತ್ತಾ ಇದು ಸ್ತ್ರೀಗೆ ಮಾತ್ರ ಸಂಬಂಧಿಸಿದ್ದಲ್ಲ ಸೂಕ್ಷ್ಮ ಸಂವೇದನೆಯನ್ನು ಹೊಂದಿರುವ ಸ್ತ್ರೀಪುರುಷರಿಬ್ಬರಿಗೂ ಸಂಬಂಧಪಟ್ಟದ್ದು, ಅದನ್ನು ಅರಿತು ಬದಲಾವಣೆಗೆ ಸಜ್ಜಾಗಬೇಕಿದೆ ಎಂಬುದು ಈ ಪ್ರಬಂಧದ ಆಶಯವಾಗಿದೆ.

ಸ್ತ್ರೀವಾದಿ ಚಿಂತನೆಯೇ ಕೇಂದ್ರವಾಗಿರುವ ಸಬಿಹಾ ಅವರ ಬರಹಗಳಲ್ಲಿ ಮಹಿಳೆಯ ಸಮಸ್ಯೆಗಳು ಮತ್ತು ಅವುಗಳ ಪರಿಹಾರ ಕುರಿತ ಆಲೋಚನೆಗಳು ಪ್ರಧಾನ ಧಾರೆಯಾಗಿ ಕೆಲಸ ಮಾಡಿವೆ. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀ ಎರಡನೇ ದರ್ಜೆಯವಳಾಗಿಯೇ ಉಳಿದಿದ್ದಳು. ಆರ್ಥಿಕ, ಸಾಮಾಜಿಕ, ಧಾರ್ಮಿಕ ಸ್ವಾತಂತ್ರ್ಯಗಳಿಂದ ವಂಚಿತಳಾಗಿದ್ದಳು. ಆದರೆ ಇಂದು ಅದು ಬದಲಾವಣೆಗೊಳ್ಳುತ್ತಿದೆ. ಅದರ ಒಂದು ಭಾಗದಂತೆ ಮಹಿಳಾ ಸಶಕ್ತೀರಣ ಯೋಜನೆಯನ್ನು ಕಾಣಬಹುದು ಸಾಧನೆ ಮಾಡಿಯೂ ಬೆಳಕಿಗೆ ಬಾರದ ಅನೇಕ ಸಾಧಕಿಯರು ಇದರಿಂದ ಬೆಳಕಿಗೆ ಬಂದು ಇತರರಿಗೆ ಸ್ಫೂರ್ತಿಯಾದರು. ಇದು ಮಹಿಳೆಯರು ಸಶಕ್ತರಾಗಲು ಪೂರಕವಾಯಿತು. ಸಂಪರ್ಕ ಜಾಲದ ಕೊರತೆಯೂ ನೀಗುತ್ತಾ ಬಂದು ಲೇಖಕಿಯರಿಗೂ ಮಹಿಳಾ ಸಂಘಟನೆಗಳ ಕಾರ್ಯಕರ್ತರಿಗೂ ನಡುವೆ ಸಂಪರ್ಕ ಉಂಟಾಗಿ ಸಮಸ್ಯೆಗಳ ಪರಿಹಾರಕ್ಕೆ ನೆರವಾಯಿತು. 'ವಿವಿಧ ಮಹಿಳಾ ಸಂಘಟನೆಗಳನ್ನು ಒಂದು ಜಾಲದ ಒಳಗೆ ತರಬೇಕೆಂಬುದು ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರು ಯಾರು? ಎಂಬಂತೆ ಇಲ್ಲಿವರೆಗೆ ಆಗಿತ್ತು. ಅಂತಹ ಒಂದು ಕಿರುಪ್ರಯತ್ನ ಈ ಅವಧಿಯಲ್ಲಿ ಆಗಿದೆ, ಆಗುತ್ತಿದೆ ಎಂಬುದು ದಾಖಲಾರ್ಹ ಸಂಗತಿಯಾಗಿದೆ" ಎಂಬ ಲೇಖಕಿಯವರ ಹೇಳಿಗೆ ಮಹಿಳಾ ಸಶಕ್ತೀಕರಣದ ಗೆಲುವಿನ ಹಾದಿಯನ್ನು ಸೂಚಿಸುತ್ತದೆ.

'ಮೆಚ್ಚುಗೆ' ಪ್ರಬಂಧವು ಮನೋವೈಜ್ಞಾನಿಕ ನೆಲೆಯಲ್ಲಿ ರೂಪುಗೊಂಡಿರುವ ಪ್ರಮುಖ ಲೇಖನ. ಮಕ್ಕಳಿಂದ ಹಿಡಿದು ಮುದುಕರವರೆಗೆ ಮೆಚ್ಚುಗೆಯನ್ನು ಬಯಸುತ್ತಾರೆ ಮತ್ತು ಅದರಿಂದ ಉತ್ಸಾಹಿತರಾಗುತ್ತಾರೆ. ಅಂತಹ ಮೆಚ್ಚುಗೆ ಅಥವಾ ಪ್ರಶಂಸೆಯನ್ನು ಸೂಕ್ತ ಸಮಯದಲ್ಲಿ ಮಾಡುವುದರಿಂದ ಆ ವ್ಯಕ್ತಿಯನ್ನು ಪುಷ್ಟೀಕರಿಸಿದಂತಾಗಿ ಆತ ಮತ್ತಷ್ಟು ಕಾರ್ಯಸಾಧನೆ ಮಾಡಲು ಸಾಧ್ಯವಾಗುತ್ತದೆ ಮತ್ತು ಆತ್ಮವಿಶ್ವಾಸವನ್ನು ಮೂಡಿಸುತ್ತದೆ. **'ಒಂದು ಪ್ರಶಂಸೆಯ ಮೇಲೆ ನಾನು ಎರಡು ತಿಂಗಳು ಜೀವಿಸಬಲ್ಲೆ'** ಎಂಬ ಮಾರ್ಕ್‌ಟ್ವೈನ್‌ನ ಹೇಳಿಕೆ ಇದನ್ನು ಸಮರ್ಥಿಸುತ್ತದೆ. ಹೀಗಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸುವುದರ ಮಹತ್ವವನ್ನು ತಿಳಿಸುತ್ತಾರೆ. ಜೊತೆಗೆ ಅದು ಹಿತಮಿತವಾಗಿದ್ದಾಗ ಮಾತ್ರ ವ್ಯಕ್ತಿಯ ಉದ್ಧಾರ ಸಾಧ್ಯ ಎಂಬ ಎಚ್ಚರಿಕೆ ನೀಡುವುದನ್ನು ಲೇಖಕಿ ಮರೆತಿಲ್ಲ. ಅತಿಯಾದರೆ ಅವಸಾನಕ್ಕೆ ಕಾರಣವಾಗುತ್ತದೆ. 'ಹೊಗಳುಭಟ್ಟರ ನಡುವೆ ಬೀಳುವುದಕ್ಕಿಂತ ಕಾಗೆಗಳ ನಡುವೆ ಬೀಳುವುದೇ ಲೇಸು. ಯಾಕೆಂದರೆ ಕಾಗೆಗಳು ಸತ್ತವರನ್ನು ಮಾತ್ರ ತಿನ್ನುತ್ತವೆ ; ಆದರೆ ಹೊಗಳುಭಟ್ಟರು ಜೀವಂತ ವ್ಯಕ್ತಿಗಳನ್ನೇ ನಾಶಮಾಡುತ್ತಾರೆ " ಎಂಬ ಪ್ರಚಲಿತ ಮಾತನ್ನು ಎಲ್ಲರೂ ಅರಿಯಬೇಕಾಗಿದೆ.

'ಜ್ಞಾನ' ಪ್ರಬಂಧವು ಸಾಂಪ್ರಾದಾಯಿಕ ಧೋರಣೆಗಳನ್ನು ಪ್ರತಿಭಟಿಸುತ್ತ ಬದಲಾವಣೆ ಬಯಸುವ ಪ್ರಮುಖ ದೃಷ್ಟಿಯನ್ನು ಹೊಂದಿದೆ. ಜ್ಞಾನ ಎನ್ನುವುದು ಸ್ತ್ರೀಪುರುಷರಿಬ್ಬರಿಗೂ ಸಮಾನವಾಗಿ ತೆರೆದುಕೊಂಡಿರುವ ಅವಕಾಶ. ಕೆಲವು ಸಾಮಾಜಿಕ ನಂಬಿಕೆ, ಮೌಢ್ಯಗಳು ಅದನ್ನು ಪುರುಷನಿಗೆ ಮಾತ್ರ ಮೀಸಲಾಗಿರಿಸಿತ್ತು. ಆದರೆ ಅದನ್ನು ಸ್ತ್ರೀಯರು ಇಂದು ಹುಸಿಮಾಡಿ ಇತಿಹಾಸ ನಿರ್ಮಿಸಿದ್ದಾರೆ. ಇದು ಪರಿಣಾಮಕಾರಿಯಾಗಿ ಜರುಗಬೇಕಾದರೆ ಶಿಕ್ಷಣ ವ್ಯವಸ್ಥೆ ಕೂಡ ಬದಲಾಗಬೇಕು. ಅನೇಕ ಮಹಿಳೆಯರು ವಿವಾಹವನ್ನು ತಮ್ಮ ಸಾಧನೆಗೆ ಅಡ್ಡಿ ಎಂದು ಭಾವಿಸಿದಂತಿದೆ ಅಥವಾ ವ್ಯವಸ್ಥೆ ಅವರ ಮೇಲೆ ಇಂಥ ಒತ್ತಡಗಳನ್ನು ಹೇರಿದೆ. 'ವಿವಾಹ ಮತ್ತು ಕುಟುಂಬ ಪುರುಷನ ಬದುಕಿನ ಭಾಗವೇ ಹೊರತು ಅದೇ ಹೇಗೆ ಆತನ ಬದುಕು ಅಲ್ಲವೋ ಅಂತಹ ಸ್ಥಿತ್ಯಂತರ ಮಹಿಳೆಯ ಬದುಕಿನಲ್ಲೂ ಜರುಗಬೇಕಾಗಿದೆ' ಎಂಬ ಸಾಲುಗಳು ಲಿಂಗಸಮಾನತೆಯ ಅವಶ್ಯಕತೆಯನ್ನು ಎತ್ತಿಹಿಡಿಯುತ್ತವೆ. ಮಹಿಳಾಪರವಾದ ಚಿಂತನೆಗಳಲ್ಲಿ ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಅಂಶಗಳನ್ನು ಪ್ರತಿಪಾದಿಸುವ ಮೂಲಕ ಹೊಸ ಸಂಸ್ಕೃತಿಯ ಉದಯದ ಕಡೆ ಹೆಜ್ಜೆ ಹಾಕಲು ಕರೆ ನೀಡುತ್ತಾರೆ.

'ಬದುಕಿನಲ್ಲಿ ವೈಜ್ಞಾನಿಕತೆ' ಎಂಬ ಪ್ರಬಂಧದಲ್ಲಿ ವಿಜ್ಞಾನದ ಶತ್ರುವಾದ ಅಂಧವಿಶ್ವಾಸವನ್ನು ತೊರೆದು ಯಾವುದೇ ವಿಷಯವನ್ನು ಪರೀಕ್ಷೆ, ವಿಶ್ಲೇಷಣೆಗಳಿಗೆ ಒಳಪಡಿಸಿ ಸರಿತಪ್ಪುಗಳ ನಿರ್ಧಾರಕ್ಕೆ ಬರಬೇಕೆಂಬ ನಿಲುವನ್ನು ವ್ಯಕ್ತಪಡಿಸುತ್ತಾರೆ. ಇದು ವಾಸ್ತವ ಸಮಾಜದ ಪರಿಸ್ಥಿತಿಯನ್ನು ಚಿತ್ರಿಸುವುದರ ಜೊತೆಗೆ ಪರಿವರ್ತನೆಯ ಹಂಬಲವು ಲೇಖಕಿಯಲ್ಲಿ ಇರುವುದನ್ನು ಕಾಣಬಹುದು.

ಪರಿಸರವಿಲ್ಲದೆ ಅಥವಾ ಪರಿಸರವನ್ನು ಎದುರುಹಾಕಿಕೊಂಡು ಮನುಷ್ಯ ಜೀವನ ನಡೆಸಲು ಸಾಧ್ಯವಿಲ್ಲ. ಹಾಗಾಗಿ ಅದನ್ನು ರಕ್ಷಿಸಲೇಬೇಕಾದ ಮತ್ತು ಪ್ರೀತಿಸಬೇಕಾದ ಅನಿವಾರ್ಯತೆಯನ್ನು **'ಪರಿಸರ ಪ್ರೀತಿ'** ಪ್ರಬಂಧದಲ್ಲಿ ತಿಳಿಸಿದ್ದಾರೆ. ಪರಿಸರಕ್ಕಾಗಿ ಹೋರಾಡಿದ ಹಲವು ಮಹನೀಯರ ಪರಿಚಯ ಮಾಡಿಕೊಡುವುದರ ಮೂಲಕ ಎಲ್ಲರಲ್ಲೂ ಪರಿಸರ ಪ್ರೀತಿ ಬೆಳೆಯಲು ಸ್ಫೂರ್ತಿ ನೀಡಿದ್ದಾರೆ.

'ತಾಯಿಯ ಪ್ರೀತಿ' ಪ್ರಬಂಧದಲ್ಲಿ ತಾಯಿ ಮತ್ತು ತಾಯ್ತನದ ಮಹತ್ವ ತಿಳಿಸಿದ್ದಾರೆ. ಮಾತಿನಲ್ಲಿ ಹೇಳಲಾಗದ, ಬರವಣಿಗೆಯಲ್ಲಿ ಮುಗಿಸಲಾರದಷ್ಟು ಶ್ರೀಮಂತಿಕೆಯನ್ನು ಹೊಂದಿರುವಾಕೆ ತಾಯಿ. ಇಂದು ತಂದೆಯರು ಕೂಡ 'ತಾಯಿಯ ಪ್ರೀತಿ'ಯನ್ನು ನೀಡುವಲ್ಲಿ ಯಶಸ್ವಿಯಾಗುತ್ತಿರುವುದು ಸಂತಸದ ಸಂಗತಿಯಾಗಿದೆ. ***"ಆಧುನಿಕ ಬದುಕಿನ ಒತ್ತಡಗಳು ನಿರ್ಮಿಸಿದ ಕುಟುಂಬದ ಹೊಸ ವಿನ್ಯಾಸಗಳಲ್ಲಿ 'ತಾಯ್ತನ'ವು ಲಿಂಗ ಸಂಬಂಧಿಯಾಗಿ ಉಳಿಯದೆ, ಉಭಯಲಿಂಗ ಸ್ವಭಾವವಾಗಿ ರೂಪಾಂತರಗೊಂಡಿರುವುದು***

ಆರೋಗ್ಯಪೂರ್ಣ ಬೆಳವಣಿಗೆ. ಇದು ಕ್ವಚಿತ್ತಾಗಿ ಕಂಡುಬಂದರೂ ಮುಂದಿನ ದಿನಗಳಲ್ಲಿ ವ್ಯಾಪಕವಾದ ಬೆಂಬಲವನ್ನು ಪಡೆದೀತು ಎಂದು ಹಾರೈಸೋಣ" ಎಂಬ ಆಶಯ ಲೇಖಕಿ ಅವರದು.

'ಹಂಗಿನ ಅರಮನೆ' ಪ್ರಬಂಧದಲ್ಲಿ ಹಂಗಿನ ಬದುಕು ವ್ಯಕ್ತಿತ್ವಗಳನ್ನು ಅರಳಲು ಬಿಡದೆ ಮುದುಡಿಕೊಳ್ಳುವಂತೆ ಮಾಡುತ್ತದೆ. ಮಹಿಳೆಯರ ಸಂದರ್ಭದಲ್ಲಿ ಹಂಗು ಇನ್ನೂ ಹೆಚ್ಚಿನ ಸ್ಥಾನ ಪಡೆದಿದೆ. ಮಹಿಳೆ ಎಲ್ಲಾ ಕ್ಷೇತ್ರಗಳಲ್ಲೂ ತನ್ನನ್ನು ತೊಡಗಿಸಿಕೊಂಡರೂ ಸಹ ಅಲ್ಲೂ ಹಂಗಿನ ಸ್ಥಿತಿಯೇ ಇರುವುದನ್ನು ಸೂಕ್ಷ್ಮವಾಗಿ ಗುರುತಿಸಿ ಹೇಳಿದ್ದಾರೆ. ಹೆಣ್ಣು ತಾನು ಸ್ವತಂತ್ರಳು, ದುಡಿಮೆಯ ಮೂಲಕ ಆರ್ಥಿಕವಾಗಿಯೂ ಸ್ವಾತಂತ್ರ್ಯವನ್ನು ಪಡೆಯುತ್ತೇನೆ ಎಂದು ಭಾವಿಸಿದರೂ ಅದರ ಹಿಂದಿರುವ ಹಂಗಿನ ಬದುಕನ್ನು ಅರಿಯುವುದು ಮತ್ತು ಅದರಿಂದ ವಿಮೋಚನೆಗೊಳ್ಳುವುದು ಸರಳ ಸಂಗತಿಯಲ್ಲ ಎಂಬ ವಿಚಾರವು ವಾಸ್ತವ ಜೀವನಕ್ಕೆ ಹತ್ತಿರವಾದುದು.

'ಕುತೂಹಲ' ಪ್ರಬಂಧದಲ್ಲಿ ಕುತೂಹಲದ ಪ್ರಾಮುಖ್ಯತೆಯನ್ನು ಲೂಯಿಪಾಶ್ಚರ್ ಮತ್ತು ಆರ್ಕಿಮಿಡೀಸ್‌ರ ಉದಾಹರಣೆ ಮೂಲಕ ತಿಳಿಸಿದ್ದಾರೆ. ಪ್ರತಿಯೊಬ್ಬ ಮನುಷ್ಯನೂ ಕುತೂಹಲಿಯಾಗಿರಬೇಕು. *"ಯಾವಾಗ ಕೂತೂಹಲ ಆಸಕ್ತಿಯಾಗಿ, ಗೀಳಾಗಿ, ಶೋಧದಲ್ಲಿ ನಮ್ಮನ್ನು ತೊಡಗಿಸುತ್ತದೋ ಆಗ ಮಾತ್ರ ಏನಾದರೂ ಸಾಧಿಸಲು ಸಾಧ್ಯ.. ಹಿರಿಯ ಚೇತನಗಳ ಬದುಕಿನ ಹಿಂದಿರುವ ಸತ್ಯವೇ ಇದು. ಅವರ ಸಾಧನೆ ವೈಯಕ್ತಿಕ ಮೋಕ್ಷಕ್ಕಾಗಿರದೆ, ಸಮಷ್ಟಿ ಹಿತದ ಗುರಿ ಸಾಧಿಸಿದೆ. ಧನ್ಯತೆ ಹೊಂದಿದೆ "*

ದುರಂತ ಕಾಯಿಲೆಯಿಂದಾಗಿ ೧೯ ತಿಂಗಳ ಎಳೆಗೂಸು ಶಾಶ್ವತ ಕುರುಡು ಮತ್ತು ಕಿವುಡುತನಕ್ಕೆ ಬಲಿಯಾದಳು. ಆ್ಯನಿ ಎಂಬ ಶಿಕ್ಷಕಿಯ ಸಹಾಯದಿಂದ ಓದು ಬರಹ ಕಲಿತು ಒಬ್ಬ ಆರೋಗ್ಯವಂತ ವ್ಯಕ್ತಿಯೂ ಸಾಧಿಸಲಾರದ ಎತ್ತರವನ್ನು ಹೆಲೆನ್ ಏರಿ ಇಡೀ ಜಗತ್ತಿಗೇ ಆದರ್ಶವಾದ ಬಗೆಯನ್ನು **'ಹೆಲೆನ್ ಕೆಲ್ಲರ್'** ಪ್ರಬಂಧದಲ್ಲಿ ತಿಳಿಸಿದ್ದಾರೆ. *"ಜೀವನವನ್ನು ಸುಂದರ ಮತ್ತು ಶ್ರೀಮಂತಗೊಳಿಸಿಕೊಳ್ಳುವುದು ತಮ್ಮ ಕೈಯಲ್ಲಿದೆ ಎಂದು ತನ್ನ ಬದುಕಿನ ಕ್ರಮದ ಮೂಲಕ ತೋರಿಸಿಕೊಟ್ಟಳು"* ಎಂಬ ಸಾಲುಗಳು ವಿಕಲಚೇತನರಿಗೆ ಮಾತ್ರವಲ್ಲ ಎಲ್ಲರಿಗೂ ಸ್ಫೂರ್ತಿದಾಯಕವಾಗಿದೆ.

'ಮಹಿಳೆ ಮತ್ತು ಸಾಮಾಜಿಕತೆ' ಎಂಬ ಪ್ರಬಂಧದಲ್ಲಿ ಸಮಾಜದಲ್ಲಿ ಮಹಿಳೆಯ ಪರಿಸ್ಥಿತಿ ಮತ್ತು ಅಲ್ಲಿ ಆಕೆಗೆ ಸಮಾನತೆ ಸುರಕ್ಷತೆಗಳಿಲ್ಲದಿರುವ ವ್ಯವಸ್ಥೆಯ ಬಗ್ಗೆ ತಿಳಿಸಿದ್ದಾರೆ. ಸಮಾಜ ಮಹಿಳೆಯನ್ನು ನೋಡುವ ರೀತಿ ಬದಲಾಗಬೇಕು, ಯಾವುದೇ ರಂಗದಲ್ಲಿ ದುಡಿಯುವ ಸಾಮರ್ಥ್ಯ ಮಹಿಳೆಗಿದೆ. ಅದಕ್ಕೆ ಅವಕಾಶ ನೀಡುವುದರ ಜೊತೆಗೆ ರಕ್ಷಣೆಯನ್ನು ನೀಡಬೇಕೆಂಬುದು ಸಬಿಹಾ ಅವರ ಚಿಂತನೆಯಾಗಿದೆ.

'ವಿವಾಹ-ಬಂಧನ-ವಿಚ್ಛೇದನ' ಪ್ರಬಂಧದಲ್ಲಿ ಸಬಿಹಾ ಅವರು ಸೂಕ್ಷ್ಮ ಹಾಗೂ ಮುಖ್ಯ ಅಂಶಗಳ ಮೂಲಕ ಇಂದಿನ ಕುಟುಂಬ ಮತ್ತು ದಾಂಪತ್ಯದ ವಾಸ್ತವ ಸ್ಥಿತಿಗಳನ್ನು ಕಟ್ಟಿಕೊಟ್ಟಿದ್ದಾರೆ. ಜೊತೆಗೆ ವ್ಯವಸ್ಥೆಗಳ ಬದಲಾವಣೆಯ ಬಗ್ಗೆ ದನಿ ಎತ್ತಿದ್ದಾರೆ. ಪಟ್ಟಭದ್ರ ಹಿತಾಶಕ್ತಿಗಳು ಮತ್ತು ಪುರುಷಪ್ರಧಾನ ವ್ಯವಸ್ಥೆ ಹೆಣ್ಣನ್ನು ನೋಡುವ ರೀತಿ ಬದಲಾಗಬೇಕು. ಹೆಣ್ಣು-ಗಂಡು ಇಬ್ಬರಿಗೂ 'ವಿವಾಹ' ಬಂಧನವಾಗದೆ ಸಂತಸದ, ನೆಮ್ಮದಿಯ ಜೀವನ ನೀಡುವಂತಾಗಬೇಕು. ಅದು ಇಲ್ಲವಾದಲ್ಲಿ *"ಜನ್ಮಾಂತರದ ಸಂಬಂಧಕ್ಕಿಂತ, ವಿಶ್ವಾಸದ, ಮುಕ್ತವಾದ ಬದುಕು ಸಾಧ್ಯವಿದೆ ಎಂದಾದರೆ, 'ಗೌರವದಿಂದ ದೂರವಾಗಿ ಬದುಕುವ' ಆಯ್ಕೆ ಇಬ್ಬರಿಗೂ ಬೇಕು; ಅದೇ ಇಂದು ಮಾನವೀಯ ಹೆಜ್ಜೆಯೂ ಆಗುತ್ತದೆ"* ಎಂಬ ಲೇಖಕಿಯ ಮಾತಿನಂತೆ ನಡೆಯುವುದೇ ಮೇಲು ಎನಿಸುತ್ತದೆ.

"ತಿದ್ದುಪಡಿಯ ಹೊರಳುದಾರಿಯಲ್ಲಿ ಎಂ.ಪಿ.ಟಿ.ಕಾಯ್ದೆ" ಎಂಬ ಪ್ರಬಂಧದಲ್ಲಿ ಯಾವುದೇ ಕಾಯಿದೆ, ಕಾನೂನುಗಳು ಕಾಲಕಾಲಕ್ಕೆ ಸಂದರ್ಭಕ್ಕನುಗುಣವಾಗಿ ಬದಲಾಗಬೇಕು ಎಂಬ ಅಂಶವನ್ನು ಎತ್ತಿಹಿಡಿದಿದ್ದಾರೆ. ಎಂ.ಪಿ.ಟಿ. ಕಾಯಿದೆ ಪ್ರಕಾರ ಇಪ್ಪತ್ತು ವಾರಗಳ ಬಳಿಕ ಗರ್ಭಪಾತ ಅಪರಾಧ. ಆದರೆ ಗರ್ಭದಲ್ಲಿರುವ ಮಗುವಿನಲ್ಲಿರುವ ದೋಷಗಳು ಪತ್ತೆಯಾಗುವದೇ ಇಪ್ಪತ್ತು ವಾರಗಳ ಬಳಿಕ. ಗರ್ಭಸ್ಥ ಶಿಶುವಿಗೆ ತೀವ್ರ ಹೃದಯದ ತೊಂದರೆ ಇದೆ ಎಂದು ತಿಳಿದು ನಿಖಿತಾ ಮತ್ತು ಹರೇನ ದಂಪತಿಗಳು ಗರ್ಭಪಾತಕ್ಕೆ ಅನುಮತಿ ಕೋರಿ ನ್ಯಾಯಲಯದ ಮೊರೆ ಹೋದರು. ಆದರೆ ನ್ಯಾಯಾಲಯ ನಿರಾಕರಿಸಿತು. ಈ ದಂಪತಿಗಳಿಗೆ ನಿಸರ್ಗವೇ ಪರಿಹಾರ ನೀಡಿದ್ದು ಬೇರೆಯ ಮಾತು. ಆಧುನಿಕ ತಂತ್ರಜ್ಞಾನದ ಫಲಶ್ರುತಿಯಾಗಿ ಮಗುವಿನ ಜನನಪೂರ್ವದ ಆರೋಗ್ಯದ ಸ್ಥಿತಿಯನ್ನು ತಿಳಿಯುವುದು ಸಾಧ್ಯ. ತೀವ್ರ ಅಂಗವೈಕಲ್ಯಕ್ಕೆ ಒಳಗಾಗುವ ಶಿಶುವನ್ನು ಪಡೆಯದಿರುವ ಹಕ್ಕು ದಂಪತಿಗಳಿಗೆ ಇರಬೇಡವೇ? ಎಂಬ ಪ್ರಶ್ನೆ ಎತ್ತುವುದರ ಮೂಲಕ ಕಾನೂನು ಕಟ್ಟಳೆಗಳಿಗಿಂತ ಮಾನವೀಯತೆ ದೊಡ್ಡದು ಎಂಬುದನ್ನು ಸಾರುವುದರ ಜೊತೆಗೆ ಸ್ವಸ್ಥ ಬದುಕಿಗೆ ಅಂಥ ಸಮಾಜದ ನಿರ್ಮಾಣಕ್ಕೆ ಬದಲಾವಣೆಗಳು ಅವಶ್ಯಕ ಎಂದಿದ್ದಾರೆ. ಇಲ್ಲವಾದಲ್ಲಿ ದುರಂತಗಳು ಸಂಭವಿಸುತ್ತವೆ ಎಂಬುದಕ್ಕೆ ಇತ್ತೀಚೆಗೆ ಐರ್ಲೆಂಡ್‌ನಲ್ಲಿ ನಡೆದ ಸವಿತಾಹಾಲಪ್ಪನವರ ಪ್ರಕರಣ ಸಾಕ್ಷಿಯಾಗಿದೆ.

ಒಟ್ಟಾರೆಯಾಗಿ **'ನುಡಿಹೊನಲು'** ಕೃತಿಯಲ್ಲಿರುವ ಪ್ರಬಂಧಗಳು ಬದುಕಿನ ಹಲವು ವಿಷಯಗಳನ್ನು ಹೊಸ ಆಯಾಮದಲ್ಲಿ ಚಿಂತಿಸುವ ಕೆಲಸವನ್ನು ಮಾಡಿದೆ. ಆ ಮೂಲಕ ಜೀವನ ಮತ್ತು ಸಮಾಜದ ಸುಧಾರಣೆ ಬಯಸುತ್ತಾ ಹೊಸ ಸಂಸ್ಕೃತಿ ಕಟ್ಟುವ ಕೆಲಸ ಮಾಡಿದ್ದಾರೆ. ***"ಸ್ತ್ರೀಪುರುಷ ತಾರತಮ್ಯದ ಹಳೆಯ ಮಾದರಿಗಳು ಬದಲಾಗಿ ಸಮಾನತೆಯ ಹೊಸ ಮಾದರಿಗಳು ಬರಬೇಕೆಂಬುದು ಲೇಖಕಿಯ ಮುಖ್ಯ ಆಶಯ. ವಿವಾಹ, ಕೌಟುಂಬಿಕ ವ್ಯವಸ್ಥೆ, ಪುರುಷನ ವರ್ತನೆ, ವಿಚ್ಛೇದನ ಮೊದಲಾದ ವಿಷಯಗಳ ಗಾಢ ಚರ್ಚೆಯಿದ್ದು, ಬದಲಾಗಬೇಕಾದ ವಿಚಾರಗಳ ಬಗೆಗೆ ಬೆಳಕು ಚೆಲ್ಲುವ ಕೆಲಸವನ್ನು ಸಬಿಹಾ ಮಾಡುತ್ತಾರೆ. ಕೌಟುಂಬಿಕ ದೌರ್ಜನ್ಯ ಮತ್ತು ಯಾಜಮಾನ್ಯ ಸಂಸ್ಕೃತಿಯ ವಿರುದ್ಧ ಹೋರಾಡಬೇಕಾದ ಅನಿವಾರ್ಯ ಪರಿಸ್ಥಿಯ ಬಗ್ಗೆ ಅರಿವು ಮೂಡಿಸುವುದೇ ಅವರ ಪ್ರಧಾನ ಧೋರಣೆ"*** ಎಂದು ರಾಗೌ ಅವರು ಕೃತಿಯ ಮುನ್ನುಡಿಯಲ್ಲಿ ಹೇಳಿದ್ದಾರೆ. ಒಟ್ಟಿನಲ್ಲಿ ಸಮಾಜ ಮತ್ತು ಪುರುಷ ಹೆಣ್ಣನ್ನು ನೋಡುವ ದೃಷ್ಟಿ ಬದಲಾಗಬೇಕು. ಹೆಣ್ಣು ಆರ್ಥಿಕವಾಗಿ, ಆ ಮೂಲಕ ಸಾಮಾಜಿಕವಾಗಿ ಪ್ರಭಲಳಾಗಬೇಕು ಎಂಬ ಆಶಯವನ್ನು ಸಬಿಹಾ ಅವರು ಹೊಂದಿದ್ದಾರೆ. ಬದುಕಿಗೆ ಅವಶ್ಯಕವಾದ ಸಾಮಾನ್ಯ ಮತ್ತು ಸೂಕ್ಷ್ಮ ವಿಚಾರಗಳ ಚರ್ಚೆಯನ್ನು ತಮ್ಮ ಪ್ರಬಂಧದಲ್ಲಿ ಮಂಡಿಸಿದ್ದಾರೆ. ಗಾದೆಗಳನ್ನು ಸೂಕ್ತವಾಗಿ ಬಳಸಿಕೊಳ್ಳುವುದರ ಮೂಲಕ ಅವುಗಳ ಮಹತ್ವವನ್ನು ಎತ್ತಿಹಿಡಿಯುವುದರ ಜೊತೆಗೆ ಪ್ರಬಂಧಗಳು ಪರಿಣಾಮಕಾರಿಯಾಗಿ ಮೂಡಿಬರುವಂತೆ ಮಾಡಿದ್ದಾರೆ. ಒಟ್ಟಾರೆ ಅವರ ಪ್ರಬಂಧಗಳು ಸಂತೋಷ, ಮನೋವಿಕಾಸದ ಜೊತೆಗೆ ಪ್ರಗತಿಪರ ಮನೋಭಾವ ಬೆಳೆಸಿಕೊಳ್ಳುವಂತೆ ಪ್ರೇರೇಪಿಸುತ್ತವೆ.

೪.೪ ಜೀವನ ಚರಿತ್ರೆ

ಪಾಶ್ಚಾತ್ಯ ಸಾಹಿತ್ಯದಿಂದ ಕನ್ನಡಕ್ಕೆ ಬಂದ ಅನೇಕ ಸಾಹಿತ್ಯ ಪ್ರಕಾರಗಳಲ್ಲಿ ಜೀವನ ಚರಿತ್ರೆಯೂ ಒಂದು "ಜೀವನ ಚರಿತ್ರೆ ಸಾಮಾನ್ಯವಾಗಿ ಎಲ್ಲಾ ದೇಶಗಳಲ್ಲಿ ಸಮಾಜದ ಮುಂದೆ ಆದರ್ಶಗಳು ಕಣ್ಣಿಗೆ ಕಟ್ಟುವಂತೆ ನಿಲ್ಲಿಸುವ ಉದ್ದೇಶದಿಂದ ರಚಿತವಾದವು. ಕ್ರಮೇಣ ಆರಾಧನೆಯ ಮನೋಭಾವ ಕಡಿಮೆಯಾಗಿ, ವ್ಯಕ್ತಿತ್ವವನ್ನು ಕಡೆದು ನಿಲ್ಲಿಸುವ ಉದ್ದೇಶ ಕಾಣುತ್ತದೆ". ಜೀವನ ಚರಿತ್ರೆ ಬರೆಯುವವರಿಗೆ ಸ್ಫುಟವಾದ, ಮೂರ್ತವಾದ ಶೈಲಿ ಇರಬೇಕು. ಕೃತಿಯ ನಾಯಕನನ್ನು ಅರ್ಥಮಾಡಿಕೊಳ್ಳುವ ಕಲ್ಪನಾ

ಶಕ್ತಿಬೇಕು; ನಿರೂಪಣೆಯಲ್ಲಿ ಪ್ರಮಾಣಿಕತೆ ಬೇಕು; ಇಂಗ್ಲಿಷ್‌ನಲ್ಲಿ ಲಿಟನ್ ಸ್ಟ್ರಾಜಿ ಬರೆದ 'ಎಮಿನೆಂಟ್ ವಿಕ್ಟೋರಿಯನ್ಸ್' ಮತ್ತು ವಿನ್‌ಸ್ಟನ್ ಚರ್ಚಿಲ್ ಬರೆದ 'ಲೆನಿನ್' ಬಹು ವಿಶಿಷ್ಟ ಕೃತಿಗಳೆಂದು ಎಲ್.ಎಸ್. ಶೇಷಗಿರಿರಾವ್ ಅಭಿಪ್ರಾಯ ಪಡುತ್ತಾರೆ. ಕೃತಿಯ ನಾಯಕನ ಇಡೀ ಜೀವನವನ್ನು ಸಮೀಕ್ಷಿಸದ ಅವನ ವ್ಯಕ್ತಿತ್ವದ ಸೊಗಸು ಸತ್ವವನ್ನು ಸ್ಪಷ್ಟಗೊಳಿಸುವುದಕ್ಕೆ ಸೀಮಿತಗೊಳ್ಳುವ 'ವ್ಯಕ್ತಿಚಿತ್ರಣ' ಎನ್ನುವುದು ಜೀವನ ಚರಿತ್ರೆಯ ಒಂದು ಒಳ ಪ್ರಕಾರ.

ಬಹುಮುಖ ಪ್ರತಿಭೆಯ ಸಬಿಹಾ ಭೂಮಿಗೌಡ ಅವರು ಕತೆ, ಕವನ, ಪ್ರಬಂಧ, ವಿಮರ್ಶೆಗಳ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಲೇಖಕಿಯಾದ **'ಲೀಲಾಬಾಯಿ ಕಾಮತ್'** ಮತ್ತು ದಕ್ಷಿಣ ಕನ್ನಡದ ಎರಡನೇ ತಲೆಮಾರಿನ ಬರಹಗಾರರಾದ **'ಕುಡ್ವಿವಾಸುದೇವ ಶಣೈ'** ಅವರ ವ್ಯಕ್ತಿ ಚಿತ್ರಣಗಳನ್ನು ಬರೆಯುವುದರ ಮೂಲಕ ಎರಡು ವಿಶಿಷ್ಟ ವ್ಯಕ್ತಿತ್ವಗಳ ಪರಿಚಯ ಮಾಡಿಕೊಟ್ಟಿದ್ದಾರೆ. ಅಲ್ಲದೆ ಅವರ ಆದರ್ಶ, ಧೋರಣೆ ಮತ್ತು ಸಾಧನೆಗಳು ಸ್ಫೂರ್ತಿದಾಯಕವಾಗಿರುವುದನ್ನು ಸೂಕ್ಷ್ಮವಾಗಿ ಗುರುತಿಸಿ ಸರಳವಾಗಿ ಚಿತ್ರಿಸಿದ್ದಾರೆ.

'ಲೀಲಾಬಾಯಿ ಕಾಮತ್ (ಬದುಕು-ಬರಹ)' ಎಂಬ ಕೃತಿಯಲ್ಲಿ ಅವರ ಬಾಲ್ಯ, ಕೌಟುಂಬಿಕ ವಿವರ, ಸಾಮಾಜಿಕ ಕ್ಷೇತ್ರದಲ್ಲಿ ಲೀಲಾಬಾಯಿ ಕಾಮತ್ ತಮ್ಮನ್ನು ತೊಡಗಿಸಿಕೊಂಡ ಬಗೆ, ಅವರ ಮೇಲೆ ಗಾಂಧೀಜಿಯವರ ಪ್ರಭಾವ, ಅವರ ಜೀವನ ಧೋರಣೆಗಳು ಅವರ ಸಾಹಿತ್ಯಕ ಬದುಕು ಮತ್ತು ಸಾಧನೆ ಕುರಿತ ವಿವರಗಳನ್ನು ಸಬಿಹಾ ಅವರು ನೀಡಿದ್ದಾರೆ.

ಸ್ವಾತಂತ್ರ್ಯ ಪೂರ್ವದ ಕೆಲವೇ ಲೇಖಕಿಯರಲ್ಲಿ ಲೀಲಾಬಾಯಿ ಕಾಮತ್ ಅವರು ಕೂಡ ಒಬ್ಬರು. ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿದ್ದ ಅವರು ತಮ್ಮ ಸಂಪರ್ಕಕ್ಕೆ ಬಂದವರ ಮೇಲೂ ವಿಶಿಷ್ಟ ಛಾಪನ್ನು ಮೂಡಿಸಿದರು. ಇಂದಿನ ಯುವ ಪೀಳಿಗೆ ಆಸಕ್ತಿ ಮತ್ತು ಶ್ರದ್ಧೆಗಳಿಂದ ಹಿಂದೆ ಸರಿಯುತ್ತಿರುವ ಸಂದರ್ಭದಲ್ಲಿ ಎಂಬತ್ತೈದರ ಇಳಿವಯಸ್ಸಿನಲ್ಲೂ ಆಸಕ್ತಿ, ಶ್ರದ್ಧೆ, ಕೆಲಸದಲ್ಲಿ ಅಚ್ಚುಕಟ್ಟುತನವನ್ನು ಹೊಂದಿದ್ದ ಲೀಲಾಬಾಯಿಕಾಮತ್ ಅವರ ಜೀವನ ಕ್ರಮ ಆದರ್ಶವಾದುದು ಮತ್ತು ಇಂದಿನ ಯುವ ಪೀಳಿಗೆಯನ್ನು ನಾಚಿಸುವಂಥದ್ದು.

ಲೀಲಾಬಾಯಿ ಕಾಮತ್ ಅವರು ಶ್ರೀನಿವಾಸದಾಂಗೆ ಮತ್ತು ಕಾಶೀಬಾಯಿದಾಂಗೆ ದಂಪತಿಗಳಿಗೆ ಹಿರಿಯ ಮಗಳಾಗಿ ೧೫ ಅಕ್ಟೋಬರ್ ೧೯೧೧ ರಂದು ಮಂಗಳೂರಿನಲ್ಲಿ ಜನಿಸಿದರು. ಓರ್ವ ಸಹೋದರ, ಓರ್ವ ಸಹೋದರಿ ಇದ್ದರು. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು ತಾಯಿಯ ಆದರ್ಶದ ನೆರಳಲ್ಲಿ ಬೆಳೆದರು. ಅವರು ಐದನೇ ತರಗತಿಯವರೆಗಿನ ಶಿಕ್ಷಣವನ್ನು ಹೆಣ್ಣುಮಕ್ಕಳ ಕೆನರಾ ಪ್ರೌಢಶಾಲೆಯಲ್ಲಿ ಪಡೆದರು. ತಮ್ಮ ೧೧ನೇ ವಯಸ್ಸಿನಲ್ಲಿ ಕುಂದಾಪುರದ ಲಾಯರ್ ರಾಮಚಂದ್ರ ಕಾಮತ್ ಮತ್ತು ಸೀತಾಬಾಯಿ ಕಾಮತ್ ಅವರ ಮಗ ವಿ.ಆರ್.ಕಾಮತ್ ಅವರ ಜೊತೆ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಕಲಿಯುವ ಉತ್ಸಾಹವಿದ್ದರೂ ವಿವಾಹದಿಂದ ಮೊಟಕುಗೊಂಡ ಅವರ ಶಿಕ್ಷಣ ಮನೆಯಲ್ಲಿಯೇ ಮುಂದುವರಿಯಿತು. ಮನೆಭಾಷೆ ಕೊಂಕಣಿಯ ಜೊತೆಗೆ ಹಿಂದಿ, ಇಂಗ್ಲಿಷ್, ಮರಾಠಿ, ಕನ್ನಡ, ಹೀಗೆ ಬಹುಬಾಷೆಗಳನ್ನು ಕಲಿತರು. ಅದಕ್ಕೆ ಅವರ ಪತಿ ವಿ.ಆರ್. ಕಾಮತ್‌ರ ಸಹಕಾರ ಸ್ಮರಿಸುವಂಥದ್ದು, ಪುರುಷಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಪುರುಷ ಹೆಣ್ಣನ್ನು ಕೀಳಾಗಿ ಕಾಣುತ್ತಾ ತಾನು ಮಾತ್ರ ಸಮಾಜದಲ್ಲಿ ಉತ್ತಮ ಸ್ಥಾನಮಾನ ಪಡೆಯುವಂತಾಗಬೇಕು, ಹೆಂಡತಿಯಾದವಳು ಗಂಡ, ಮನೆ, ಮಕ್ಕಳು ಸಂಸಾರದ ಹೊಣೆ ಹೊತ್ತು, ಮನೆಯಲ್ಲಿಯೇ ಇರಬೇಕು ಎಂಬ ಧೋರಣೆಗಳು ಅಪಾರವಾಗಿದ್ದ ಸಂದರ್ಭದಲ್ಲಿ ಲೀಲಾಬಾಯಿ ಕಾಮತ್ ಅವರ ಪತಿ ಮತ್ತು ಕುಟುಂಬದವರು ನೀಡಿದ ಪ್ರೋತ್ಸಾಹ

ಶ್ಲಾಘನೀಯವಾದುದು. ಇಂದಿಗೂ ಸಹ ಎಷ್ಟೋ ಕುಟುಂಬಗಳಲ್ಲಿ ವಿದ್ಯಾವಂತೆಯರಾದ ಹೆಣ್ಣುಮಕ್ಕಳನ್ನು ಉದ್ಯೋಗಕ್ಕೆ ಹೋಗಲು, ಸಾಮಾಜಿಕ ಚಟುವಟಿಕೆಗಳಲ್ಲಿ, ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಕ್ಕೆ ನಿರ್ಬಂಧ ಹೇರಲಾಗುತ್ತಿದೆ. ಸ್ತ್ರೀ ಪರ ಕಾಳಜಿ ಹೊಂದಿರುವ ಸಬಿಹಾಭೂಮಿಗೌಡ ಅವರು ಲೀಲಾಬಾಯಿ ಕಾಮತ್ ಅವರ ಜೀವನದ ಇಂಥ ಅಂಶವನ್ನು ಗುರುತಿಸಿರುವುದು ಸಮಾಜದಲ್ಲಿ ಮಹಿಳೆಯ ಏಳಿಗೆಗೆ ಪೂರಕವಾಗಿದೆ.

ಲೀಲಾಬಾಯಿ ಕಾಮತ್ ಅವರ ಸಾಮಾಜಿಕ ಜೀವನ ಗಮನಾರ್ಹವಾದುದು. ಶಿಕ್ಷಣ ವಿಜ್ಞಾನ, ತಂತ್ರಜ್ಞಾನಗಳು ಮುಂದುವರೆದಿರುವ ಇಂದು ಸ್ತ್ರೀ ತನ್ನನ್ನು ರಾಜಕೀಯದಲ್ಲಿ ತೊಡಗಿಸಿಕೊಳ್ಳಲು ಹಿಂದೆಮುಂದೆ ಯೋಚಿಸುತ್ತಿದ್ದಾಳೆ. ಆದರೆ ಲೀಲಾಬಾಯಿ ಕಾಮತ್ ಅವರು ೧೯ನೇ ಶತಮಾನದ ಆರಂಭದಲ್ಲಿಯೇ ಕೌನ್ಸಿಲರ್ ಆಗಿ ೨೦ ವರ್ಷ ಕಾರ್ಯ ನಿರ್ವಹಿಸಿ ಜನಪ್ರಿಯತೆ ಗಳಿಸಿದ್ದು ಹೆಮ್ಮೆಯ ಸಂಗತಿ. ಅನೇಕ ನಾಗರೀಕ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಪರಿಹರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಸಂಸಾರ ನಿಭಾಯಿಸುವ ಹೆಣ್ಣಿಗೆ ಸಮಾಜದ ಮೂಲ ಸಮಸ್ಯೆಗಳ ಅರಿವಿರುತ್ತದೆ. ಆದ್ದರಿಂದ ಆಕೆ ರಾಜಕೀಯಕ್ಕೆ ಕಾಲಿರಿಸುವುದರ ಮೂಲಕ ಸಮಸ್ಯೆಗಳಿಗೆ ಸ್ಪಂದಿಸಿ ಉತ್ತಮ ಸೇವೆ ನೀಡುವುದರ ಜೊತೆಗೆ ಸಮಾಜದಲ್ಲಿ ಉನ್ನತ ಸ್ಥಾನ ಗಳಿಸಲು ಸಾಧ್ಯ ಎಂಬ ಅಂಶ ಇದರಿಂದ ತಿಳಿಯುತ್ತದೆ.

ಮಹಿಳೆಯರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವು ಪ್ರಗತಿಪರ ನಿಲುವುಗಳನ್ನು ಲೀಲಾಬಾಯಿ ಕಾಮತ್ ಅವರು ರೂಪಿಸಿದ್ದಾರೆ. ಅವರು ಮಂಡಿಸಿರುವ ವಿಚಾರಗಳು ಅಂದಿಗೆ ಮಾತ್ರವಲ್ಲ ಇಂದಿಗೂ ಪ್ರಸ್ತುತವಾಗಿದ್ದು, ಅವುಗಳನ್ನು ಇಲ್ಲಿ ಉಲ್ಲೇಖಿಸುವುದು ಅವಶ್ಯಕ ಎನಿಸುತ್ತದೆ.

- ಆಸ್ತಿ ಸೊತ್ತುಗಳ ಮೇಲೆ ಸ್ತ್ರೀ–ಪುರುಷ ಭೇದವಿರದೆ ಸಮಾನ ಹಕ್ಕಿರಬೇಕು.
- ವರದಕ್ಷಿಣೆ ಪದ್ಧತಿಯ ನಿರ್ಮೂಲನೆ
- ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಒತ್ತಾಯ
- ವಿಧವಾಶ್ರಮದ ಸ್ಥಾಪನೆಗೆ ಬೇಡಿಕೆ
- ಶಿಶು ಹಿತ ಸಾಧಕಾಲಯಗಳ ಸ್ಥಾಪನಗೆ ಆಗ್ರಹ
- ಆರನೆ ಫಾರಂವರೆಗೆ ಶಿಕ್ಷಣ ಶುಲ್ಕ ಮಾಫಿಗೆ ಒತ್ತಾಯ
- ನಲ್ವತ್ತು ವರ್ಷಕ್ಕೆ ಮಿಕ್ಕಿದ ಪುರುಷರು ಎಳೆತರುಣಿಯರನ್ನು ವಿವಾಹವಾಗದಂತೆ ತಡೆಗಟ್ಟುವಿಕೆ.
- ವರನ ವಯಸ್ಸು ಇಪ್ಪತ್ತೊಂದು, ವಧುವಿನ ವಯಸ್ಸು ಹದಿನಾರಕ್ಕೆ ಮೀರಿರಬೇಕೆಂದು ಶಾರದಾ ಬಿಲ್‌ನಲ್ಲಿ ತಿದ್ದುಪಡಿಗೆ ಆಗ್ರಹ.
- ಆಭರಣ, ಉಡುಗೆ, ತೊಡಿಗೆ ಸೇರಿ ರೂ. ೧೦೦ ಕ್ಕೆ ಮೀರದಂತೆ ಸರಳ ಜೀವನದ ಪ್ರತಿಪಾದನೆ.

ಮೇಲಿನ ವಿಚಾರಗಳನ್ನು ಅವಲೋಕಿಸಿದಾಗ ಲೀಲಾಬಾಯಿ ಕಾಮತ್ ಅವರು ಮಹಿಳಾ ಶಿಕ್ಷಣದ ಕುರಿತು ಹೊಂದಿದ್ದ ಕಾಳಜಿ ಮತ್ತು ಬದ್ಧತೆಗಳು ಸ್ಪಷ್ಟವಾಗುತ್ತದೆ." ಈ ವಿಚಾರಗಳನ್ನು ಅವರು ಅಂದಿನ ಸಮಸ್ಯೆಗಳಾಗಿ ಗುರುತಿಸಿದ್ದಾರೆ. ಆದರೆ ಅವು ಅಂದಿಗಿಂತ ಇಂದು ಸಮಾಜದ ಮುಖ್ಯ ಸಮಸ್ಯೆಗಳಾಗಿರುವುದನ್ನೂ ಪ್ರತಿನಿತ್ಯ ಮಾಧ್ಯಮಗಳಲ್ಲಿ ವರದಿಯಾಗುವ ಪ್ರಸಾರವಾಗುವ ಘಟನೆಗಳ ಮೂಲಕ ತಿಳಿಯಬಹುದಾಗಿದೆ. ಅಂದಿನಿಂದಲೂ ಈ ಸಮಸ್ಯೆಗಳ ನಿರ್ಮೂಲನೆಗಾಗಿ ಹೋರಾಟಗಳು

ನಡೆಯುತ್ತಲೇ ಇವೆ. ಹಾಗಾಗಿ ಪ್ರತಿಯೊಬ್ಬರು ಎಚ್ಚೆತ್ತುಕೊಂಡು ಹೆಣ್ಣಿನ ಪರಿಸ್ಥಿತಿ ಬದಲಾಗದೆ ಒಂದಲ್ಲ ಒಂದು ರೀತಿಯ ಶೋಷಣೆ ಮತ್ತು ಸಂಕಟಕ್ಕೆ ಆಕೆ ಗುರಿಯಾಗುತ್ತಲೇ ಮುನ್ನಡೆಯಬೇಕಾಗಿದೆ.

ಗಾಂಧೀಜಿಯವರ ಪ್ರಭಾವ ದಟ್ಟವಾಗಿ ಲೀಲಾಬಾಯಿ ಕಾಮತ್ ಅವರ ವ್ಯಕ್ತಿತ್ವದ ಮೇಲೆ ಉಂಟಾಗಿದೆ. ಎರಡು ಬಾರಿ ಗಾಂಧೀಜಿಯವರನ್ನು ಕಂಡ ಲೀಲಾಬಾಯಿ ಅವರು ಅವರ ಆದರ್ಶದಂತೆ ಬದುಕಿ ತೋರಿದವರು. ಗಾಂಧೀಜಿಯವರ ಮಾತುಗಳಿಂದ ಪ್ರಭಾವಿತರಾದ ಎಳೆಯ ವಯಸ್ಸಿನ ಲೀಲಾಬಾಯಿ ಕಾಮತ್ ಅವರು ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡರು. ಖಾದಿಧಾರಿಗಳಾಗಿ ಉಳಿದ ಲೀಲಾಬಾಯಿ ಕಾಮತ್ ಅವರು ಮುಂದೆ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಗಾಂಧಿಯವರ ಆದರ್ಶವನ್ನು ಪಾಲಿಸಿದರು.

ಲೀಲಾಬಾಯಿ ಕಾಮತ್ ಅವರ ಜೀವನ ಧೋರಣೆಗಳು ಆದರ್ಶವಾದುವು ಮತ್ತು ಪ್ರಶಂಸನೀಯಾರ್ಹವಾದುವು. ಸ್ವಾಭಿಮಾನ, ಸ್ವಾವಲಂಬನೆ ಮತ್ತು ಆತ್ಮವಿಶ್ವಾಸಗಳು ಅವರ ವ್ಯಕ್ತಿತ್ವದ ಮುಖ್ಯ ಅಂಶಗಳು. ಇವು ಅವರ ತಾಯಿಯಿಂದ ಬಂದ ಮೌಲ್ಯಗಳು. ಅವರು ಮಹಿಳಾ ಸಮಾಜಗಳ ರಚನೆಯ ಅಗತ್ಯವನ್ನು ಹೇಳುತ್ತಾ ಸಂಸಾರವೇ ಪ್ರಪಂಚವಲ್ಲ ಅದನ್ನು ಬಿಟ್ಟು ಹೊರ ಪ್ರಪಂಚದೊಂದಿಗೆ ಸಂಪರ್ಕ ಹೊಂದಿ ನಿಜವಾದ ಬದುಕನ್ನು ಬಾಳಬಹುದೆಂದು ತಿಳಿಸಿದ್ದಾರೆ.

"ಸ್ತ್ರೀ ಪುರುಷರ ನಡುವೆ ಈ ವ್ಯತ್ಯಾಸ ಯಾಕೆ? ಮಹಿಳೆಯರು ಮನುಷ್ಯರಲ್ಲವೇ? ವಿಧುರನೊಬ್ಬ ಜೀವನದ ಎಲ್ಲಾ ಸುಖಗಳನ್ನು ಅನುಭವಿಸಬಹುದಾದಲ್ಲಿ ವಿಧವೆಗೇಕೆ ಅದು ವರ್ಜ್ಯವಾಗಬೇಕು" ಎಂದು ಸಾರ್ವಜನಿಕ ವೇದಿಕೆಗಳಲ್ಲಿ ಪ್ರಶ್ನಿಸಿರುವುದು ಲಿಂಗ ಸಮಾನತೆಗಾಗಿ ನಡೆಸಿದ ಹೋರಾಟವಾಗಿದೆ. ಅವರ ಮಾತು ಮತ್ತು ವ್ಯಕ್ತಿತ್ವವನ್ನು ಗಮನಿಸಿದಾಗ ತಮ್ಮ ಕಾಲಕ್ಕಿಂತ ಮುಂದಿನ ಚಿಂತನೆಗಳನ್ನು ಹೊಂದಿದ್ದರು ಎಂಬುದು ಕಂಡುಬರುತ್ತದೆ.

" ಪರಸ್ಪರರಿಗಾಗಿ ಹೇಳಿ ಮಾಡಿಸಿದ ದಂಪತಿಗಳು ಎಂಬ ಮಾತು ಇವರ ಸಂದರ್ಭದಲ್ಲಿ ಅರ್ಥಪೂರ್ಣವಾಗಿ ಕೇಳಿಸುತ್ತವೆ. ಇವರು ಎಪ್ಪತ್ತೇಳು ವರ್ಷಗಳ ಸಾರ್ಥಕ ಮತ್ತು ಅರ್ಥಪೂರ್ಣ ವೈವಾಹಿಕ ಜೀನವದಲ್ಲಿ ಉದ್ದಕ್ಕೂ ಒಬ್ಬರು ಇನ್ನೊಬ್ಬರನ್ನು ಬೆಂಬಲಿಸಿ ನಿಂತರು. ವಿ.ಆರ್.ಕಾಮತ್‌ರ ವೃತ್ತಿ, ಬ್ಯಾಂಕಿನ ಕಾರ್ಯಭಾರಗಳಿಗೆ ಲೀಲಾಬಾಯಿ ಒತ್ತಾಸೆಯಾಗಿ ನಿಂತರೆ, ಲೀಲಾಬಾಯಿ ಅವರ ಸಾಹಿತ್ಯಿಕ ಮತ್ತು ಸಾಮಾಜಿಕ ರಂಗದ ಚಟುವಟಿಕೆಗಳಿಗೆ ಕಾಮತ್ ಅವರು ಬೆಂಬಲ ನೀಡುತ್ತಾ ಬಂದರು. ಪರಸ್ಪರರ ಕುರಿತು ಅವರು ಹೊಂದಿದ್ದ ಕಾಳಜಿ, ಪ್ರೀತಿ ಮತ್ತು ವಾತ್ಸಲ್ಯಗಳು ಅವರನ್ನು ಅಭಿನ್ನವಾಗಿ ಉಳಿಸಿದ ಸಂಗತಿಗಳು ಎನ್ನಬಹುದು. ಶಿಸ್ತುಬದ್ಧ ಜೀವನ ಮತ್ತು ಅದರಲ್ಲಿ ಅವರು ಹೊಂದಿದ್ದ ಬದ್ಧತೆಗಳು ಅವರ ಯಶಸ್ಸಿನ ಅಸ್ತಿಭಾರವಾಗಿದ್ದವು" ಎಂಬ ಸಾಲುಗಳು ಅವರ ದಾಂಪತ್ಯದ ಸಾಮರಸ್ಯವನ್ನು ತಿಳಿಸುತ್ತವೆ. ಇಂದು ವೈವಾಹಿಕ ಸಂಬಂಧಗಳು ಕೇವಲ ಆಕರ್ಷಣೆಯಾಗಿದ್ದು, ಬಹು ಬೇಗ ಕೊಂಡಿ ಕಳಚುತ್ತಿವೆ. ಸಂಬಂಧಗಳಿಗೆ ಬೆಲೆ ಇಲ್ಲದಂತಾಗಿ ಸಾಮರಸ್ಯದ ಕೊರತೆ ಅತಿಯಾಗಿದೆ. ಇಂತಹ ಸಂದರ್ಭದಲ್ಲಿ ಲೀಲಾಬಾಯಿ ಕಾಮತ್ ಅಂಥವರ ಜೀವನದ ಪರಿಚಯ ಅಗತ್ಯವಾಗಿದ್ದು, ಅದನ್ನು ಸಬಿಹಾ ಭೂಮಿಭೌಡ ಅವರು ಗುರುತಿಸಿ ತಿಳಿಸಿರುವುದು ಮುಖ್ಯವಾಗಿದೆ.

ತಮಗಾಗಲಿ ತಮ್ಮ ಮಕ್ಕಳಿಗಾಗಲಿ ಜೀನವದಲ್ಲಿ ಕಷ್ಟ ಸೋಲು ಎದುರಾದಾಗ ಅದನ್ನು ಧೈರ್ಯವಾಗಿ ಮತ್ತು ಬಹಳ ಸೂಕ್ಷ್ಮವಾಗಿ ನಿಭಾಯಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿರುತ್ತದೆ.

ಮಕ್ಕಳ ಜೀವನದಲ್ಲಾಗುವ ದುರ್ಘಟನೆಗಳು ತಂದೆ-ತಾಯಿಯರನ್ನು ವಿಚಲಿತರನ್ನಾಗಿಸುತ್ತದೆ. ಅದರಲ್ಲೂ ಹೆಣ್ಣುಮಕ್ಕಳ ವೈವಾಹಿಕ ಜೀವನದಲ್ಲಿ ತೊಂದರೆಯಾದರೆ ಅಲ್ಲಿಗೆ ಅವರ ಜೀವನ ಮುಗಿಯಿತು ಎಂದು ಕೈಚೆಲ್ಲಿ ಕೂರುವವರೇ ಹೆಚ್ಚು. ಅಂಥವರಿಗೆ ಲೀಲಾಬಾಯಿ ಕಾಮತ್‌ರ ಜೀವನದಲ್ಲಿ ನಡೆದ ಘಟನೆ, ತೆಗೆದುಕೊಂಡ ತೀರ್ಮಾನ ದಾರಿದೀಪದಂತಿದೆ. ಇಪ್ಪತ್ತೈದನೇ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡು ಒಂಟಿಯಾದ ಮಗಳಿಗೆ ಧೈರ್ಯ ತುಂಬಿದರು. "ನಿನ್ನ ಬದುಕು ಮುಗಿದಿಲ್ಲ. ಅದಿನ್ನೂ ಈಗಷ್ಟೆ ಆರಂಭವಾಗಿದೆ" ಎಂದು ತಿಳಿ ಹೇಳಿದರು. ಇದರಿಂದಾಗಿ ಆಕೆ ಓದನ್ನು ಮುಂದುವರೆಸಿ ವೈದ್ಯಕೀಯ ಶಿಕ್ಷಣ ಪಡೆದರು.

ಸಾಹಿತ್ಯಿಕವಾಗಿ ಲೀಲಾಬಾಯಿ ಕಾಮತ್ ಅವರ ಕೊಡುಗೆ ಮಹತ್ವವಾದುದ್ದು. ಅವರು ಅನುವಾದ ಕಥೆಗಳ ಮೂಲಕ ಸಾಹಿತ್ಯ ಪ್ರಪಂಚಕ್ಕೆ ಕಾಲಿಟ್ಟರು. ಅನಂತರ ಅನೇಕ ಸ್ವತಂತ್ರ ಕಥೆಗಳನ್ನು ಪ್ರವಾಸ ಕಥನ, ನಾಟಕ, ಅನೇಕ ಲೇಖನಗಳನ್ನು ಬರೆದಿದ್ದಾರೆ. ಇವರ ಬರವಣಿಗೆಯ ಮುಖ್ಯ ಉದ್ದೇಶ ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಅವರ ಉದ್ಧಾರ ಮಾಡುವುದು.

ಒಟ್ಟಾರೆಯಾಗಿ ಸಬಿಹಾ ಭೂಮಿಗೌಡ ಅವರು 'ಲೀಲಾಬಾಯಿ ಕಾಮತ್' ಕೃತಿಯಲ್ಲಿ ಲೀಲಾಬಾಯಿ ಅವರ ಜೀವನ, ಸಾಧನೆ, ಸಾಮಾಜಿಕ, ರಾಜಕೀಯ ಕ್ಷೇತ್ರದಲ್ಲಿ ತೊಡಗಿ ಕೈಗೊಂಡ ಕಾರ್ಯಗಳು ಮುಖ್ಯವಾಗಿ ಸ್ತ್ರೀಪರ ಕಾಳಜಿ, ಸಾಹಿತ್ಯಸೇವೆ, ವೈಯಕ್ತಿಕ ಜೀವನ ಮುತಾದ ಅನೇಕ ಅಂಶಗಳನ್ನು ಚಿತ್ರಿಸುವುದರ ಮೂಲಕ ಅವರ ಪರಿಚಯ ಎಲ್ಲರಿಗೂ ತಿಳಿಯುವಂತೆ ಮಾಡಿದ್ದಾರೆ. ಅಷ್ಟೇ ಅಲ್ಲದೇ ಅವರ ಜೀವನ ಧೋರಣೆಗಳು, ಆಶಯಗಳು ಇಂದಿಗೂ ಕೂಡ ಪ್ರಸ್ತುತವಾಗಿದ್ದು, ಅವುಗಳ ಅಳವಡಿಕೆಯಿಂದ ಪ್ರಗತಿ ಸಾಧ್ಯ ಎಂಬುದು ಸಬಿಹಾ ಭೂಮಿಗೌಡ ಅವರ ನಿಲುವಾಗಿದೆ.

'ಕುಡ್ವಿವಾಸುದೇವ ಶೆಣೈ' ಸಬಿಹಾ ಭೂಮಿಗೌಡ ಅವರು ಬರೆದಿರುವ ಮತ್ತೊಂದು ಜೀವನ ಚರಿತ್ರೆ. ಇವರು ದಕ್ಷಿಣ ಕನ್ನಡದ ಎರಡನೆಯ ತಲೆಮಾರಿನ ಬರಹಗಾರರಲ್ಲಿ ಪ್ರಮುಖರು. ಕತೆಗಾರರಾಗಿ, ನಾಟಕಕಾರರಾಗಿ, ಪತ್ರಿಕೋದ್ಯಮಿಯಾಗಿ, ರಂಗಪ್ರಯೋಗಕರ್ತರಾಗಿ ಖ್ಯಾತಿಯನ್ನು ಪಡೆದಿದ್ದಾರೆ. ಅಷ್ಟೆ ಅಲ್ಲದೆ ಓದುಗರ ವಲಯವನ್ನು ಬೆಳೆಸುವಲ್ಲಿ ಇವರು ವಹಿಸಿದ ಪಾತ್ರ ಸ್ಮರಣೀಯವಾದುದು. ಜೊತೆಗೆ ತಮಗಿಂತ ಹಿರಿಯ ಮಾತ್ತು ಸಮಕಾಲೀನ ಬರಹಗಾರರನ್ನು ಒಗ್ಗೂಡಿಸಿದ ಸಾಧನೆಯೂ ಇವರಿಗೆ ಸಲ್ಲುತ್ತದೆ.

ಮಕ್ಕಳ ವ್ಯಕ್ತಿತ್ವ ರೂಪುಗೊಳ್ಳಲು ಮನೆಯ ವಾತಾವರಣ ಬಹಳ ಮುಖ್ಯವಾಗುತ್ತದೆ. ಸೋದರ ಮಾವನ ಮನೆಯಲ್ಲಿ ಆಶ್ರಯ ಪಡೆದ ವಾಸುದೇವ ಶೆಣೈ ಅವರಿಗೆ ಅಲ್ಲಿದ್ದ ಸಾಹಿತ್ಯ ರಾಶಿ ಸ್ಫೂರ್ತಿ ನೀಡಿತು. ಮುದ್ರಣಾಲಯದಲ್ಲಿ ಕೆಲಸ ಮಾಡುತ್ತಿದ್ದ ಇವರು ಅನೇಕ ಪತ್ರಿಕೆಗಳಲ್ಲಿ ಸಹಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಉತ್ತಮ ಪತ್ರಿಕೋದ್ಯಮಿಯಾಗಿ ಹೆಸರು ಮಾಡಿದ ವಾಸುದೇವ ಶೆಣೈ ಅವರ ಕನಸಿನ ಕೂಸು **'ಪ್ರಭಾತ'** ಪತ್ರಿಕೆ, ಪತ್ರಿಕೆಯ ಗುಣಮಟ್ಟಕ್ಕೆ ಆದ್ಯತೆ ನೀಡುತ್ತಿದ್ದ ಇವರು ಕೊನೆಯ ತನಕ ಅದನ್ನು ಸಾಧಿಸಿದರು. ಪತ್ರಿಕೆಗಳನ್ನು ಸಿನಿಮಾ ಜಗತ್ತಿನ ಚಿತ್ರಕಥೆಗಳು, ಹಾಸ್ಯ ಲೇಖನಗಳು, ನಟನಟಿಯರ ಬದುಕಿನ ಕುರಿತು ಲೇಖನಿಗಳನ್ನು ಪ್ರಕಟಿಸುತ್ತಿದ್ದರು. ಇದರಿಂದ ವಾಸುದೇವ ಶೆಣೈ ಅವರಿಗೆ ಕಲಾವಿದರ ಬಗ್ಗೆ, ಬರಹಗಾರರ ಬಗ್ಗೆ ಇದ್ದ ಕಾಳಜಿ ತಿಳಿಯುತ್ತದೆ.

ಕುಡ್ವಿಯವರ ಜೀವನದ ಮತ್ತೊಂದು ಮಹತ್ವದ ಹೆಜ್ಜೆ ಎಂದರೆ **'ಒಂದಾಣೆ ಮಾಲೆ'** ಎಂಬ ಕಿರು ಪುಸ್ತಕಗಳ ಪ್ರಕಟಣಾ ಕಾರ್ಯ ೨೫ ರಿಂದ ೩೦ ಪುಟಗಳಿಗೆ ಸೀಮಿತವಾದ ಕಿರುಪುಸ್ತಕಗಳನ್ನು ಇಲ್ಲಿ ಪ್ರಕಟಿಸುತ್ತಿದ್ದರು. ಇದರಲ್ಲಿ ಆ ಕಥೆಗಳು ಕಿರುನಾಟಕಗಳು, ಗೀತನಾಟಕ, ಸಾಮಾಜಿಕ ನಾಟಕ, ಮಕ್ಕಳ ನಾಟಕ, ಕವಿತೆಗಳು, ಯಕ್ಷಗಾನಕ್ಕೆ ಸಂಬಂಧಿಸಿದ ಪುಸ್ತಕಗಳು, ಪ್ರವಾಸಕಥನ, ಸ್ಥಳ ಪುರಾಣ, ಗಾದೆ, ಒಗಟು, ಗೃಹವೈದ್ಯ, ಪ್ರಥಮ ಚಿಕಿತ್ಸೆ ಮುಂತಾದ ಅನೇಕ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳು ಸೇರಿವೆ. ಪ್ರತಿವಾರವು ಒಂದೊಂದು ಪುಸ್ತಕ ಪ್ರಕಟವಾಗುತ್ತಿದ್ದು, ತುಂಬಾ ಜನಪ್ರಿಯತೆ ಪಡೆದಿದ್ದವು.

ಕುಡ್ವಿಯವರ ಈ ಕಾರ್ಯವನ್ನು ಸಾಹಿತ್ಯ ಲೋಕದ ಇತಿಹಾಸದಲ್ಲಿಯೇ ಇದೊಂದು ಅದ್ಭುತ ಸಾಹಸ ಎಂದು ಹೊಗಳಿದ್ದಾರೆ. ಈ ಕಾರ್ಯದಿಂದಾಗಿ ಒಂದು ಕಡೆ ಓದುಗರ ಸಂಖ್ಯೆ, ಪುಸ್ತಕ ಕೊಳ್ಳುವವರ ಸಂಖ್ಯೆ ಹೆಚ್ಚಾಯಿತು. ಜೊತೆಗೆ ಬರಹಗಾರರನ್ನು ಪ್ರೇರೆಪಿಸಿತು ಎಂಬುದು ಮುಖ್ಯವಾದ ಅಂಶ. ಓದುಗರ ಸಂಖ್ಯೆ ಕಡಿಮೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ಇಂತಹ ಕಾರ್ಯಗಳು ನಡೆಯಬೇಕಿದೆ.

ನಾಟಕ ಕೃತಿಗಳನ್ನು ರಚಿಸುತ್ತಿದ್ದ ಕುಡ್ವಿಯವರು ಅವುಗಳನ್ನು ರಂಗದ ಮೇಲೆ ಪ್ರಯೋಗಿಸುವುದಕ್ಕೂ ಸಾಕಷ್ಟು ಶ್ರಮಿಸುತ್ತಿದ್ದರು ಎಂಬುದು ಮುಖ್ಯವಾದ ಸಂಗತಿ.

ಪತ್ರಕರ್ತರಾದ ಕುಡ್ವಿಯವರು ಸಾಹಿತ್ಯ ರಚನೆಯಲ್ಲಿ ತೊಡಗಿ ಹುಲುಸಾದ ಸಾಹಿತ್ಯ ಕೃಷಿ ಮಾಡಿದ್ದಾರೆ. ನಾಟಕ, ಕತೆ, ಹರಟೆಗಳು, ಜೀವನ ಚರಿತ್ರೆ, ಸಂಪಾದನೆ ಮುಂತಾದ ಪ್ರಕಾರಗಳನ್ನು ರಚಿಸಿದ್ದಾರೆ. ಇವರ ಕಥೆಗಳ ಮೇಲೆ ಪಂಜೆಮಂಗೇಶರಾಯರ ಪ್ರಭಾವ ಆಗಿರುವುದನ್ನು ಕಾಣಬಹುದು.

ಕುಡ್ವಿಯವರ ಸಾಹಿತ್ಯವು ಮನರಂಜನೆಯ ಜೊತೆಗೆ ನೀತಿ ಪ್ರಧಾನ ಅಂಶಗಳನ್ನು ಒಳಗೊಂಡಿದ್ದು, ಸಮಾಜದ ಬದಲಾವಣೆ ಮತ್ತು ಅಭಿವೃದ್ಧಿಗೆ ಪೂರಕವಾದ ಅಂಶಗಳನ್ನು ಹೊಂದಿವೆ. ಹಲವು ಮಹನೀಯರ ಸ್ನೇಹ ಸಂಪಾದಿಸಿದ್ದ ಇವರು ಶಿಸ್ತು ಮತ್ತು ಕ್ರಮಬದ್ಧ ಜೀವನಕ್ಕೆ ಹೆಸರಾಗಿದ್ದರು. ಸಾಹಿತ್ಯ ಮತ್ತು ಓದುಗರ ವಲಯದ ಮೇಲೆ ಇವರು ಉಂಟು ಮಾಡಿದ ಪ್ರಭಾವ ಪರಿಣಾಮಕಾರಿಯಾದುದು. ಈ ಎಲ್ಲಾ ಅಂಶಗಳಿಂದ ಕುಡ್ವಿಯವರು ಪ್ರಮುಖ ವ್ಯಕ್ತಿಯಾಗಿ ಆದರ್ಶವಾಗಿದ್ದಾರೆ. ಅವರ ಪರಿಚಯದ ಅಗತ್ಯವಿದ್ದು, ಅದನ್ನು ಸಬಿಹಾ ಅವರು ಸರಳ ಮತ್ತು ಸಂಕ್ಷಿಪ್ತವಾಗಿ ನೀಡಿರುವುದು ಗಮನಾರ್ಹ.

೪.೫ ವಿಮರ್ಶಾ ಕೃತಿಗಳು

ಸಬಿಹಾ ಭೂಮಿಗೌಡ ಅವರು ಕಥೆ, ಕವನಗಳಲ್ಲದೇ ವಿಮರ್ಶಾ ಕೃತಿಗಳು ಮತ್ತು ಅನೇಕ ವಿಮರ್ಶ ಲೇಖನಗಳನ್ನು ಬರೆದಿದ್ದಾರೆ. ಇವು ಓದುಗರ ಮೆಚ್ಚುಗೆಯನ್ನು ಪಡೆದುಕೊಂಡು ಉತ್ತಮ ವಿಮರ್ಶಕಿಯ ಸ್ಥಾನ ನೀಡಿದೆ. ಅವರೆ ಹೇಳುವಂತೆ ಅವರ ಮನದ ಒಳಗಿನ ಒತ್ತಡಗಳು ತಮ್ಮ ಕವನಗಳ ನಿರ್ಮಿತಿಗೆ ಕಾರಣವಾದರೆ, ವಿವಿಧ ಸಂಘ ಸಂಸ್ಥೆಗಳ ಅಹ್ವಾನದ ನೆಲೆಯಿಂದ ಬಂದ ಬಾಹ್ಯ ಒತ್ತಡಗಳು ವಿಮರ್ಶ ಲೇಖನಗಳ ನಿರ್ಮಿತಿಗೆ ಕಾರಣವಾಗಿವೆ. ಮಹಿಳಾ ಪರ ಹೋರಾಟಗಾರ್ತಿ ಮತ್ತು ಚಿಂತಕಿಯು ಆಗಿರುವ ಸಬಿಹಾ ಅವರ ಸಾಹಿತ್ಯದ ಕೇಂದ್ರ ಬಿಂದು ಹೆಣ್ಣು. ಅಂತೆಯೇ ಅವರ ವಿಮರ್ಶೆಗಳು ಕೂಡ ಸ್ತ್ರೀ ವಾದಿ ನೆಲೆಯಲ್ಲೆ ಸಾಗಿವೆ.

'ಬಗೆ', **'ನಿಲುಮೆ'**, **'ಅನುಸಂಧಾನ'**, ಇವು ಸಬಿಹಾ ಭೂಮಿಗೌಡ ಅವರ ವಿಮರ್ಶಾ ಲೇಖನಗಳ ಸಂಕಲನ ಕೃತಿಗಳಾಗಿವೆ. ವಿಮರ್ಶಾ ಕ್ಷೇತ್ರವನ್ನು ಆರಿಸಿಕೊಂಡ ಇವರು ಯಶಸ್ಸಿನ ಹಾದಿಯಲ್ಲಿ ನಡೆಯುತ್ತಿದ್ದಾರೆ ಎಂಬುದು ಮುಖ್ಯ. ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡ ಮಹಿಳೆಯರ ಸಂಖ್ಯೆ ಕಡಿಮೆ ಇದ್ದು, ಅದರ ಕೊರತೆಯನ್ನು ಸಬಿಹಾ ಭೂಮಿಗೌಡ ಅವರು ತುಂಬಿದ್ದಾರೆ.

'ಬಗೆ' ಸಬಿಹಾ ಭೂಮಿಗೌಡ ಅವರ ಮೊದಲ ವಿಮರ್ಶಾ ಸಂಕಲನ. ಇದರಲ್ಲಿರುವ ಹೆಚ್ಚು ಲೇಖನಗಳು ಸಾಹಿತ್ಯ ಕೇಂದ್ರಿತ ಚರ್ಚೆಯನ್ನು ಒಳಗೊಂಡಿವೆ. ಅದರಲ್ಲೂ ಮಹಿಳಾ ಸಾಹಿತಿಗಳು ಮತ್ತು ಅವರ ಸಾಹಿತ್ಯವನ್ನು ಕುರಿತದ್ದಾಗಿವೆ. ವಿಮರ್ಶೆಗೆ ತೊಡಗಿದ ಸಂದರ್ಭದಲ್ಲಿ ಹುಟ್ಟಿರುವ ಪ್ರಶ್ನೆಗಳು ಮಹಿಳಾ ಸಾಹಿತ್ಯ ಚರಿತ್ರೆಯ ಪುನಾರಚನೆಗೆ ಮತ್ತು ಬೆಳವಣಿಗೆಗೆ ಪೂರಕವಾಗಿವೆ.

'ಬಗೆ' ಕೃತಿಯಲ್ಲಿ ಸಬಿಹಾ ಅವರ ಮುಖ್ಯ ಕಾಳಜಿ ಇರುವುದು ಸಾಹಿತ್ಯ ಸೃಷ್ಟಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತಿಗಳ ಕೊಡುಗೆ ವಿಶಿಷ್ಠವಾದುದು ಎಂದು ತೋರಿಸುವುದರ ಕಡೆಗೆ. ಆ ನಿಟ್ಟಿನಲ್ಲಿ ಪರಿಶ್ರಮದ ಮತ್ತು ಅಚ್ಚುಕಟ್ಟದ ಕೆಲಸ ಮಾಡಿ ಸೂಕ್ತವಾದ ತೀರ್ಮಾನ ಕೈಗೊಂಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತಿಗಳಿಗೆ ದೊರೆತ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ವಾತಾವರಣ ಮುಖ್ಯವಾಗಿತ್ತು ಎಂಬುದನ್ನು ಗುರುತಿಸಿ. ಅದರಿಂದಲೇ ಅಲ್ಲಿನವರು ಸಾಹಿತ್ಯ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಲು ಸಾಧ್ಯವಾದದನ್ನು ತಿಳಸಿದ್ದಾರೆ.

'ಬಗೆ' ಕೃತಿಯ ಎರಡನೇ ಭಾಗದಲ್ಲಿ ಮುಖ್ಯವಾಗಿ 'ಜನ್ನನ ಕಾವ್ಯಗಳು; ಹೆಣ್ಣನ್ನು ಪಳಗಿಸುವ ವ್ಯವಸ್ಥೆಯ ಕನ್ನಡಿ' ಮತ್ತು 'ಶಕುಂತಲೆಗೆ ಹೊನ್ನ ಶೂಲ' ಎಂಬ ಲೇಖನಗಳು ಮುಖ್ಯವಾಗಿವೆ. ಇದರಲ್ಲಿ ಹೆಣ್ಣು ಹೇಗೆ ಪುರುಷನ ನಿರ್ದೇಶನದಲ್ಲಿ ನಡೆಯಬೇಕಾಗುತ್ತದೆ. ಆಕೆಯನ್ನು ಪುರುಷ ತನಗಿಚ್ಛೆಬಂದಂತೆ, ಹೇಗೆ ಪಳಗಿಸುತ್ತಾನೆ. ಒಂದು ವೇಳೆ ಆಕೆ ಹಾಗೆ ನಡೆಯದಿದ್ದರೆ, ಪಳಗದಿದ್ದರೆ ಆಕೆಯ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಕೆಲಸ ಮಾಡುತ್ತಾರೆ. ಎಂಬುದನ್ನು ಮೊದಲ ಲೇಖನದಲ್ಲಿ ತಿಳಿಸಿದ್ದಾರೆ. ಮಾಸ್ತಿಯವರ ಕಥೆಯನ್ನು ಆಧರಿಸಿ ಬರೆದ 'ಶಕುಂತಲೆಗೆ ಹೊನ್ನ ಶೂಲ' ಎಂಬ ಲೇಖನದಲ್ಲಿ ಶಕುಂತಲೆ ರಾಜನನ್ನು ವರಿಸಿದ ನಂತರದಲ್ಲಿ ಅನುಭವಿಸಿದ ಮಾನಸಿಕ ನೋವನ್ನು ಗಮನಿಸಿದ್ದಾರೆ. ಮುಖ್ಯವಾಗಿ "ಮಾಸ್ತಿಯವರು ಮಹಿಳೆಯ ನೋವನ್ನು ಗ್ರಹಿಸಿಯೂ ಉದಾತ್ತೀಕರಿಸುವ ನೆಲೆಯಲ್ಲಿ ಅವಳನ್ನು ಹೊನ್ನಶೂಲಕ್ಕೆ ಏರಿಸಿದ್ದಾರೆ." ಎಂಬುದನ್ನು ಗುರುತಿಸಿದ್ದಾರೆ. ಜೊತೆಗೆ ವೈದೇಹಿಯವರ 'ಶಕುಂತಲೆಯೊಂದಿಗೆ ಕಳೆದ ಒಂದು ಅಪರಾಹ್ನ' ಕಥೆಯಲ್ಲಿ ಮಹಿಳೆಯೋರ್ವಳು ಮತ್ತೋರ್ವ ಮಹಿಳೆಯ ನೋವಿಗೆ ಪ್ರತಿಸ್ಪಂದಿಸುವ ರೀತಿಯನ್ನು ಸಹ ಹೇಳುತ್ತಾರೆ.

ಒಟ್ಟಾರೆಯಾಗಿ 'ಬಗೆ' ವಿಮರ್ಶಾ ಕೃತಿಯು ಒಂದು ಉತ್ತಮ ವಿಮರ್ಶಾ ಕೃತಿಯಾಗಿದ್ದು. ಸಬಿಹಾ ಅವರ ಮಹಿಳಾ ಪರಚಿಂತನೆ ಕಾಳಜಿಗಳನ್ನು ಅನಾವರಣಗೊಳಿಸುತ್ತದೆ.

'ನಿಲುಮೆ' ಸಬಿಹಾ ಭೂಮಿಗೌಡ ಅವರ ಎರಡನೇ ವಿವರ್ಶಾ ಕೃತಿ. ಇದರಲ್ಲಿ ಮಹಿಳಾ ಕೇಂದ್ರಿತ ಮತ್ತು ಸಾಹಿತ್ಯ ಕೇಂದ್ರಿತ ಎಂಬ ಎರಡು ಬಗೆಯ ಲೇಖನಗಳನ್ನು ನೋಡಬಹುದು. ಸ್ತ್ರೀಯನ್ನು ಮುಖ್ಯವಾಗಿಟ್ಟುಕೊಂಡು ರಚಿಸಿರುವ ಲೇಖನಗಳಲ್ಲಿ ಸಾಹಿತ್ಯ ಮತ್ತು ಸಮಾಜದಲ್ಲಿ ಹೆಣ್ಣನ್ನು ಪರಿಗಣಿಸಿರುವ ರೀತಿಯನ್ನು ಕುರಿತು ವಿಮರ್ಶೆ ಮಾಡಿದ್ದಾರೆ. ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಹೆಣ್ಣು ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳುವಲ್ಲಿ ತಡೆಯುಂಟಾದ ಬಗೆಗಳನ್ನು ಗುರುತಿಸಿದ್ದಾರೆ. ಮಹಿಳಾ ಸಾಹಿತಿಗಳೇ ಚಿತ್ರಿಸಿರುವ ಹೆಣ್ಣಿನ ಜೀವನ, ಆಕೆಯ ನೆಲೆಗಳನ್ನು ವಿಮರ್ಶಿಸಿದ್ದಾರೆ.

ಸಾಹಿತ್ಯವನ್ನು ಕೇಂದ್ರವಾಗಿಟ್ಟುಕೊಂಡು ರಚಿಸಿರುವ ವಿಮರ್ಶಾ ಲೇಖನಗಳಲ್ಲಿ ಹಿರಿಯ ಸಾಹಿತಿಗಳ ಕೃತಿಗಳಲ್ಲಿ ಹೆಣ್ಣನ್ನು ಹೇಗೆ ಚಿತ್ರಿಸಲಾಗಿದೆ ಎಂಬುದನ್ನು ಗುರುತಿಸಿದ್ದಾರೆ. ಅದಕ್ಕೆ ಸಬಿಹಾ ಅವರು ಆರಿಸಿಕೊಂಡಿರುವುದು ಕಾರಂತರು, ಮಾಸ್ತಿ, ಕಂಬಾರರು, ಅಡಿಗರು ಮುಂತಾದವರು. ಇವರ ಕೃತಿಗಳಲ್ಲಿ ಬರುವ ಸ್ತ್ರೀ ಪಾತ್ರಗಳು ಸಂಪ್ರದಾಯದ ನಂಬಿಕೆ, ನಿಷ್ಠೆ, ಆಚರಣೆಗಳಿಗೆ ಬದ್ಧವಾಗಿ ನಡೆಯುತ್ತವೆ ಎಂಬುದನ್ನು ಗುರುತಿಸುತ್ತಾರೆ. ಮೇಲ್ನೋಟಕ್ಕೆ ಇವರಲ್ಲಿ ಸ್ತ್ರೀಪರ ಒಲವು ಇದೆ ಎಂದು ಅನಿಸಿದರೂ ಆಳವಾದ ಓದಿನಿಂದ ವಿರುದ್ಧವಾದ ತೀರ್ಮಾನಕ್ಕೆ ಎಡೆ ನೀಡುತ್ತವೆ. ಅದಲ್ಲದೆ ಎಲೆಮರೆ ಕಾಯಿಯಂತೆ ಬದುಕಿದ ಸಾಹಿತಿಗಳ ಸಾಹಿತ್ಯಕ ಮೌಲ್ಯಗಳನ್ನು ಕಟ್ಟಿಕೊಡುವ ಕೆಲಸ ಮಾಡಿದ್ದಾರೆ.

'ಅನುಸಂಧಾನ' ಸಬಿಹಾ ಭೂಮಿಗೌಡ ಅವರ ಮೂರನೆಯ ವಿಮರ್ಶಾ ಕೃತಿ. ವಿಮರ್ಶಕಿಯಾಗಿ ಸಬಿಹಾ ಅವರು ಬೆಳೆಯುತ್ತಿದ್ದಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಈ ಕೃತಿಯಲ್ಲಿ 'ನಿಲುಮೆ' ಕೃತಿಯಲ್ಲಿ ಸೇರಿರುವ ಎರಡು ಲೇಖನಗಳು ಮತ್ತೆ ಸೇರಿಕೊಂಡಿದ್ದು ಒಂಬತ್ತು ಲೇಖನಗಳಿವೆ. ಈ ಕೃತಿಯಲ್ಲಿ ಸಾಹಿತ್ಯ ವಿಮರ್ಶೆಗೆ ಹೆಚ್ಚಿನ ಆದ್ಯತೆ ನೀಡಿರುವುದು ಕಂಡುಬರುತ್ತದೆ. ಆದರೆ ತಮ್ಮ ಆಸಕ್ತಿಯ ಕೇಂದ್ರ ಮಹಿಳಾ ಲೋಕವನ್ನು ಮರೆತಿಲ್ಲ ಎಂಬುದನ್ನು ಗಮನಿಸಬಹುದು.

'ಎಂ ಗೋವಿಂದ ಪೈಯವರ 'ಯೇಸು–ಕೃಷ್ಣ' ಲೇಖನದಲ್ಲಿ ಯೇಸು ಮತ್ತು ಕೃಷ್ಣನ ವ್ಯಕ್ತಿತ್ವಗಳನ್ನು ಹೋಲಿಸುವುದರ ಮೂಲಕ ಇಬ್ಬರಲ್ಲೂ ಇದ್ದ ಸಮಾನ ಅಂಶಗಳನ್ನು ಗುರುತಿಸಿ ಅವರು ಅಭಿನ್ನರು ಎಂಬ ನಿಲುವಿಗೆ ಬರುತ್ತಾರೆ. ಸತ್ಯವನ್ನು ಹತ್ತಿಕ್ಕುವ ಪ್ರಯತ್ನ ಮಾಡಿದರೂ ಸಹ ಅದಕ್ಕೆ ಜಯ ಸಲ್ಲುತ್ತದೆ. ಸತ್ಯ ಎಂಬುದು ಸೂರ್ಯನಂತೆ ಸೂರ್ಯನಿಗೆ ಧರ್ಮ, ಜಾತಿ, ಭಾಷೆಯ ಗಡಿಯಿಲ್ಲ, ಅಂತೆಯೇ ಎಂ.ಗೋವಿಂದ ಪೈ ಅವರ ಮನೋಧರ್ಮ ಕೂಡ ಅದನ್ನು ಮೀರಿ ಯೋಚಿಸುತ್ತದೆ ಎಂಬುದನ್ನು ತಿಳಿಸುತ್ತಾರೆ.

'ಪ್ರೊ.ರಾಗೌ ಕಾವ್ಯ– ಭಾಷೆ ಮತ್ತು ಅಭಿವ್ಯಕ್ತಿ' ಎಂಬ ಲೇಖನದಲ್ಲಿ ಸಬಿಹಾ ಅವರು ರಾಗೌ ಅವರ ಸಾಹಿತ್ಯದ ಮೌಲ್ಯಮಾಪನ ಮಾಡುವ ಮತ್ತು ಪ್ರಧಾನ ಸಾಹಿತ್ಯ ಧಾರೆಯಲ್ಲಿ ಅವರ ಸಾಹಿತ್ಯದ ಸ್ಥಾನ ನಿರ್ಣಯ ಮಾಡುವಲ್ಲಿ ಸಫಲರಾಗಿದ್ದಾರೆ. ಶ್ರೀಮಂತ ಭಾಷಾ ಕಣಜದಂತಿರುವ ರಾಗೌ ಅವರು ಅದನ್ನು ತಮ್ಮ ಕಾವ್ಯಗಳಲ್ಲಿ ಕಟ್ಟಿಟ್ಟಿದ್ದಾರೆ. ಬಹು ಪ್ರಕಾರಗಳಲ್ಲಿ ಸಮಾನ ಆಸಕ್ತಿಯನ್ನು ಹೊಂದಿ ಇಂದಿಗೂ ಶ್ರಮಿಸುತ್ತಿರುವ ಅವರನ್ನು ಹೆಚ್ಚಾಗಿ ಗುರುತಿಸುತ್ತಿಲ್ಲದಿರುವುದು ತುಂಬಲಾರದ ನಷ್ಟವೇ ಸರಿ ಎಂಬ ಅಂಶವನ್ನು ಗುರುತಿಸಿದ್ದಾರೆ. ಗೋಪಾಲಕೃಷ್ಣ ಅಡಿಗರು ನವ್ಯಕಾವ್ಯ ಪ್ರವರ್ತಕರೆಂದೇ ಹೆಸರಾಗಿದ್ದಾರೆ. ಆದರೆ ಅವರು ತಮ್ಮ ಕಾವ್ಯಗಳಲ್ಲಿ ಹೆಣ್ಣನ್ನು ಕಡೆಗಣಿಸಿದ್ದಾರೆ. 'ಪುರುಷ ಭಾಷೆ'ಯನ್ನೆ ತಮ್ಮ ಕಾವ್ಯಗಳಲ್ಲಿ ಬಳಸಿದ್ದಾರೆ ಎಂಬುದನ್ನು ಹೇಳಿದ್ದಾರೆ. ಕಂಬಾರರ 'ಸಿಂಗಾರವ್ವ ಮತ್ತು ಅರಮನೆ' ಕಾದಂಬರಿಯಲ್ಲಿ ಹೆಣ್ಣನ್ನು ಪಿತೃಪ್ರಧಾನ ವ್ಯವಸ್ಥೆಯ ಅಡಿಯಲ್ಲೇ ಇರಿಸಲು ಪ್ರಯತ್ನಿಸುವ ಸಮಾಜ ವ್ಯವಸ್ಥೆಯನ್ನು ಟೀಕಿಸುತ್ತಾರೆ. ಹೆಣ್ಣನ್ನು ಸಂಪ್ರದಾಯಬದ್ಧ ಚೌಕಟ್ಟಿನಲ್ಲೆ ಇಟ್ಟು ಹಾಗೇ ನಡೆಸಿಕೊಳ್ಳುವುದನ್ನು ವಿರೋಧಿಸುತ್ತಾರೆ.

'ದಕ್ಷಿಣ ಕನ್ನಡ ಜಿಲ್ಲೆಯ ಸ್ವಾತಂತ್ರ್ಯಪೂರ್ವದ ಲೇಖಕಿಯರು' ಎಂಬ ಲೇಖನದಲ್ಲಿ ಸಬಿಹಾ ಅವರು ಕನ್ನಡ ಸಾಹಿತ್ಯಕ್ಕೆ ವಿಶಿಷ್ಠ ಕೊಡುಗೆ ನೀಡಿದ ಲೇಖಕಿಯರನ್ನು ಬೆಳಕಿಗೆ ತರುವ ಪ್ರಯತ್ನ ಮಾಡಿದ್ದಾರೆ. ಕಥೆ, ನಾಟಕ, ಕಾದಂಬರಿ ಮುಂತಾದ ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಹಿತ್ಯ ರಚಿಸಿದವರ ಕಿರು ಪರಿಚಯ ಇಲ್ಲಿದ್ದು. ಅವರ ವ್ಯಕ್ತಿತ್ವ ಮತ್ತು ಸಾಹಿತ್ಯದ ಮೌಲ್ಯವನ್ನು ಸಂಕ್ಷಿಪ್ತವಾಗಿ ಕಟ್ಟಿಕೊಟ್ಟಿದ್ದಾರೆ.

'ಕನ್ನಡದಲ್ಲಿ ಮಹಿಳಾ ಆತ್ಮಕತೆಗಳು' ಎಂಬ ಲೇಖನವು ಮುಖ್ಯವಾದುದಾಗಿದೆ. ಸಾಹಿತ್ಯ ರಚನೆಗೆ ತೊಡಗಲು ಹಿಂದೆ ಮುಂದೆ ಯೋಚಿಸುವ ಮಹಿಳೆಯರು ಆತ್ಮಕಥೆಗಳನ್ನು ಬರೆದಿರುವುದು ತೀರ ವಿರಳ. ಆತ್ಮಕಥೆಗಳನ್ನು ಬರೆದುದನ್ನು ಕುರಿತು ಸತಃಹ ಲೇಖಕಿಯರು ನೀಡಿದ ಪ್ರತಿ ಕ್ರಿಯೆಗಳನ್ನು ಕಟ್ಟಿಕೊಡುವುದರ ಮೂಲಕ ಹೆಣ್ಣು ತನ್ನ ಜೀವನವನ್ನು ತೆರೆದಿಡಲು ಮುಂದಾಗಬೇಕೆಂಬುದನ್ನು ತಿಳಿಸುತ್ತಾರೆ. ಜೊತೆಗೆ ವಿವಿಧ ರಂಗ ಮತ್ತು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಂದರೆ ರಾಜಕೀಯ, ಸಮಾಜ, ಸಾಹಿತ್ಯ ಮುಂತಾದವುಗಳಿಗೆ ಸಂಬಂಧಿಸಿದಂತೆ ಆತ್ಮಚರಿತ್ರೆಗಳು ರಚನೆಯಾಗಿವೆ ಎಂಬುದನ್ನು ಗುರುತಿಸಿದ್ದಾರೆ.

ಈ ಲೇಖನದ ಅಥವಾ ಕೃತಿಯ ಕೊನೆಯಲ್ಲಿ ಸಮಗ್ರ ಮಹಿಳಾ ಆತ್ಮಕಥೆಗಳ ಪಟ್ಟಿಯನ್ನು ನೀಡಿರುವುದು ಬಹು ಮುಖ್ಯ ಅಂಶವಾಗಿದೆ.

ಇದಲ್ಲದೆ ಸಬಿಹಾ ಭೂಮಿಗೌಡ ಅವರು ಪತ್ರಿಕೆಗಳಲ್ಲಿ ಮತ್ತು ನಿಯತಕಾಲಿಕೆಗಳಲ್ಲಿ ಅನೇಕ ವಿಮರ್ಶಾ ಲೇಖನಗಳನ್ನು ಪ್ರಕಟಿಸುತ್ತಿದ್ದು, ವಿಮರ್ಶಾ ಕ್ಷೇತ್ರಕ್ಕೆ ಮತ್ತಷ್ಟು ಸೇವೆಯನ್ನು ನೀಡುತ್ತಿರುವುದು ಗಮನಾರ್ಹ ಬೆಳವಣಿಗೆಯಾಗಿದೆ.

ಅಡಿಟಿಪ್ಪಣಿಗಳು

೧. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ: ಸಂ. ಎಚ್.ಎಸ್.ಶ್ರೀಮತಿ– '೧೯೭೫ರ ಅನಂತರದ ಕನ್ನಡ ಮಹಿಳಾ ಸಾಹಿತ್ಯ'– ಡಾ. ಕೆ.ಆರ್. ಸಂಧ್ಯಾರೆಡ್ಡಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.೨೦೦೬, ಪು. ೫೯೨

೨. ನಾದಲೀಲೆ; ಸಂ. ವಾಮನ ಬೇಂದ್ರೆ, ಶ್ರೀಮಾತಾ ಪ್ರಕಾಶನ, ಹುಬ್ಬಳ್ಳಿ– ೨೦೦೩, ಪು. ೭೫

೩. ಕಡಲ ತಡಿಯ ಮನೆ; ಸಬಿಹಾಭೂಮಿಗೌಡ, ಮುನ್ನುಡಿ–ವಿಷ್ಣುನಾಯ್ಕ, ಲಡಾಯಿ ಪ್ರಕಾಶನ, ಗದಗ– ೨೦೦೯, ಪು. ೭

೪. ನಮ್ಮ ಮಾನಸ(ನಿಯತಕಾಲಿಕೆ)–ಕನ್ನಡ ಮಹಿಳಾ ಕಾವ್ಯ ಇಂದು–ಸ.ಉಷಾ. ಸಂ.ಮಂಡಳಿ– ಚಂಪಾವತಿ.ಎಚ್.ಎಸ್ ಹಾಗೂ ಇತರರು. ಅಕ್ಟೋಬರ್.೨೦೦೮, ಪು. ೧೮

೫. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ವಿವಿಧ ಲೇಖಕರು, ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು. ೨೦೦೯, ಪು. ೬೫

೬. ನಮ್ಮ ಮಾನಸ(ನಿಯತಕಾಲಿಕೆ)– ರಶ್ಮಿ ಮಯೂರ, ಪರಿಸರವಾದಿ ಉದ್ಧೃತ: ಮಹಿಳೆಯರೇ ಮತ್ತು ಮಹಿಳೆಯರೆ, ಸಂಪಾದಕ ಮಂಡಳಿ– ಚಂಪಾವತಿ.ಎಚ್.ಎಸ್ ಹಾಗೂ ಇತರರು. ಆಗಸ್ಟ್–೧೧, ಪು. ೧೩

೭. ನಮ್ಮ ಮಾನಸ(ನಿಯತಕಾಲಿಕೆ)– ಹೊಸ ಉದ್ಯೋಗಾವಕಾಶಗಳಲ್ಲಿ ಮಹಿಳೆ– ಚಂಪಾವತಿ.ಎಚ್.ಎಸ್, ಸಂಪಾದಕ ಮಂಡಳಿ– ಚಂಪಾವತಿ.ಎಚ್.ಎಸ್ ಹಾಗೂ ಇತರರು, ಜುಲೈ–೨೦೧೦. ಪು. ೧೧

ಅಧ್ಯಾಯ ೫

ಭಾಷೆ ಮತ್ತು ಅಭಿವ್ಯಕ್ತಿ

ನಮ್ಮ ಅನುಭವ, ಭಾವನೆಗಳು, ಚಿಂತನೆಗಳನ್ನು ಶಬ್ದಗಳ ಮೂಲಕ ಹೊರಹಾಕುತ್ತೇವೆ. ಆದರೆ ಅದು ಪೂರ್ಣ ಪ್ರಮಾಣದಲ್ಲಿ ನಡೆಯುತ್ತದೆಯೋ ಇಲ್ಲವೋ ತಿಳಿಯದು. ಆದರೂ ಅದು ಅನಿವಾರ್ಯ ಹೀಗೆ ಹೊರಹಾಕಬೇಕಾದರೆ ಭಾಷೆ ಬಗೆಗಿನ ಜ್ಞಾನ, ಶಬ್ದಗಳ ಮೇಲಿನ ಹಿಡಿತ ಇರಬೇಕು, ಆಗ ಮಾತ್ರ ಸರಿಯಾದ ರೀತಿಯಲ್ಲಿ ಭಾಷೆಯನ್ನು ಬಳಸಿಕೊಂಡು ಅಭಿವ್ಯಕ್ತಗೊಳಿಸಲು ಸಾಧ್ಯ.

ಸಬಿಹಾ ಭೂಮಿಗೌಡ ಅವರು ಭಾಷೆಯ ಬಗೆಗಿನ ಜ್ಞಾನ, ಶಬ್ದಗಳ ಮೇಲೆ ಹಿಡಿತವನ್ನು ಸಾಧಿಸಿದ್ದಾರೆ. ಅದು ಅವರ ಕೃತಿಗಳಿಂದ ತಿಳಿಯುತ್ತದೆ. ಉತ್ತರ ಕರ್ನಾಟಕದ ಜನರ ಭಾಷೆಯನ್ನು ಹೆಚ್ಚಾಗಿ ಬಳಸಿಕೊಂಡು ತಮ್ಮ ಉದ್ದೇಶ, ಧೋರಣೆಗಳನ್ನು ಜೀವನ ಕ್ರಮವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಅಲ್ಲಿನ ಭಾಷೆಯನ್ನು ಸೂಕ್ಷ್ಮವಾಗಿ ಗ್ರಹಿಸಿ ತಮ್ಮದನ್ನಾಗಿಸಿಕೊಂಡಿದ್ದಾರೆ. ಅದರಿಂದಲೇ ಅವರ ಸಾಹಿತ್ಯ ಭಾಷೆ ಗಟ್ಟಿಗೊಂಡು ಕೃತಿಗಳು ಉತ್ತಮ ಎನಿಸಿಕೊಂಡಿವೆ.

ಸಬಿಹಾ ಭೂಮಿಗೌಡ ಅವರ ಸಾಹಿತ್ಯದ ಅಭಿವ್ಯಕ್ತಿಯ ಸ್ವರೂಪವು ಉತ್ತಮವಾಗಿದೆ. ಸರಳ, ಭಾಷೆ ನೇರ ನಿರೂಪಣಾ ಕ್ರಮ, ಕಥನ ತಂತ್ರವು, ಓದುಗರನ್ನು ಸೆಳೆದು ಓದಿಸಿಕೊಂಡು ಹೋಗುತ್ತವೆ. 'ಕಡಲ ತಡಿಯ ಮನೆ' ಕಥಾ ಸಂಕಲನದ 'ತುಪ್ಪ ಮೆತ್ತಿದ ಕನ್ನಡಿ' ಕಥೆಯಲ್ಲಿ ಬರುವ ಈ ಸಾಲುಗಳನ್ನು ಗಮನಿಸಿದರೆ–

"ಎದ್ದೇನಬೇ"

"ಎದ್ನೆವ್ವ, ನೀನ್ ಎದ್ಯಾ?"

"ಹೂಂ ಗೆದ್ನೆವ್ವಾ" – ಎಂದು ದಿನ ಆರಂಭಿಸುವ ಜನರನ್ನು ಕಾಣಬಹುದು. ಇಲ್ಲಿ ಎದ್ಯಾ ಎನ್ನುವ ಪ್ರಶ್ನೆಗೆ ಗೆದ್ನೆವ್ವಾ ಎಂಬ ಪದದ ಬಳಕೆ ಜೀವನದ ಗೆಲುವು, ಸಾವನ್ನು ಗೆದ್ದು ಹೊಸ ದಿನವನ್ನು ಕಂಡ ಬಗೆಯನ್ನು ತಿಳಿಸುತ್ತದೆ.

'ಅಪೂರ್ಣರು' ಕಥೆಯಲ್ಲಿ ಬರುವ ಫಕೀರಪ್ಪನ ಮಾತುಗಳ ಗಮನಿಸಬಹುದು.

"ಸಾಹೇಬ್ರ, ಕಷ್ಟ ಮನ್ಸ್ಯಾರಿಗೆ ಬರ್ದ ಮರಕ್ಕ ಬರತ್ತಾ ಮನ್ಸಿಗೆ ಕಷ್ಟಾ ಮಾಡ್ಕೊಬ್ಯಾಡ್ರಿ.....ಎಲ್ಲ ಸರಿಹೋಗತ್ತ. ಆ ಶಿವಾ ಕಾಪಾಡ್ತಾನ"

"ಅಕ್ಕಾರ ಏನರ ಇಚ್ಛಾ ಐತೇನ್ರಿ? ನಿಮ್ಮ ಹಿರೀ ಮಗ್ಳು ಶರೀಫಾನ್ನ ಈಗರ ಕರಸ್‌ಬೇಕೇನ್ರಿ?.....ನೀವು ಹಗಲ್ಹಗಲ ಬಾಗ್ಲಾ ನೋಡೂದ್ ನೋಡಿದ್ರ.....ಯಾಕೋ ಹಂಗ್ ಅನ್ನಿಸ್ತು ಒಂದ್ ಮಾತ್ ಹೇಳ್ಲೇನ್ರಿ?"

"ಅಣ್ಣಾರ.....ಆಗೂದು ಆಗಿ ಹೋಗ್ಯದೆ. ಇಂಥಾ ವ್ಯಾಳ್ಯಾದಾಗೂ ಹ್ಯಾವಾ ಇಟ್ಕೋಬಾರ್ದು....."

ಈ ಮಾತುಗಳು ಆತನ ಸಮಾಜದ ಭಾಷೆಯನ್ನು ಪ್ರತಿನಿಧಿಸುವಂತಿದೆ. ಮತ್ತು ಅವರ ಮಾತುಗಳಲ್ಲಿ ಪ್ರೀತಿ, ಕಳಕಳಿ ಹೇಗೆ ವ್ಯಕ್ತವಾಗಿದೆ ಎಂಬುದನ್ನು ಸಹ ತಿಳಿಯಬಹುದು.

'ಗೆರೆಗಳು' ಕಥಾ ಸಂಕಲನದ **'ಗೆರೆಗಳು'** ಕಥೆಯಲ್ಲಿನ **'ರಮೇಶ'**ನ ಮಾತುಗಳು – **"ಹೂಂ.....ತೆಗ್ದೀಯಲ್ಲ ನಿನ್ನ ರಗಳೇ.....ಹಣದ ಚಿಂತೆ ನಿನಗ್ಯಾಕೆ? ಅದ್ಹಾಗೋ ಮಾತಿದ್ರಾಯ್ತು, ನಿನ್ ಮನಸ್ ಹೇಳು"**

"ಅದ್ಯಾಕೆ ಹಾಗೆ ಹಿಂಜಿ ಹಿಂಜಿ ಮಾತಾಡ್ತೀ? ಏನ್ ಬೇಕು ಅದನ್ನ ನೇರವಾಗಿ ಹೇಳಿದ್ರೆ ಆಗಲ್ವಾ ನಿಂಗೆ"

ಎಂಬುವು ಪುರುಷನ ಅಹಂ ಮತ್ತು ಗಡುಸುತನಕ್ಕೆ ಸಾಕ್ಷಿಯಾಗಿವೆ.

'ವಿಮಲಾ'ಳ ಮಾತುಗಳನ್ನು ಗಮನಿಸುವುದಾದರೆ **"ಮತ್ತೆ......ಅದ್ಕೆಲ್ಲ ಹಣದ ವ್ಯವಸ್ಥೆ.....?"**

" ಸಾರಿ, ಸಾರಿ, ನಾನು ಅತ್ತಾ ಇಲ್ಲ .....ಸುಮ್ನೇ...." ಎನ್ನುವಲ್ಲಿ ಹೆಣ್ಣು ಗಂಡಿನ ಮುಂದೆ ತನ್ನ ಭಾವನೆಗಳನ್ನು ಅನಿಸಿಕೆಗಳನ್ನು ನೋವುಗಳನ್ನು ನೇರವಾಗಿ ಹೇಳಲಾಗದಿರುವ ಪರಿಸ್ಥಿತಿಯನ್ನು ಕಾಣಬಹುದು.

ಸಬಿಹಾ ಅವರ ಕವನಗಳನ್ನು ಗಮನಿಸಿದರೆ ಅಲ್ಲಿ ಹೆಣ್ಣು ತನ್ನ ಮನಸ್ಸನ್ನು, ನೆನಪುಗಳನ್ನು, ಬೇಸರವನ್ನು ವ್ಯಕ್ತಪಡಿಸಿರುವುದನ್ನು ಗಮನಿಸಬಹುದು. ಇಲ್ಲಿ ಸರಳ, ನೇರ ಮಾತುಗಳ ಮೂಲಕ ಹೇಳಿರುವುದು ಸಾಮಾನ್ಯವಾಗಿದ್ದರೂ ಪರಿಣಾಮಕಾರಿಯಾಗಿದೆ. **'ಅಡುಗೆ'** ಕವನದಲ್ಲಿನ ಈ ಸಾಲುಗಳನ್ನು ಗಮನಿಸಿದರೆ–

ಓದು ಉದ್ಯೋಗದಲ್ಲಿ ಸರಿಸಾಟಿ

ಬೌದ್ಧಿಕ ಸಾಹಚರ್ಯಕೆ ನಿತ್ಯ ಸಂಗಾತಿ

ಪಾಕ ಶಾಲೆಗೆ ಮಾತ್ರ ಆತ ಅನ್ಯ!

ನಾನು ಒಬ್ಬಂಟಿ'

ಎಂಬ ಸಾಲುಗಳಲ್ಲಿನ ವಿಷಯ ಸಾಮಾನ್ಯವೆನಿಸಿದರು ಲಿಂಗತಾರತಮ್ಯ ರೀತಿಯನ್ನು ನಯವಾಗಿ ಸೂಚಿಸುತ್ತದೆ.

ಪ್ರಾದೇಶಿಕ ಭಾಷೆಯನ್ನು ಸಮರ್ಪಕವಾಗಿ ಬಳಸಿಕೊಂಡಿರುವ ಸಬಿಹಾ ಅವರು ಪ್ರಬಂಧಗಳಲ್ಲಿ ನೇರ ಮತ್ತು ಸರಳವಾಗಿ ವಿಷಯ ನಿರೂಪಣೆ ಮಾಡಿದ್ದು ಗಾದೆಗಳನ್ನು ಸೂಕ್ತ ಮತ್ತು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಜನಪದರ ಅನುಭವದ ಆಳದಿಂದ ರೂಪಿತವಾಗಿರುವ ಗಾದೆಗಳು ಕಣ್ಮರೆಯಾಗುತ್ತಿರುವ ಸಂಧರ್ಭದಲ್ಲಿ, ವಿಷಯ ಮನಮುಟ್ಟಲು 'ಗಾದೆಗಳು' ಪ್ರಮುಖ ಪಾತ್ರವಹಿಸುತ್ತವೆ. ಎಂಬುದನ್ನು ಅರಿತು ಬಳಸಿರುವುದು ಅದರ ಮಹತ್ವ ತಿಳಿಸುತ್ತದೆ.

ಒಟ್ಟಾರೆಯಾಗಿ ಸಬಿಹಾ ಅವರಿಗೆ ಭಾಷೆ ಒಗ್ಗಿಕೊಂಡಿದ್ದು ಕಥನ, ಶೈಲಿ, ತಂತ್ರ, ಕಲೆ, ನಿರೂಪಣಾ ದಾಟಿ, ಅಭಿವ್ಯಕ್ತಿಯ ಸ್ವರೂಪ ಎಲ್ಲವೂ ಅಚ್ಚುಕಟ್ಟಾಗಿ ಸಾಗುತ್ತಿದ್ದು, ಉತ್ತಮ ಸಾಹಿತ್ಯ ಸೃಷ್ಟಿಯ ಹಾದಿಯಲ್ಲಿ ನಡೆಯುತ್ತಿದ್ದಾರೆಂಬುದು ಸತ್ಯ.

ಅಧ್ಯಾಯ ೬

ಉಪಸಂಹಾರ

ಸಾಹಿತ್ಯವು ಮನುಷ್ಯ, ಮನುಷ್ಯನ ಜೀವನ, ಆ ಮೂಲಕ ಸಮಾಜವನ್ನು ಅರಿಯಲು ಮುಖ್ಯ ಸಾಧನವಾಗಿದೆ. ಸಾಹಿತಿಯು ತನ್ನ ಜೀವನದಲ್ಲಿ ತನಗಾದ ಅನುಭವ, ಕಂಡು ಕೇಳಿದ ವಿಚಾರಗಳೆಲ್ಲವನ್ನು ಶಬ್ದಗಳ ಮೂಲಕ ಕಟ್ಟಿಕೊಡುತ್ತಾನೆ. ಅದರಲ್ಲಿ ಸಮಾಜದಲ್ಲಿರುವ ಒಳಿತು ಕೆಡುಕುಗಳ ಚಿತ್ರಣ ಇರುತ್ತದೆ. ಸಾಹಿತ್ಯವನ್ನು ಓದುವುದರ ಮೂಲಕ ಒಳಿತನ್ನು ತಿಳಿದು ಸಂತೋಷಿಸಿ ಅದನ್ನು ಅಳವಡಿಸಿಕೊಳ್ಳಲು, ಕೆಡುಕನ್ನು ಅರಿತು ಅದರಿಂದ ದೂರ ಉಳಿಯಲು ಸಾಧ್ಯವಾಗುತ್ತದೆ. ಇದರಿಂದ ಜೀವನ ಮತ್ತು ಸಮಾಜ ಬದಲಾಗಿ ಸ್ವಸ್ಥತೆ ಉಂಟಾಗಲು ಸಾಧ್ಯವಾಗುತ್ತದೆ. ಹಾಗಾಗಿಯೇ ಸಾಹಿತ್ಯದ ಓದು ಮುಖ್ಯ ಮತ್ತು ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ "ಸಬಿಹಾ ಭೂಮಿಗೌಡ ಅವರ ಸಾಹಿತ್ಯದ ಅಧ್ಯಯನ" ಎಂಬ ನಿಬಂಧದಲ್ಲಿ ಅವರ ಸಾಹಿತ್ಯವನ್ನು ವಿಶ್ಲೇಷಣೆಯನ್ನು ಮಾಡುವುದರ ಮೂಲಕ ಅದರ ಮೌಲ್ಯಗಳನ್ನು ಅನಾವರಣಗೊಳಿಸುವ ಪ್ರಯತ್ನ ಮಾಡಿದ್ದೇನೆ.

ಸಬಿಹಾ ಭೂಮಿಗೌಡ ಅವರು ವಿಮರ್ಶಕಿಯಾಗಿ ಕವಯಿತ್ರಿಯಾಗಿ, ಕಥೆಗಾರ್ತಿಯಾಗಿ, ಸ್ತ್ರೀಪರ ಕಾಳಜಿಯುಳ್ಳ ಚಿಂತಕಿಯಾಗಿ ಹೆಸರು ಮಾಡಿದ್ದಾರೆ. ಅಷ್ಟೇ ಅಲ್ಲದೇ ಅವರ ಸಾಹಿತ್ಯವನ್ನು ಅಧ್ಯಯನ ಮಾಡಿದಾಗ ಅವರು ಇತರ ಲೇಖಕಿಯರಿಗಿಂತ ಭಿನ್ನವಾಗಿ ಮತ್ತು ವಿಶಿಷ್ಟರಾಗಿರುವುದು ತಿಳಿಯುತ್ತದೆ.

ಸಬಿಹಾ ಭೂಮಿಗೌಡ ಅವರ ಸಾಹಿತ್ಯವು ಸಮಾಜ ಮತ್ತು ಸಂಸ್ಕೃತಿಯ ಬದಲಾವಣೆ ಹಾಗೂ ನವ ಸಮಾಜ, ಸಂಸ್ಕೃತಿಯ ಉದಯದ ಆಶಯವನ್ನು ಹೊಂದಿದೆ. ಜಾತಿ, ಧರ್ಮಗಳಾಚೆ ನಿಂತು ಸಾಹಿತ್ಯ ರಚಿಸುತ್ತಿರುವ ಇವರು ಸ್ತ್ರೀಜೀವನ, ಸಮಾಜ, ಧರ್ಮ ಇವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ಸಾಹಿತ್ಯದ ವಸ್ತು ವಿಷಯದಲ್ಲಿ ಏಕತೆ ಇದ್ದರು ಅದನ್ನು ಗ್ರಹಿಸಿ ಮಂಡಿಸುವ ರೀತಿ ಭಿನ್ನವಾಗಿರುತ್ತದೆ. ಅದಕ್ಕೆ ಸಬಿಹಾ ಅವರ ಸಾಹಿತ್ಯ ನಿದರ್ಶನವಾಗಿದೆ.

ಸಮಾಜದಲ್ಲಿ ಒಬ್ಬ ಹೆಣ್ಣುಮಗಳಾಗಿ ಜೀವನ ನಡೆಸುತ್ತಿರುವ ಸಬಿಹಾ ಭೂಮಿಗೌಡ ಅವರು ಜೀವನ ಕುರಿತು ಹೇಳುವ ಸಂದರ್ಭದಲ್ಲಿ ಬಾಹ್ಯ ಜೀವನಕ್ಕಿಂತ ಅಂತರಂಗದ ಭಾವನೆಗಳಿಗೆ, ಸಂವೇದನೆಗಳಿಗೆ ಸ್ಪಂಧಿಸಿರುವ ರೀತಿ ಮುಖ್ಯವಾಗುತ್ತದೆ. ಸಮಾಜದಲ್ಲಿ ಹೆಣ್ಣು ಶೋಷಣೆಗೆ ಒಳಗಾಗುತ್ತಿರುವುದು ತೆರೆದ ಕನ್ನಡಿಯಂತಿದೆ. ಅದನ್ನು ಸ್ತ್ರೀಪರ ಚಿಂತಕರು, ಅನೇಕ ಸಾಹಿತಿಗಳು ತಮ್ಮ ಬರವಣಿಗೆಯ ಮೂಲಕ ತಿಳಿಸುತ್ತ ಸಮಾಜದಲ್ಲಿ ಜಾಗೃತಿ ಮೂಡಿಸಿ ಬದಲಾವಣೆಗೆ ಶ್ರಮಿಸುತ್ತಿದ್ದಾರೆ. ಆದರೆ ಕಂಡೂ ಕಾಣದಂತೆ ಆಕೆ ಅನುಭವಿಸುತ್ತಿರುವ ಮಾನಸಿಕ ಯಾತನೆಯನ್ನು ಮಾತು, ಬರವಣಿಗೆಯಲ್ಲಿ ಹೇಳುವುದು ಕಷ್ಟಸಾಧ್ಯ. ಸಬಿಹಾ ಭೂಮಿಗೌಡ ಅವರ ಸಾಹಿತ್ಯವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಅವರು ಹೆಣ್ಣಿನ ಮನಸ್ಸನ್ನು ಅರಿಯುವ, ಭಾವನೆಗಳಿಗೆ ಸ್ಪಂಧಿಸಿ ಅವುಗಳ ಮೌಲ್ಯ ತಿಳಿಸಿ ಬೆಲೆ ಸಿಗುವಂತಾಗುವ ಪ್ರಯತ್ನ ಮಾಡಿರುವುದು ನಿಜಕ್ಕೂ ಪ್ರಗತಿಪರ ಹೆಜ್ಜೆಯಾಗಿದೆ. ಸಣ್ಣ ಮತ್ತು ಸೂಕ್ಷ್ಮ ವಿಚಾರಗಳ ಎಳೆಯು ಅವರ ಹೆಚ್ಚು ಕಥೆ, ಕವನಗಳ ವಸ್ತುವಾಗಿವೆ. ಹೊರ ದುಡಿಮೆಯ ಜೊತೆಗೆ ಅಡಿಗೆ ಮನೆಯ ಜವಾಬ್ದಾರಿ, ಅಲ್ಲಿ ಆಕೆ ಅನುಭವಿಸುವ ಬೇಸರ, ನೋವು ಸಂಕಟಗಳನ್ನು ಚಿತ್ರಿಸುತ್ತಾರೆ. ಸಮಾಜ ಅಡಿಗೆ ಮನೆ ಎಂದರೆ ಅದರ ಒಡತಿ ಹೆಣ್ಣು ಎಂದೇ ಬಿಂಬಿಸಿಬಿಟ್ಟಿದೆ. ಆದರೆ ಅಲ್ಲಿ ಆಕೆಯ ಇಷ್ಟ ಕಷ್ಟಗಳನ್ನು ಕೇಳುವವರಿಲ್ಲ ಎಂದು ಪ್ರತಿಪಾದಿಸುತ್ತಾ ಲಿಂಗತಾರತಮ್ಯ ನೀತಿಯನ್ನು

ಎತ್ತಿಹಿಡಿದಿರುವುದು ಆ ಮೂಲಕ ಪುರುಷಪ್ರಧಾನ ವ್ಯವಸ್ಥೆಗೆ ಅರಿವು ಮೂಡಿಸುವ ಕೆಲಸ ಮಾಡಿರುವುದು ತಿಳಿಯುತ್ತದೆ.

ಸಮಾಜ ಜೀವಿಯಾದ ಮನುಷ್ಯನಿಗೆ ಜೀವನದಲ್ಲಿ ಸಂಬಂಧಗಳು ಬಹಳ ಮುಖ್ಯವಾಗುತ್ತವೆ. ಸಂಬಂಧಗಳು ಉತ್ತಮವಾಗಿದ್ದಾಗ ಮನುಷ್ಯ ಸುಖಿಯಾಗಿರುತ್ತಾನೆ. ಅದನ್ನು ಸಬಿಹಾ ಭೂಮಿಗೌಡ ಅವರು ಮುಖ್ಯವೆಂದು ಭಾವಿಸಿ ಹೆಚ್ಚು ಒತ್ತು ನೀಡಿರುವುದು ಕಂಡುಬರುತ್ತದೆ. ಜಾತಿ ಮತ್ತು ಧರ್ಮದ ನೆಲೆಯ ಆಚೆ ನಿಂತು ಜೀವನ ಮತ್ತು ಸಮಾಜವನ್ನು ನೋಡುವ ಸಬಿಹಾ ಅವರಿಗೆ ಪರಸ್ಪರರಲ್ಲಿ ಪ್ರೀತಿ, ವಿಶ್ವಾಸ, ಸ್ನೇಹ, ನಂಬಿಕೆಗಳು ಮುಖ್ಯವಾಗಿ ಕಾಣುತ್ತವೆ. ಹಾಗಾಗಿಯೇ ಅವರು ಸಮಾಜದಲ್ಲಿರುವ ಎಲ್ಲಾ ಜಾತಿ, ಧರ್ಮದವರು ಅದನ್ನು ಮರೆತು ಒಂದಾಗಿ ಬಾಳುವ, ಬಾಳುತ್ತಿರುವ ಅಂಶಗಳನ್ನು ಚಿತ್ರಿಸಿದ್ದಾರೆ. ಜಾತಿಯ ಭೂತ, ಕೋಮಿನ ದಳ್ಳುರಿ ಹೆಚ್ಚಿರುವ ಇಂದಿನ ಸಂದರ್ಭದಲ್ಲಿ ಸಬಿಹಾ ಅವರು ಚಿತ್ರಿಸಿರುವ 'ಸಮಾಜ'ದ ರಚನೆಯ ಅವಶ್ಯಕತೆ ಇದ್ದು, ಅದರ ಸಾಧ್ಯತೆಯ ದಾರಿ ತೋರಿಸಿರುವುದು ಅಧ್ಯಯನದಿಂದ ತಿಳಿದುಬರುತ್ತದೆ.

ಸಮಾಜ ಸ್ವಸ್ಥವಾಗಿರಲು ಅಲ್ಲಿನ ಕುಟುಂಬಗಳ ಪಾತ್ರ ಮುಖ್ಯ ಕುಟುಂಬದಲ್ಲಿ ಗಂಡ-ಹೆಂಡತಿಯ ಪಾತ್ರವೂ ಮುಖ್ಯವಾಗಿರುತ್ತದೆ. ಅವರಲ್ಲಿ ಪ್ರೀತಿ, ಸಹಕಾರ, ಅನ್ಯೋನತೆ, ಸಮಾನತೆ ಅಂಶಗಳು ಇರಬೇಕು. ಮನುಷ್ಯ ಭಾವನಾ ಜೀವಿ. ಗಂಡು-ಹೆಣ್ಣು ಇಬ್ಬರ ಭಾವನೆಗಳೂ ಮುಖ್ಯ ಆದರೆ ಅಂದು ಮತ್ತು ಇಂದು ಪುರುಷ ತನ್ನ ಮೂಗಿನ ನೇರಕ್ಕೆ ಮಾತ್ರ ಯೋಚಿಸುತ್ತಾ, ಹೆಣ್ಣು ಎಂದರೆ ತಾನು ಹೇಳಿದಂತೆ ಕೇಳಿಕೊಂಡಿರುವ ಜೀವಿ ಎಂದು ಭಾವಿಸಿದ್ದಾನೆ. ಅದು ಬದಲಾಗಿ ಆತ ಆಕೆಯ ಮನಸ್ಸನ್ನು ಅರ್ಥಮಾಡಿಕೊಂಡು ಭಾವನೆಗಳಿಗೆ ಸ್ಪಂಧಿಸಿದಾಗ ಮಾತ್ರ ದಾಂಪತ್ಯಕ್ಕೆ ಅರ್ಥ ಎಂಬುದು ಅಧ್ಯಯನದಿಂದ ತಿಳಿಯುತ್ತದೆ.

ಧರ್ಮ ಮನುಷ್ಯ ಕಟ್ಟಿಕೊಂಡದ್ದು, ಅದಕ್ಕೆ ಬದ್ಧನಾಗಿ ಜೀವಿಸುತ್ತಿದ್ದಾನೆ. ಆದರೆ ಅದು ಅತಿಯಾಗದೆ ಸರ್ವಧರ್ಮ ಸಮಾನತೆಯ ತತ್ವ ನೆಲೆಯಾಗಬೇಕು ಎಂದು ಆಶಿಸಿದ್ದಾರೆ. ಹೊಸ ಸಂಸ್ಕೃತಿಯೊಂದರ ಉದಯದ ಕನಸು ಕಂಡಿರುವುದು ಅದ್ಭುತ ಎನಿಸುತ್ತದೆ. ಅಂಥ ಸಮಾಜ ಮತ್ತು ಸಂಸ್ಕೃತಿಯ ನಿರ್ಮಾಣದ ಕಡೆಗೆ ಅವರ ಸಾಹಿತ್ಯ ನಮ್ಮನ್ನು ಕೊಂಡೊಯ್ಯುತ್ತದೆ.

ಸಬಿಹಾ ಅವರ ಚಿಂತನೆ ಮತ್ತು ವಿಮರ್ಶೆಗಳು ಸಹ ಓದುಗರ ಮೆಚ್ಚುಗೆ ಪಡೆದಿದ್ದು, 'ಉತ್ತಮ ವಿಮರ್ಶಕಿ' ಎಂಬ ಸ್ಥಾನವನ್ನು ನೀಡಿವೆ. ಸಾಹಿತ್ಯಿಕ ಮತ್ತು ಸಾಮಾಜಿಕ ವಿಮರ್ಶೆಯಲ್ಲಿ ತೊಡಗಿರುವ ಅವರು ಹೆಚ್ಚಾಗಿ ಸ್ತ್ರೀಪರ ಒಲವು ಹೊಂದಿದ್ದು, ಅವಳ ಸ್ಥಾನಮಾನ ಕುರಿತು ಚಿಂತಿಸುತ್ತಾರೆ. ಸಮಾಜದಲ್ಲಿ ಸಕ್ರಿಯವಾಗಿ ತೊಡಗಿದ ಅವರು ಅನೇಕ ಯೋಜನಾ ವರದಿಗಳನ್ನು ಸಿದ್ಧಪಡಿಸಿದ್ದು, ಅವುಗಳಲ್ಲಿ ಲಿಂಗಸಮಾನತೆ ಕುರಿತು ವರದಿ ನೀಡಿದ್ದಾರೆ. ಅವಿವಾಹಿತ ಮಹಿಳೆಯರ ಸಾಮಾಜಿಕ ಸ್ಥಿತಿಗತಿ ಕುರಿತು ವರದಿ ನೀಡಿದ್ದಾರೆ. ಜೊತೆಗೆ ಅವರ ಸಾಂಸ್ಕೃತಿಕ ಕೊಡುಗೆಯನ್ನು ಕುರಿತು ಹೇಳಿದ್ದಾರೆ. ಈ ಎಲ್ಲವೂ ಮಹಿಳಾ ಪರವಾಗಿದ್ದು, ಅವರ ಜೀವನ ಉತ್ತಮ ಸ್ಥಿತಿಯನ್ನು ತಲುಪಲು ಪೂರಕವಾಗಿದೆ ಎಂಬುದು ಅಧ್ಯಯನದಿಂದ ಕಂಡುಬರುತ್ತದೆ.

ಒಟ್ಟಾರೆಯಾಗಿ ಸಬಿಹಾ ಭೂಮಿಗೌಡ ಅವರು ಕಥೆ, ಕವನ, ಪ್ರಬಂಧ, ವ್ಯಕ್ತಿಚಿತ್ರ, ವಿಮರ್ಶೆ, ಯೋಜನಾ ವರದಿ, ಸಂಪಾದನೆ ಮುಂತಾದ ಹಲವು ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದು, ಅವುಗಳು ಪ್ರಸ್ತುತ ಸಮಾಜದ ಬದಲಾವಣೆ ಮತ್ತು ಪ್ರಗತಿಗೆ ಪೂರಕವಾಗಿವೆ. ಅವುಗಳಲ್ಲಿ ಹೆಣ್ಣಿನ ಜೀವನ, ಮಾನಸಿಕ ನೋವು, ಭಾವನೆಗಳ ಪ್ರಪಂಚದ ಚಿತ್ರಣವಿದೆ. ಧರ್ಮ, ಜಾತಿಯ ಚೌಕಟ್ಟನ್ನು ಮೀರಿದ ಸಮಾಜದ ರಚನೆಯ ಜೊತೆಗೆ ನವ ಸಂಸ್ಕೃತಿಯ ಉದಯದ ಆಶಯ ಮತ್ತು ಅವಶ್ಯಕತೆ ಅವರ ಸಾಹಿತ್ಯದ ಮುಖ್ಯ ಧೋರಣೆಯಾಗಿರುವುದು ಸಾಹಿತ್ಯದ ವಿಶ್ಲೇಷಣೆಯಿಂದ ತಿಳಿಯುತ್ತದೆ. ಹೀಗೆ ಮೌಲ್ಯಯುತವಾದ ಸಾಹಿತ್ಯ ಕೃತಿಗಳನ್ನು ರಚಿಸುತ್ತಿರುವ ಅವರಿಂದ ಇನ್ನೂ ಉತ್ತಮ ಕೃತಿಗಳು ಹೊರ ಬರುತ್ತವೆ ಎಂಬ ನಿರೀಕ್ಷೆಯಿದೆ.

ಗ್ರಂಥ ಋಣ

ಸಬಿಹಾ ಭೂಮಿಗೌಡ ಅವರ ಸಾಹಿತ್ಯ ಕೃತಿಗಳು

೧.	ಕಡಲ ತಡಿಯ ಮನೆ	ಲಡಾಯಿ ಪ್ರಕಾಶನ, ಗದಗ	೨೦೦೯
೨.	ಗೆರೆಗಳು	ಸಿರಿವರ ಪ್ರಕಾಶನ, ಬೆಂಗಳೂರು	೨೦೧೨
೩.	ಚಿತ್ತಾರ	ಲೋಹಿಯಾ ಪ್ರಕಾಶನ, ಬಳ್ಳಾರಿ	೨೦೦೫
೪.	ನುಡಿಹೊನಲು	ಕರ್ನಾಟಕ ಸಂಘ (ರಿ), ಮಂಡ್ಯ, ಎಂ.ಎಲ್ ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ ಮಂಡ್ಯ	೨೦೧೦
೫.	ಲೀಲಾಬಾಯಿಕಾಮತ್	ಸ್ವಾಗತ ಸಮಿತಿ, 74ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ	೨೦೦೭
೬.	ಕುಡ್ವಿ ವಾಸುದೇವ ಶೆಣೈ	ಕನ್ನಡ ಸಂಘ, ಕಾಂತಾವರ, ಉಡುಪಿ ಜಿಲ್ಲೆ	೨೦೦೮
೭.	ಬಗೆ	ಲೋಹಿಯ ಪ್ರಕಾಶನ, ಬಳ್ಳಾರಿ	೨೦೦೧
೮.	ನಿಲುಮೆ	ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು	೨೦೦೫
೯.	ನುಡಿಗವಳ	ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು	೨೦೦೯
೧೦.	ಅನುಸಂಧಾನ	ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಗುಲ್ಬರ್ಗ,	೨೦೧೧
೧೧.	ಅವಿವಾಹಿತ ಮಹಿಳೆಯರ ಸಮಾಜೋ ಸಾಂಸ್ಕೃತಿಕ ಅಧ್ಯಯನ	ಗಿರೀಶ್ ಎಂಟರ್ ಪ್ರೈಸಸ್, ತ್ಯಾಗರಾಜ ನಗರ, ಬೆಂಗಳೂರು.	೨೦೦೮
೧೨.	ಲಿಂಗತ್ವ ಸಮನ್ಯಾಯದೆಡೆಗೆ	ಕರ್ನಾಟಕ ಸಂಘ(ರಿ) ಮಂಡ್ಯ	೨೦೦೮
೧೩.	ಸಾಹಿತ್ಯದ ಸಂಘರ್ಷದ ನೆಲೆಗಳು	ಪ್ರಸಾರಾಂಗ ಕ.ರಾ.ಮು.ವಿಶ್ವ ವಿದ್ಯಾನಿಲಯ	

ಪರಾಮರ್ಶನ ಗ್ರಂಥಗಳು

೧೪.	ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ	ಸಂ. ಎಚ್.ಎಸ್. ಶ್ರೀಮತಿ– ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾನಿಲಯ ಹಂಪಿ,	೨೦೦೬
೧೫.	ಹೊಸಗನ್ನಡ ಸಾಹಿತ್ಯ ಚರಿತ್ರೆ	ಎಲ್.ಎಸ್. ಶೇಷಗಿರಿರಾವ್– ಅಂಕಿತ ಪ್ರಕಾಶನ, ಬೆಂಗಳೂರು	೨೦೦೬
೧೬.	ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ	ವಿವಿಧ ಲೇಖಕರು– ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು	
೧೭.	ಸಾಹಿತ್ಯ ವಿಮರ್ಶೆ	ಸಿ.ಎನ್. ರಾಮಚಂದ್ರನ್, ಕರ್ನಾಟಕ ಸಾಹಿತ್ಯ	೨೦೦೮

ಅಕಾಡೆಮಿ, ಬೆಂಗಳೂರು

೧೮.	ಸ್ತ್ರೀವಾದ	ಡಾ॥ ಬಿ.ಎನ್. ಸುಮಿತ್ರಬಾಯಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು	೨೦೦೬
೧೯.	ಹೆಣ್ಣು ಮತ್ತು ಭಾಷೆ	ಡಾ॥ ಎಚ್.ಎಸ್. ಶ್ರೀಮತಿ, ಕನ್ನಡ ವಿಶ್ವ ವಿದ್ಯಾನಿಲಯ ಹಂಪಿ,	೨೦೦೬
೨೦.	ರಾಜಕೀಯ ಕಥೆಗಗಳು	ಓಲ್ಗಾ, ಅನು. ಜಿ. ವೀರಭದ್ರ ಗೌಡ	೨೦೧೦
೨೧.	ಇದು ಮಾನುಷಿಯ ಓದು	ಮಹೇಶ್ವರಿ. ಯು, ಶಿವರಾಮ ಕಾರಂತ ಅಧ್ಯಯನ ಕೇಂದ್ರ ಪುತ್ತೂರು (ದ.ಕ)	೨೦೦೧
೨೨.	ಶತಮಾನದ ಸಣ್ಣ ಕಥೆಗಳ ಸಮೀಕ್ಷೆ	ಡಾ॥ ಕರೀಗೌಡ, ಬೀಚನಹಳ್ಳಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು	೨೦೦೩
೨೩.	ಯುಗಧರ್ಮ ಹಾಗೂ ಸಾಹಿತ್ಯ ದರ್ಶನ	ಕೀರ್ತಿನಾಥ ಕುರ್ತಕೋಟಿ, ಕುರ್ತುಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ	೨೦೦೮
೨೪.	ಕ್ರೌಂಚ ಪಕ್ಷಿಗಳು	ವೈದೇಹಿ, ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ,	೨೦೧೨
೨೫.	ಶಕ್ತಿ-ಶಾರದೆಯ ಮೇಳ	ಡಿ.ಆರ್ ನಾಗರಾಜು, ಅಕ್ಷರ ಪ್ರಕಾಶನ ಹೆಗ್ಗೋಡು	೨೦೦೮
೨೬.	ಬೇಂದ್ರೆ ಕಾವ್ಯ	ರಂ ಶ್ರೀ ಮುಗಳಿ, ಅಭಿನವ, ಬೆಂಗಳೂರು	೨೦೦೯
೨೭.	ಮಹಿಳೆ ಮತ್ತು ಧರ್ಮ	ಡಾ॥ ಶಿವಾನಂದ, ಎಸ್, ವಿರಕ್ತಮಠ, ಕನ್ನಡ ವಿಶ್ವ ವಿದ್ಯಾನಿಲಯ ಹಂಪಿ,	೨೦೧೦
೨೮.	ವಿಮರ್ಶೆಯ ಪರಿಭಾಷೆ	ಓ.ಎಲ್. ನಾಗಭೂಷಣ ಸ್ವಾಮಿ, ಕನ್ನಡ ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು	೨೦೧೧
೨೯.	ಸಿ.ಪಿ.ಕೆ ಸಮಗ್ರ ಕವಿತೆ	ಸಂವಹನ ಮೈಸೂರು	೨೦೦೦
೩೦.	ಕನ್ನಡ ಸಾಹಿತ್ಯದ ವಾಗ್ವಾದಗಳು	ಡಾ॥ ರಹಮತ್ ತರಿಕೇರಿ, ಕನ್ನಡ ವಿಶ್ವ ವಿದ್ಯಾನಿಲಯ ಹಂಪಿ,	೨೦೧೨